ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

13-14

ಸಂಪುಟ 22 ಸಂಚಿಕೆ 14-15 ಮಾರ್ಚ್ 22 ಏಪ್ರಿಲ್ 4, 1999 ರೂ. 2.00

ಜನಸಾಮಾನ್ಯರಿಗೆ ದುಸ್ವಪ್ನವಾದ ಬಿಜೆಪಿಯ 'ಸುರಾಜ್ಯ'

ಬಯಲಿಗೆಳೆಯಲು ರಾಜ್ಯಾದ್ಯಂತ ಪ್ರಚಾರ-ಪ್ರಕ್ಷೋಭೆ: ಏಪ್ರಿಲ್ 1-15

ಬಿಜೆಪಿ ನೇತೃತ್ವದ ಸಮಿಶ್ರ ಸರ್ಕಾರದ ಒಂದು ವರ್ಷದ ಆಡಳಿತವನ್ನು ಬಿಜೆಪಿ ರಾಷ್ಟ್ರಾದ್ಯಂತ ಆಚರಿಸುತ್ತಿದೆ. ಕರ್ನಾಟಕದಲ್ಲೂ ಬೆಂಗಳೂರು, ಮೈಸೂರುಗಳಲ್ಲಿ ಅಡ್ವಾಣಿ, ಪ್ರಮೋದ್ ಮಹಾಜನ್, ಅನಂತಕುಮಾರ್‌ರವರಂತಹ ಪ್ರಮುಖ ಸಚಿವರು ಭಾಗವಹಿಸಿದ್ದಾರೆ. ಆದರೆ ಈ ಆಚರಣೆಯಲ್ಲಿ ಸಮಿಶ್ರ ಸರ್ಕಾರದ ಮಿತ್ರ ಪಕ್ಷಗಳ ಸುಳಿವೇ ಇಲ್ಲ. ಕೆಲವಂತೂ ಘೋಷಿತವಾಗಿಯೇ ದೂರವಾಗಿ ಉಳಿದಿವೆ. ಈ ರೀತಿಯ ಆಚರಣೆಯೇ ಈ ಸರ್ಕಾರದ ಸ್ವರೂಪವನ್ನು ಬಯಲಿಗೆಳೆಯುತ್ತಿದೆ.

ಈ ಸರ್ಕಾರ ಅಧಿಕಾರ ನಡೆಸಿರುವ ಒಂದು ವರ್ಷ ದೇಶಕ್ಕೆ ಅನರ್ಥ, ವಿನಾಶ ತಂದ ಒಂದು ವರ್ಷ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಇದನ್ನು ಜನಗಳ ನಡುವೆ ಬಯಲಿಗೆಳೆಯಲು ಎರಡು ವಾರಗಳ ಪ್ರಚಾರ-ಪ್ರಕ್ಷೋಭೆಗೆ ಕರೆ ನೀಡಿದೆ. ಮಾರ್ಚ್ 25 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಕರ್ನಾಟಕ ರಾಜ್ಯ ಸಮಿತಿ ಏಪ್ರಿಲ್ 1 ರಿಂದ 15 ರವರೆಗೆ ರಾಜ್ಯಾದ್ಯಂತ ಪ್ರಚಾರ-ಪ್ರಕ್ಷೋಭೆ ನಡೆಸಲು ಕರೆ ನೀಡಿದೆ.

ಅಡ್ವಾಣಿಯವರು ಮೈಸೂರಿನಲ್ಲಿ ಮಾತನಾಡುತ್ತಾ ತಮ್ಮ ಸರ್ಕಾರ ಭ್ರಷ್ಟಾಚಾರರಹಿತ, ಹಗರಣ ರಹಿತ, ದಂಗೆ ರಹಿತ ಸರ್ಕಾರ ಎಂದು ಹೇಳುತ್ತಿದ್ದಾಗಲೇ ಬೆಂಗಳೂರಿನಲ್ಲಿ ವಿ.ಹೆಚ್.ಪಿ.ಯ ಮುಖಂಡರು ಸಭೆ ಸೇರಿ ಬಾಬಾಬುಡನ್ ಗಿರಿ ವಿವಾದವನ್ನು ತೀವ್ರಗೊಳಿಸುವ ಯೋಜನೆ ಹಾಕಿದ್ದಾರೆ.

ಗುಜರಾತಿನಲ್ಲಿ ಕ್ರೈಸ್ತರ ಮೇಲೆ ನಿರಂತರ ಧಾಳಿ, ಮಧ್ಯಪ್ರದೇಶದಲ್ಲಿ ಕ್ರೈಸ್ತ ಸನ್ಯಾಸಿನಿಯರ ಮಾನಭಂಗ, ಒರಿಸ್ಸಾದಲ್ಲಿ ಕ್ರೈಸ್ತ ಪಾದ್ರಿಯ ಕಗ್ಗೊಲೆ, ಕರ್ನಾಟಕದಲ್ಲಿಯೂ ಕ್ರೈಸ್ತರ ಮೇಲೆ ಬೆದರಿಕೆ ಹಲ್ಲೆಗಳು ನಡೆದು ದೇಶದ ಜನರನ್ನು ಆತಂಕಕ್ಕೆ ದೂಡಿರುವಾಗಲೇ, ಬಾಬಾಬುಡನ್ ಗಿರಿ ಯಾತ್ರೆ, ಸುರತ್ಕಲ್, ಪುತ್ತೂರು ಕೋಮು ದಂಗೆಗಳು ಇನ್ನೂ ಜನಮಾನಸದಲ್ಲಿ ಹಸಿಯಾಗಿರುವಾಗಲೇ ಅಡ್ವಾಣಿಯವರು ಉದುರಿಸುತ್ತಿರುವ ಅಣಿಮುತ್ತುಗಳು ಯಾರನ್ನೂ ಮೋಸಗೊಳಿಸಲಾರವು.

ಬಿ.ಜೆ.ಪಿ. ಮಂತ್ರಿಗಳು ರಾಷ್ಟ್ರೀಯ ಅಜೆಂಡಾದ ಮಾತನ್ನಾಡುತ್ತಿರುವಾಗಲೇ ಆರ್.ಎಸ್.ಎಸ್. , ವಿ.ಹೆಚ್.ಪಿ., ಭಜರಂಗದಳ, ಹಿಂದೂ ಜಾಗರಣಾ ವೇದಿಕೆಗಳು ತಮ್ಮ ಚಿಂತನ ಬೈಠಕ್‌ಗಳಲ್ಲಿ ಸಮಾವೇಶಗಳಲ್ಲಿ ಗುಪ್ತ ಅಜೆಂಡಾವನ್ನು ರೂಪಿಸುತ್ತಿವೆ.

ಇಂತಹ ಸಂದರ್ಭದಲ್ಲಿ ಶಿಕ್ಷಣದಲ್ಲಿ ಕೋಮುವಾದೀಕರಣದ ಪ್ರಯತ್ನ, ಸರ್ಕಾರಿ ಮಾಧ್ಯಮಗಳ ಸ್ವಾಯತ್ತತೆಯನ್ನು ನಾಶಮಾಡಿ ಕೋಮುವಾದಿ ಪ್ರಚಾರದ ಸಾಧನವಾಗಿ ಬಳಸಿಕೊಳ್ಳುತ್ತಿರುವುದು, ಗೃಹಮಂತ್ರಿಗಳೇ ಭಜರಂಗದಳ, ವಿಶ್ವಹಿಂದೂ ಪರಿಷತ್‌ಗಳಲ್ಲಿ ದೋಷವಿಲ್ಲ ಎಂದು ಹೇಳುವ ಮೂಲಕ ಇಡೀ ದೇಶದ ಪೋಲೀಸ್ ಪಡೆಗೆ ಸೂಚನೆ ನೀಡುತ್ತಿರುವುದು, ಗುಜರಾತಿನಲ್ಲಿ ಪೋಲೀಸ್ ಪಡೆಯಿಂದಲೇ ಅಲ್ಪಸಂಖ್ಯಾತರ ಜನಗಣತಿ ಮುಂತಾದ ಕ್ರಮಗಳು, ನಾವಿಕದಳದ ಮುಖ್ಯಸ್ಥ ವಿಷ್ಣು ಭಾಗವತ್‌ರವರ ಹಠಾತ್ ವಜಾ ಇವು ದೇಶದ ಆಡಳಿತ ಯಂತ್ರವನ್ನು ಕೋಮುವಾದೀಕರಣಗೊಳಿಸುವ ಪ್ರಯತ್ನದ ಭಾಗಗಳಾಗಿವೆ.

ಇವೆಲ್ಲವುಗಳು ಬಿಜೆಪಿಯಂತಹ ಕೋಮುವಾದಿ ಪಕ್ಷ ಆಡಳಿತಕ್ಕೆ ಬಂದರೆ ದೇಶಕ್ಕೆ ಹಾಗೂ ಆಡಳಿತಕ್ಕೆ ಉಂಟಾಗುವ ಅಪಾಯದ ಬಗ್ಗೆ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ನೀಡುತ್ತಿದ್ದ ಎಚ್ಚರ ವಾಸ್ತವಕ್ಕಿಳಿದಂತಾಗಿದೆ ಎಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ.

ಇತ್ತೀಚೆಗೆ ಮಂಡಿಸಲಾದ ಬಜೆಟ್ ದೇಶದ ದೊಡ್ಡ ಬಂಡವಾಳಗಾರರು ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ 8,000 ಕೋಟಿ ರಿಯಾಯಿತಿ ನೀಡಿ ಅದರ ಹೊರೆಯನ್ನು ಜನಸಾಮಾನ್ಯರ ಮೇಲೆ ಹೇರಿದೆ. ಬಿಜೆಪಿ ಸರ್ಕಾರದ ಆರ್ಥಿಕ ನೀತಿಗಳ ಫಲವಾಗಿ ದೇಶದಲ್ಲಿ ಕೈಗಾರಿಕಾ ಬೆಳವಣಿಗೆಗೆ ದೊಡ್ಡ ಆತಂಕ ಅದರಲ್ಲಿಯೂ ಸಾರ್ವಜನಿಕ ಉದ್ಯಮ ಗಳ ನಾಶಕ್ಕೆ ಕಾರಣವಾಗಿದೆ. ಆಮದು- ರಫ್ತು ನೀತಿಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸಣ್ಣ ಕೈಗಾರಿಕೆಗಳು ಸಂಕಟಕ್ಕೆ ಈಡಾಗಿವೆ.

ಬೆಲೆ ಏರಿಕೆ ಅದರಲ್ಲಿಯೂ ಆಹಾರವಸ್ತುಗಳ ಬೆಲೆ ಏರಿಕೆ ಕೇವಲ ಎಂಟು ತಿಂಗಳಲ್ಲಿ ಶೇ 18 ರಷ್ಟಾಗಿದೆ.

ಹೀಗೆ ಅಡ್ವಾಣಿಯವರು ಯಾವುದನ್ನು 'ಸುರಾಜ್ಯ' ಎಂದು ಮೈಸೂರಿನಲ್ಲಿ ಕರೆದರೋ ಅದು ದೇಶದ ಜನ ಸಾಮಾನ್ಯರಿಗೆ ಒಂದು ದೊಡ್ಡ ದುಸ್ವಪ್ನವಾಗಿದೆ. ಅವರ ನೆಮ್ಮದಿ ಹಾಗೂ ಜೀವನ ಮಟ್ಟದ ನಾಶದ ದಾರಿ ತೆಗೆದಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಜನವಿರೋಧಿ ಹೊಸ ಆರ್ಥಿಕ ನೀತಿಯ ಹಾದಿಯನ್ನೇ ತುಳಿದ ರಾಜ್ಯ ಬಜೆಟ್

ಜನತಾದಳ ಸರ್ಕಾರದ 5ನೇಯ ಬಜೆಟ್ ಕೇಂದ್ರ ಸರ್ಕಾರಗಳು ಅನುಸರಿಸುತ್ತಿರುವ ಹೊಸ ಆರ್ಥಿಕ ನೀತಿಯ ಹಾದಿಯನ್ನೇ ತುಳಿದು ರಾಜ್ಯದ ಜನತೆಯ ಸಂಕಟಕ್ಕೆ ತನ್ನ ಪಾಲನ್ನೂ ಸೇರಿಸುವಂತಾದ್ದು. ದೇಶದಲ್ಲಿನ ಆರ್ಥಿಕ ಹಿಂಜರಿತ ಹಾಗೂ ಕೈಗಾರಿಕಾ ಬೆಳವಣಿಗೆಯ ಹಿನ್ನಡೆಯಿಂದ ರಾಜ್ಯದ ಆದಾಯ ಕಡಿಮೆಯಾಯಿತೆಂದು ಬಜೆಟ್ ಹೇಳಿದರೂ ಈ ಹಿಂಜರಿತಕ್ಕೆ ಕಾರಣ ಗಳೇನು ಎಂಬ ಕಡೆಗೆ ದೃಷ್ಟಿ ಹರಿಸಿಲ್ಲ. ರಾಜ್ಯದ ಆರ್ಥಿಕ ಆರೋಗ್ಯದ ಬಗ್ಗೆ ಹೆಚ್ಚು ಮಾತುಗಳನ್ನಾಡಿದರೂ ಜನರ ಆರ್ಥಿಕ ಪರಿಸ್ಥಿತಿಯ ಡೋಲಾಯಮಾನ ಪರಿಸ್ಥಿತಿಯನ್ನು ವಿವರಿಸುವ ಕರ್ತವ್ಯವನ್ನು ಅದು ಮರೆತಿದೆ. ಬೆಲೆ ಏರಿಕೆಯಿಂದಾಗಿ ಕೊಳ್ಳುವ ಶಕ್ತಿಯಿಲ್ಲದೆ ಕೈಗಾರಿಕೆಗಳ ಹಿನ್ನಡೆಯಾಗಿದೆ ಎಂಬ ಸತ್ಯವನ್ನು ಮರೆಮಾಡಿದೆ.

ಬಿ.ಜೆ.ಪಿ. ಸರ್ಕಾರದ ಇತ್ತೀಚಿನ ಬಜೆಟ್ ಕೇಂದ್ರ-ರಾಜ್ಯ ಆರ್ಥಿಕ ಸಂಬಂಧ ಗಳನ್ನು ಮತ್ತಷ್ಟು ಹದಗೆಡಿಸುತ್ತದೆ. ಡೀಸೆಲ್ ಮೇಲಿನ ಸರ್‌ಚಾರ್ಜ್, ಸಣ್ಣ ಉಳಿತಾಯದ ಮೇಲಿನ ಬಡ್ಡಿದರಗಳ ಕುಸಿತ ಇವನ್ನು ಎತ್ತಿಹೇಳಿದರೂ ಕೇವಲ ಬಜೆಟ್ ಭಾಷಣದಲ್ಲಿ ನಮೂದಿಸಿದರೆ ಸಾಲದು, ಜನರ ಬಳಿಗೆ ತೆಗೆದುಕೊಂಡು ಹೋಗಿ ಈ ನೀತಿಗಳ ಬದಲಾವಣೆಗೆ ಪ್ರಯತ್ನಿಸಬೇಕು ಎಂಬುದನ್ನು ಜನತಾದಳ ಹಾಗೂ ಸರ್ಕಾರ ತಿಳಿದುಕೊಳ್ಳಬೇಕಾಗಿದೆ. ಶಿಕ್ಷಣಕ್ಕೆ ಅದರಲ್ಲಿಯೂ ಶಿಕ್ಷಕರ ನೇಮಕಾತಿ, ಕಟ್ಟಡಗಳು, ಹಾಸ್ಟೆಲ್‌ಗಳಿಗೆ ಹೆಚ್ಚಿನ ಗಮನ ಹಾಗೂ ವಿದ್ಯುತ್ ನೀರಾವರಿಗಳಲ್ಲಿ ಹೆಚ್ಚಿನ ಹಣಹೂಡಿಕೆ ಮೆಚ್ಚಬಹುದಾದದ್ದು. ಆದರೆ ಅದೇ ಸಂದರ್ಭದಲ್ಲಿ ನೀರಾವರಿ, ವಿದ್ಯುತ್ ಕಾಮಗಾರಿಗಳಲ್ಲಿ ತೀವ್ರ ಹಣಸೋರಿಕೆ, ಹಣ ವೆಚ್ಚ ಮಾಡಿದ ಪ್ರಮಾಣಕ್ಕನುಗುಣವಾಗಿ ಸಂಪತ್ತು ನಿರ್ಮಾಣವಾಗದೆ ಇರುವುದಕ್ಕೆ ಕಾರಣವಾಗಿದೆ.

ರಾಜ್ಯ ಸಾರ್ವಜನಿಕ ವಲಯದ ಖಾಸಗೀಕರಣ, ಸ್ವಯಂ ನಿವೃತ್ತಿ ಯೋಜನೆ, ಇತ್ಯಾದಿಗಳು, ವಿದ್ಯುತ್ ತಯಾರಿಕೆ ಹಂಚಿಕೆಗಳ ಖಾಸಗೀಕರಣ ಯೋಜನೆಗಳು ರಾಜ್ಯದ ಜನ ಸಮುದಾಯಕ್ಕೆ ಮುಂದಿನ ದಿನಗಳಲ್ಲಿ ದೊಡ್ಡ ಸಂಕಟಗಳನ್ನು ತರಲಿವೆ.

ರಾಜ್ಯದ ಜನತೆ ಬಜೆಟ್‌ನಲ್ಲಿ ಒಳಗೊಂಡ ಈ ನೀತಿಗಳ ಬಗ್ಗೆ ಪ್ರಜ್ಞಾವಂತರಾಗಿ ಸರ್ಕಾರ ತನ್ನ ನೀತಿಗಳನ್ನು ಬದಲಾಯಿಸುವಂತೆ ಒತ್ತಡ ಹೇರಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ಎನ್.ಪಿ.ಎಂ.ಓ. ಕರೆ

"ರಾಷ್ಟ್ರವ್ಯಾಪಿ ಪ್ರಚಾರ ಮಾಸ ಆಚರಿಸಿ"

ಮಾರ್ಚ್ 10 ರಂದು ಸಭೆ ಸೇರಿದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ(ಎನ್‌ಪಿಎಂಓ) ಒಂದು ಕಾರ್ಯಾಚರಣೆಯ ಕಾರ್ಯಕ್ರಮವನ್ನು ರೂಪಿಸಿದೆ.

ಎನ್.ಪಿ.ಎಂ.ಓ.ದ ಎಲ್ಲಾ ಘಟಕಗಳ ಅಂದರೆ ಕಾರ್ಮಿಕ ಸಂಘಗಳು, ರೈತ ಸಂಘಟನೆಗಳು, ಯುವಜನ, ವಿದ್ಯಾರ್ಥಿ, ಮಹಿಳಾ ಸಂಘಟನೆಗಳು ಮತ್ತು ಉದ್ದಿಮೆಯ ರಾಷ್ಟ್ರೀಯ ಒಕ್ಕೂಟಗಳ ಪ್ರತಿನಿಧಿಗಳು ಸಿಐಟಿಯು ಕಚೇರಿಯಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದರು. ಎಐಟಿಯುಸಿ ಅಧ್ಯಕ್ಷ ಕೆ.ಆರ್. ಮಹೇಂದ್ರ ಅಧ್ಯಕ್ಷತೆ ವಹಿಸಿದ್ದರು.

ಪೇಟೆಂಟ್ ಮತ್ತು ವಿಮಾ ಮಸೂದೆಗಳ ವಿರುದ್ಧ ಫೆಬ್ರವರಿ 22 ಪ್ರತಿಭಟನಾ ಕಾರ್ಯಕ್ರಮವನ್ನು ಜಾರಿಗೊಳಿಸಿದ್ದಕ್ಕೆ ಎಲ್ಲಾ ಸಾಮೂಹಿಕ ಸಂಘಟನೆಗಳನ್ನು ಸಭೆ ಅಭಿನಂದಿಸಿತು.

ಬಿಜೆಪಿ ನೇತೃತ್ವದ ಸರಕಾರದ ಜನ-ವಿರೋಧಿ ಕೋಮುವಾದಿ ನೀತಿಗಳ ಫಲವಾಗಿ ದೇಶದಲ್ಲಿ ಆರ್ಥಿಕ ಸನ್ನಿವೇಶ ಎಲ್ಲಾ ರೀತಿಯಲ್ಲೂ ಹದಗೆಡುತ್ತಿರುವ ಬಗ್ಗೆ ಸಭೆ ಆತಂಕವ್ಯಕ್ತಪಡಿಸಿತು. ರೈಲ್ವೆ ಬಜೆಟ್ ಹಾಗೂ ಕೇಂದ್ರ ಬಜೆಟ್ ಮೂಲಕ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಲಾಗಿದೆ ಎಂದು ಸಭೆಯಲ್ಲಿ ಅಭಿಪ್ರಾಯಪಡ ಲಾಯಿತು.

ಸಭೆಯಲ್ಲಿ ನಡೆದ ಚರ್ಚೆಗಳ ಹಿನ್ನೆಲೆಯಲ್ಲಿ ಏಪ್ರಿಲ್ 12 ರಿಂದ ಮೇ 12 ರ ವರೆಗೆ ದೇಶದ ಜನರನ್ನು ಬಾಧಿಸುತ್ತಿರುವ ಹಲವು ನಿರ್ದಿಷ್ಟ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಿ ಒಂದು ರಾಷ್ಟ್ರ ವ್ಯಾಪಿ ಪ್ರಚಾರ ಮಾಸವನ್ನು ಆಚರಿಸಬೇಕು ಎಂದು ಸರ್ವಸಮ್ಮತಿಯಿಂದ ನಿರ್ಧರಿಸಲಾಯಿತು. ಕಾರ್ಯಕ್ರಮ ವಿವರ ಹೀಗಿದೆ -

- ಏಪ್ರಿಲ್ 12: ಬೆಲೆಯೇರಿಕೆಯ

ಪುಟ 8 ಕ್ಕೆ

ಅಸ್ಪೃಶ್ಯತೆ, ಜಾತಿಭೇದ ವಿರುದ್ಧ ಬೃಹತ್ ಚಳುವಳಿ!

ಹೈದರಾಬಾದ್‌ನಲ್ಲಿ ಸಿಪಿಐ(ಎಂ) ನಾಯಕರ ಮೇಲೆ ಕ್ರೂರ ಧಾಳಿ

ಆಂಧ್ರಪ್ರದೇಶದಲ್ಲಿ ಪ್ರಜಾಸತ್ತಾತ್ಮಕ ಸಂಘಟನೆಗಳು, ಶಕ್ತಿಗಳು ಸೇರಿ ಅಸ್ಪೃಶ್ಯತೆ ಹಾಗೂ ಜಾತಿ ಬೇಧದ ವಿರುದ್ಧ ಒಂದು ಬೃಹತ್ ಚಳುವಳಿಯನ್ನು ನಡೆಸುತ್ತಿವೆ. ಈ ಚಳುವಳಿಯ ಭಾಗವಾಗಿ ಇಡೀ ರಾಜ್ಯದಲ್ಲಿ ವಿವಿಧ ಹಂತದ ಸಮಾವೇಶಗಳು, ಮಾನವ ಸರಪಳಿ ಮೊದಲಾದ ಕಾರ್ಯಕ್ರಮಗಳು ನಡೆದಿವೆ. ಹಳ್ಳಿ ಹಳ್ಳಿಗಳಲ್ಲಿ ಅಸ್ಪೃಶ್ಯತೆಯನ್ನು ಈಗಲೂ ಆಚರಿಸುತ್ತಿರುವ ಅನೇಕ ಅಮಾನವೀಯ, ಕ್ರೂರ ರೀತಿಗಳು ಜನರ ನಡುವೆ ಚರ್ಚೆಗೆ ಒಳಗಾಗಿವೆ. ಇಂದಿನ ದಿನಗಳಲ್ಲಿ ಹೆಚ್ಚುತ್ತಿರುವ ಜಾತೀಯತೆಯ ವಿರುದ್ಧದ ಜನರ ಭಾವನೆಯ ತೀವ್ರತೆ ಬಹಿರಂಗವಾಗಿದೆ. ಚಳುವಳಿ ಆಂಧ್ರ ಪ್ರದೇಶದ ಜನಸಾಮಾನ್ಯರ ವ್ಯಾಪಕ ಬೆಂಬಲಗಳಿಸುವಲ್ಲಿ ಯಶಸ್ವಿಯಾಗಿದೆ.

ಈ ಚಳುವಳಿಯ ಭಾಗವಾಗಿ ಆಂಧ್ರ ವಿಧಾನಸಭಾ ಅಧಿವೇಶನ ನಡೆಯುತ್ತಿರುವಾಗ ಇಂದಿರಾ ಪಾರ್ಕ್‌ನಿಂದ ಅಂಬೇಡ್ಕರ್ ವಿಗ್ರಹದವರೆಗೆ ಒಂದು ಬೃಹತ್ ಮೆರವಣಿಗೆ ಸಾಗುತ್ತಿದ್ದಾಗ ಮೆರವಣಿಗೆಕಾರರ ಮೇಲೆ ಪೋಲೀಸರು ತೀವ್ರ ಲಾಠಿ ಪ್ರಹಾರ ಜರುಗಿಸಿದ್ದಾರೆ, ಜಲಫಿರಂಗಿ ಬಳಸಿದ್ದಾರೆ. ಮೆರವಣಿಗೆಯ ನೇತಾರರನ್ನು ಜೀಪಿನಲ್ಲಿ ತುಂಬಿಕೊಂಡು ಅಲ್ಲಿಯೇ ಅಮಾನುಷ ಹಲ್ಲೆ ನಡೆಸಿದ್ದಾರೆ. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮತ್ತು ಕೃಷಿ ಕೂಲಿಕಾರರ ಸಂಘದ ಕಾರ್ಯದರ್ಶಿ ಪಿ.ಮಧುರವರಿಗೆ, ಹಾಗೆಯೇ ಮಾಜಿ ಸಂಸತ್ ಸದಸ್ಯ ಹಾಗೂ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ವೀರಭದ್ರಂ, ರೈತ ಸಂಘದ ರಾಜ್ಯ ಕಾರ್ಯದರ್ಶಿ ವಿ.ಶ್ರೀನಿವಾಸ್ ರಾವ್ ಇತ್ಯಾದಿ ಅನೇಕ ಪ್ರಮುಖ ನಾಯಕರ ಮೇಲೆ ಹಲ್ಲೆ ಮಾಡಲಾಗಿದೆ. ಈ ಹಲ್ಲೆಯನ್ನು ಪಕ್ಷದ ಪಾಲಿಟ್‌ಬ್ಯೂರೋ ತೀವ್ರವಾಗಿ ಖಂಡಿಸಿದೆ.

ಅಮಾನುಷವಾಗಿ ಈ ಹಲ್ಲೆ ಜರುಗಿಸಿದ ಆಂಧ್ರಪ್ರದೇಶ ಸರ್ಕಾರ ಇದರಿಂದ ಇಡೀ ರಾಜ್ಯದಲ್ಲಿ ಏಳಬಹುದಾದ ಪ್ರತಿಭಟನೆಯನ್ನು ಮನಗಂಡು ಈ ಚಳುವಳಿಯ ನೇತೃತ್ವ ವಹಿಸಿದ 'ಜಾತಿ ಬೇಧದ ವಿರುದ್ಧ ಹೋರಾಟ ಸಮಿತಿ'ಯ ಬೇಡಿಕೆಗಳನ್ನು ಅಂಗೀಕರಿಸಿದೆ. ಹೈಕೋರ್ಟ್ ನ್ಯಾಯಾಧೀಶರಿಂದ ಜಾತಿ ಬೇಧದ ಬಗ್ಗೆ ತನಿಖೆ ನಡೆಸುವುದಾಗಿ, ಉನ್ನತ ನ್ಯಾಯಾಂಗ ಆಯೋಗವನ್ನು ರಚಿಸುವುದಾಗಿ ಪ್ರಕಟಿಸಿದ್ದಾರೆ. ಜಾತಿ ಬೇಧದ ವಿರುದ್ಧ ಆಂಧ್ರ ವಿಧಾನಸಭೆ ಒಂದು ಸರ್ವಾನುಮತದ ನಿರ್ಣಯ ಅಂಗೀಕರಿಸಿದೆ.

ಆಂಧ್ರಪ್ರದೇಶದಲ್ಲಿ ನಡೆಯುತ್ತಿರುವ ಜನ್ಮಭೂಮಿ ಕಾರ್ಯಕ್ರಮದಲ್ಲಿ 11ನೇಯ ಭಾಗವನ್ನು ಈ ಚಳುವಳಿಗಾಗಿಯೇ ಮೀಸಲಿಡುತ್ತೇವೆಂದು, ಪ್ರಾಥಮಿಕ ಶಿಕ್ಷಣ ಮಟ್ಟದಿಂದಲೇ ಜಾತಿಭೇದದ, ಅಸ್ಪೃಶ್ಯತೆಯ ವಿರುದ್ಧ ಶಿಕ್ಷಣ ನೀಡುವ ಪಠ್ಯಕ್ರಮ ರೂಪಿಸುತ್ತೇವೆಂದು ಸರ್ಕಾರ ಘೋಷಿಸಬೇಕಾಯಿತು. ಜಾತಿ ಸಂಘಟನೆಗಳನ್ನು ಪ್ರೋತ್ಸಾಹಿಸಬಾರದೆಂದೂ ಅದನ್ನು ವಿರೋಧಿಸಬೇಕೆಂದೂ ಅಲ್ಲಿಯ ಮುಖ್ಯಮಂತ್ರಿ ಘೋಷಿಸಬೇಕಾಗಿ ಬಂತು.

ಹೀಗೆ ಆಂಧ್ರಪ್ರದೇಶದ ಪ್ರಜಾಸತ್ತಾತ್ಮಕ ಚಳುವಳಿ ಒಂದು ಹೆಜ್ಜೆ ಮುಂದೆ ಹಾಕಿದೆ.

ಚಂದ್ರೋದಯಕ್ಕೆ ಸೂರ್ಯಾಸ್ತ

ಇದೇನು ಎಂದಿರ? ಚಂದ್ರೋದಯ ಎಂಬುದು ದಾವಣಗೆರೆಯಲ್ಲಿರುವ ಒಂದು ಮಿಲ್ಲಿನ ಹೆಸರು. ರೋಗಗ್ರಸ್ತವಾಗಿರುವ ಈ ಮಿಲ್ಲನ್ನು ಪುನರುಜ್ಜೀವನಗೊಳಿಸುವ ಪ್ರಯತ್ನದ ಮಾತುಕತೆಗಳು ಮುರಿದು ಬಿದ್ದಿರುವುದರಿಂದ ಈಗ ಮಿಲ್ಲುಗಳು ಮುಚ್ಚಿ ಹೋಗುತ್ತವೆ. ಸೂರ್ಯಾಸ್ತವಲ್ಲವೆ ಇದು.

ಕಾರ್ಮಿಕ ಸಂಘಗಳೊಂದಿಗೆ ಮಾತುಕತೆ ಮುರಿದು ಬಿದ್ದಿರುವುದರಿಂದ ತಮಗೆ ಬೇರೆ ದಾರಿಯೇ ಇರಲಿಲ್ಲ ಎಂದು ಈ ಮಿಲ್ಲಿನ ವ್ಯವಸ್ಥಾಪಕರು ಹೇಳಿದ್ದಾರೆ. ಕಷ್ಟಪಟ್ಟು 60 ಲಕ್ಷ ರೂಪಾಯಿಗಳನ್ನು ಸಾಲ ಪಡೆದು ಕೆಲಸಗಾರರ ಬಾಕಿಯನ್ನು ಕೊಟ್ಟಿದ್ದೇವೆ. ಈ ಮೊದಲು 187 ಲಕ್ಷ ರೂಪಾಯಿಗಳನ್ನು ಸಾಲ ಪಡೆದು ಮಿಲ್ಲಿನಲ್ಲಿ ಹೂಡಿದ್ದೇವೆ. ಇನ್ನೆಲ್ಲೂ ಈಗ ಸಾಲ ಹುಟ್ಟುತ್ತಿಲ್ಲ ಎಂಬುದು ಅವರ ಹೇಳಿಕೆ.

ಹಾಗೆ ಕೇಳಿದರೆ ಇದರಲ್ಲೇನೂ ವಿಶೇಷ ಇಲ್ಲ ಎನ್ನಬಹುದು. ಆದರೆ ಇಂತಹ ಮಿಲ್ಲುಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರ ಪಾಡೇನು ಎಂಬ ಪ್ರಶ್ನೆ ಬಂದರೆ ಇಂತಹ ಮುಚ್ಚುವಿಕೆಯ ನೋವು ಅರ್ಥವಾಗುತ್ತದೆ. ಪ.ಬಂಗಾಳದಲ್ಲಿ ಪ್ರತಿಯೊಂದು ಉದ್ದಿಮೆ/ಕಾರ್ಖಾನೆ ಸಂಕಷ್ಟದಲ್ಲಿರುವಾಗ ಅದನ್ನು ಜೀವಂತವಾಗಿಡಲು ಶತಾಯಗತಾಯ ಪ್ರಯತ್ನ ಮಾಡಲಾಗುತ್ತದೆ. ಇಲ್ಲಿ ರಾಜ್ಯ ಸರ್ಕಾರ ಪ್ರಯತ್ನ ಮಾಡುವ ಮೊದಲೇ ಕೈಚೆಲ್ಲಿ ಕೂರುತ್ತದೆ.

ಉದಾರೀಕರಣ ತಂದಿರುವ ಪರಿಸ್ಥಿತಿ ಇದು. ಇಂತಹ ಪರಿಸ್ಥಿತಿಯನ್ನು ಎದುರಿಸುವಲ್ಲೇ ರಾಜ್ಯ ಸರ್ಕಾರಗಳ ಸೈದ್ಧಾಂತಿಕ ಹಿನ್ನೆಲೆಯ ಮಹತ್ವ ಕಂಡು ಬರುವುದು. ಕೇಂದ್ರ ಸರ್ಕಾರ ತನ್ನ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುತ್ತದೆ. ರಾಜ್ಯ ಸರ್ಕಾರಗಳ ಸಂಪನ್ಮೂಲಗಳು ಸೀಮಿತ. ಅದರಲ್ಲೂ ಇರುವ ಸಂಪನ್ಮೂಲಗಳಿಗೇ ಕೇಂದ್ರದ ಸರ್ಕಾರ ಹೊಡೆತ ನೀಡುತ್ತದೆ. ಛಾತಿ ಇರುವ ರಾಜ್ಯ ಸರ್ಕಾರಗಳು ಜನಪರವಾಗಿ ನಿಲುವು ತಳೆದು ಹೋರಾಡುತ್ತವೆ.

ಉದಾರೀಕರಣ ನಿಧಾನವಾಗಿ ವಿಷದಂತೆ ಬದುಕಿನ ದೇಹದೊಳಗೆ ಹರಡುತ್ತಿರುವ ಒಂದು ರೀತಿ ಇದು.



ಹೊರಗೇ ಉಳಿದ ವಿದೇಶೀ ವಾಣಿಜ್ಯ ಸಾಲ

ಉದಾರೀಕರಣದ ಕ್ರಮಗಳು ಬಂದ ಮೇಲೆ ಉತ್ತಮ ಕಂಪನಿಗಳು ವಿದೇಶಿ ವಾಣಿಜ್ಯ ಸಾಲಗಳನ್ನು ಪಡೆಯಲು ಅನುಮತಿ ನೀಡಲಾಯಿತು. ವಿದೇಶಿ ಹಣಕಾಸು ದೇಶದೊಳಕ್ಕೆ ಬಂದು ಆ ಮೂಲಕ ಹೂಡಿಕೆಯಾಗಿ ದೇಶದ ಅಭಿವೃದ್ಧಿಯಾಗುತ್ತದೆ ಎಂಬುದು ಈ ಉದಾರೀಕರಣಕ್ಕೆ ನೀಡಿದ ಕಾರಣ. ಆದರೆ ಈ ಕಂಪನಿಗಳು ಏನು ಮಾಡಿವೆ ಗೊತ್ತೆ?

ಕಡಿಮೆ ಬಡ್ಡಿದರದಲ್ಲಿ ದೊರೆತ ಸಾಲಗಳನ್ನು ದೇಶದೊಳಕ್ಕೆ ತರುವ ಬದಲು ವಿದೇಶಗಳಲ್ಲೇ ಅದನ್ನು ಬಿಟ್ಟಿವೆ. ಕಳೆದ 18 ತಿಂಗಳಿಗೂ ಹೆಚ್ಚಿನ ಕಾಲ ಈ ಹಣ ಅಲ್ಲೆ ಉಳಿದಿದೆ. ಇದಕ್ಕೆ ಕಾರಣ ನೀಡುವಂತೆ ಕೇಂದ್ರ ಸರ್ಕಾರ ಕಂಪನಿಗಳನ್ನು ಕೇಳಿದೆಯಂತೆ. ಕಾರಣ ನೀಡುವುದರಲ್ಲೇನು ಕಂಪನಿಗಳಿಗೆ ಹೇಳಿ ಕೊಡಬೇಕೆ. 'ಸಮುದ್ರಕ್ಕೆ ಬೆಂಕಿ ಬಿದ್ದಿತು ಬಿದಿರ ಬುಟ್ಟಿಯಲ್ಲಿ ನೀರು ಹೊತ್ತು ಆರಿಸಿ ಬಂದೆವು' ಎಂಬಂತಹ ಸಾವಿರ ಕಾರಣಗಳನ್ನು ಅವು ನೀಡುತ್ತವೆ.

ಆರ್ಥಿಕ ನಿರ್ಬಂಧಗಳಿಂದಾಗಿ ವಿದೇಶೀ ನೆರವಿನಲ್ಲಿ ಕಡಿತವಾದಾಗಲಾದರೂ ಈ ಹಣವನ್ನು ದೇಶದೊಳಗೆ ತರಬಹುದಾಗಿತ್ತು. ಆದರೆ ತಮ್ಮ ಲಾಭದ ಲೆಕ್ಕಾಚಾರದಲ್ಲೇ ಇರುವ ಬಂಡವಾಳಿಗರಿಗೆ ದೇಶದ ಬಗೆಗೆ ಅಂತಹ ಕಾಳಜಿ ಇರಲು ಸಾಧ್ಯವೆ.

ಈ ಹಣದಿಂದ ವಿದೇಶಗಳಲ್ಲೇ ಲಾಭದಾಯಕ ವ್ಯವಹಾರಗಳನ್ನು ಈ ಕಂಪನಿಗಳು ನಡೆಸಿರುತ್ತವೆ. ಭಾರತದಲ್ಲಿ ಸಟ್ಟಾ ವ್ಯವಹಾರಕ್ಕೆ ಹೊರಗಿರುವಷ್ಟು ಅವಕಾಶ ಇನ್ನೂ ಇಲ್ಲವಲ್ಲ. ಇದಲ್ಲದೆ ವಿದೇಶಿ ವಿನಿಮಯ ದರದಲ್ಲಿ ಏರುಪೇರಾಗಿ ರೂಪಾಯಿಯ ಬೆಲೆ ಕುಸಿದರೆ ಆಗ ಅಪಾರ ಲಾಭ ಬಾಚಿಕೊಳ್ಳುವ ವಿಚಾರವೂ ಅವರಿಗಿರಬಹುದು. ಈ ದೃಷ್ಟಿಯಿಂದ ರೂಪಾಯಿಯ ಬೆಲೆ ಕುಸಿಯಲಿ ಎಂದು ಹಾರೈಸುವ ಹಲವು ಕಂಪನಿಗಳಿರಬಹುದು. ದೇಶ ಏನಾದರೇನು. ಅವರಿಗೆ ಲಾಭವಾದರೆ ಆಯಿತು.

ಎಂತಹ ಉದಾರೀಕರಣ

ಬಡವರಿಗೇಕೆ ಫೋನು?

ಉದಾರೀಕರಣದ ತಳಹದಿಯಲ್ಲಿ ಇಂತಹದ್ದೇ ಮಾತಿದೆ. ಬಡವರಿಗೇಕೆ ಅನ್ನ? ಬಡವರಿಗೇಕೆ ಪ್ರಯಾಣ?. ಹೀಗೆ ಹತ್ತು ಹಲವು ಪ್ರಶ್ನೆಗಳನ್ನು ಅಲ್ಲ ಧೋರಣೆಯನ್ನು ಉದಾರೀಕರಣ ಸ್ಪಷ್ಟವಾಗಿ ಹೊಂದಿದೆ. ಅದರ ಆಳವನ್ನು ಬಗೆದು ನೋಡಿದಾಗ ಮಾತ್ರ ಇದು ಗೊತ್ತಾಗುತ್ತದೆ.

ಟೆಲಿಫೋನ್ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ ಎಂಬುದೊಂದಿದೆ. ಅದು ಮೊನ್ನೆ ಟೆಲಿಫೋನ್ ಬಿಲ್ಲುಗಳನ್ನು ಯದ್ವಾತದ್ವಾ ಏರಿಸಿತು. ದೂರದೂರುಗಳಿಗೆ ಟೆಲಿಫೋನ್ ದರ ಕಡಿಮೆ ಮಾಡಿ ಸ್ಥಳೀಯ ಕರೆಗಳ ದರಗಳನ್ನು ಕಡಿಮೆ ಮಾಡಿತು. ಈಗಿರುವ ದರಗಳಲ್ಲಿ ಸ್ಥಳೀಯ ಕರೆಗಳಿಗೆ ಸಹಾಯಧನವನ್ನು ದೂರದೂರಿನ ಕರೆಗಳ ಆದಾಯದಿಂದ ನೀಡಲಾಗುತ್ತಿದೆ ಎಂದು ಅದು ಹೇಳಿದೆ.

ಇಲ್ಲಿನ ವಿಶ್ಲೇಷಣೆ ಸಾಮಾನ್ಯ ಜನರ ವಿರೋಧಿಯಾದದ್ದು. ದೂರದೂರುಗಳಿಗೆ ಫೋನ್ ಕರೆ ಮಾಡುವವರು ಉಳ್ಳವರು. ಜನಸಾಮಾನ್ಯರು ಹೆಚ್ಚಾಗಿ ಸ್ಥಳೀಯ ಕರೆ ಮಾಡುವವರು. ಇಂತಹ ಕರೆಗಳು ಕನಿಷ್ಠ ಅವಶ್ಯಕತೆಗಳಲ್ಲಿ ಸೇರುವಂತಹವು. ಆದ್ದರಿಂದ ಸ್ಥಳೀಯ ಕರೆಗಳಿಗೆ ಕಡಿಮೆ ದರವನ್ನು ನಿಗದಿ ಮಾಡಬೇಕಿತ್ತು. ಹಾಗೆಯೇ ಗ್ರಾಮೀಣ ಫೋನು ದರಗಳು' ಗ್ರಾಮೀಣ ಪ್ರದೇಶಗಳಲ್ಲಿ ಫೋನು ಸಂಪರ್ಕ ಸುಲಭ ದರಗಳಲ್ಲಿ ಲಭ್ಯವಿದ್ದರೆ ಮಾತ್ರ ಬಡಜನ ಅವುಗಳನ್ನು ಉಪಯೋಗಿಸುವುದು. ಇಲ್ಲವಾದರೆ ಅವರು ಬಳಸಲಾರರು ಹೀಗಿರುವಾಗ ಗ್ರಾಮೀಣ ಪ್ರದೇಶಗಳಲ್ಲಿ ಈ ಸೌಲಭ್ಯಗಳನ್ನು ಸುಲಭ ಬೆಲೆಗೆ ಲಭ್ಯವಾಗುವಂತೆ ಇಡುವುದು ಅವಶ್ಯಕ.

ಈಗ ಬಿಜೆಪಿ ಕೇಂದ್ರ ಸರ್ಕಾರಗಳ ಮಿತ್ರ ಪಕ್ಷಗಳ ವಿರೋಧ ಹಾಗೂ ವಿರೋಧ ಪಕ್ಷಗಳ ತೀವ್ರ ಪ್ರತಿಭಟನೆ ಗಮನಿಸಿ ಸರ್ಕಾರ ಸದ್ಯಕ್ಕೆ ಈ ದರ ಏರಿಕೆ ಇಲ್ಲ, ಎಂದಿದೆ. ಆದರೆ ಹಿಂಬಾಗಿಲಿನಿಂದ ಲಾದರೂ ಈ ಬೆಲೆ ಏರಿಕೆಯನ್ನು ಇಂದಲ್ಲ ನಾಳೆ ತಂದೇ ತರುತ್ತದೆ. ಇದು ಉದಾರೀಕರಣದ ಮುಖ್ಯ ಉದ್ದೇಶ ಅಲ್ಲವೇ?

ಕಾರ್ಮಿಕ ಕಾನೂನುಗಳನ್ನು ಬದಲಾಯಿಸಲು ತಹತಹಿಸುತ್ತಿರುವವರು

ಉದಾರೀಕರಣದ ಪ್ರಕ್ರಿಯೆ ಬಂದಂದಿನಿಂದಲೇ ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆ ಆಗಬೇಕೆಂಬ ಒತ್ತಾಯವನ್ನು ಬಂಡವಾಳಿಗರು ಮಾಡುತ್ತಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳೂ ಈ ದಿಸೆಯಲ್ಲಿ ತೀವ್ರ ಒತ್ತಡ ಹೇರುತ್ತಿವೆ. ಒಟ್ಟಿನಲ್ಲಿ ಇವರಿಗೆ ಕಾರ್ಮಿಕರನ್ನು ಹೇಗೆಂದರೆ ಹಾಗೆ ಬಳಸಿಕೊಳ್ಳಲು ಅನುಕೂಲ ಮಾಡಿಕೊಡುವ ಕಾರ್ಮಿಕ ಕಾನೂನುಗಳು ಬೇಕು. ಉದಾರೀಕರಣದ ಒಂದು ಮುಖ್ಯ ಉದ್ದೇಶವೂ ಇದೇ.

ಔದ್ಯಮಿಕ ಕಲಹಗಳ ಕಾಯಿದೆ, ಕಾಂಟ್ರಾಕ್ಟ್ ಕಾರ್ಮಿಕ ಕಾಯಿದೆ ಮತ್ತು ಟ್ರೇಡ್ ಯೂನಿಯನ್ ಕಾಯಿದೆಗಳಿಗೆ ತಿದ್ದುಪಡಿಗಳನ್ನು ತರಬೇಕೆಂಬುದು ಈಗಿನ ಒತ್ತಾಯ. ಇಲ್ಲಿ ಮುಖ್ಯವಾಗಿ ಔದ್ಯಮಿಕ ಕಲಹಗಳ ಕಾಯಿದೆಯನ್ನು ತಿದ್ದುಪಡಿ ಮಾಡಿ ಮಾಲೀಕ ಬೇಕೆಂದಾಗ ನೇಮಕ ಮಾಡಿಕೊಂಡು ಬೇಡವಾದಾಗ ಕಾರ್ಮಿಕರನ್ನು ಮನೆಗೆ ಕಳುಹಿಸುವ ಅವಕಾಶ ಮಾಡಿಕೊಡಬೇಕೆಂಬುದೇ ಬಂಡವಾಳಿಗರ ಬಹುಮುಖ್ಯ ಬೇಡಿಕೆ. ಕಾರ್ಮಿಕರಿಗೆ ಇಂದು ಇರುವ ಅಲ್ಪಮಟ್ಟಿಗಿನ ಸುಭದ್ರತೆಯನ್ನು ಹಾಳು ಮಾಡಬೇಕೆಂಬುದೇ ಇದರ ಉದ್ದೇಶ.

ರೋಗಗ್ರಸ್ತ ಉದ್ದಿಮೆಗಳಿಗೆ ಇಂತಹ ಕಾನೂನಿನ ತಿದ್ದುಪಡಿಯಿಂದ ಬಹಳ ನೆರವಾಗುತ್ತದೆ ಎಂಬ ವಾದವನ್ನು ಹೂಡಲಾಗುತ್ತದೆ. ರೋಗಗ್ರಸ್ತ ಉದ್ದಿಮೆಗಳು ಕಾರ್ಮಿಕರನ್ನು ಯಾವುದೇ ಪರಿಹಾರವಿಲ್ಲದೆ ಅಥವಾ ಅತ್ಯಲ್ಪ ಪರಿಹಾರ ನೀಡಿ ಮನೆಗೆ ಕಳುಹಿಸ ಬಹುದಾದಂತಹ ಪರಿಸ್ಥಿತಿ ಅವರಿಗೆ ಬೇಕು. ರೋಗಗ್ರಸ್ತ ಉದ್ದಿಮೆಗಳ ಪುನರುಜ್ಜೀವನ ಪರಿಸ್ಥಿತಿ ಲಾಭಕ್ಕಾಗಿ ಮಾತ್ರ ಇರಬೇಕು ಎಂಬ ಒಳ ಬಯಕೆಯೂ ಇದರಲ್ಲಿದೆ. ಇಂತಹ ಕಾನೂನು ತಿದ್ದುಪಡಿ ಬಂದರೆ ಉತ್ತಮವಾಗಿ ನಡೆಯುವ ಉದ್ದಿಮೆಯನ್ನು ರೋಗಗ್ರಸ್ತವನ್ನಾಗಿ ಮಾಡುವುದು ಬಂಡವಾಳಿಗರಿಗೆ ಕಷ್ಟದ ಕೆಲಸವಲ್ಲ.

ಹೀಗೆ ಬಂಡವಾಳಿಗರಿಗೆ ಮಾತ್ರ ಅನುಕೂಲ ಮಾಡಿ ಕಾರ್ಮಿಕರ ಜೀವನವನ್ನು ನರಕಮಯಗೊಳಿಸುವ ಕಾನೂನಿನ ತಿದ್ದುಪಡಿ ತರಲು ಸರ್ಕಾರ ಯೋಚಿಸುತ್ತಿದೆಯಂತೆ.

ಆದರೆ ಇದು ಅಷ್ಟು ಸುಲಭವಲ್ಲ. ದೇಶದ ಕಾರ್ಮಿಕ ವರ್ಗ ಇಂತಹ ಎಲ್ಲ ಪ್ರಯತ್ನಗಳಿಗೆ ತನ್ನ ತೀವ್ರವಾದ ಪ್ರತಿಭಟನೆ ಒಡ್ಡುತ್ತದೆ. ಹೋರಾಟಗಳು ಹೆಚ್ಚು ವಿಸ್ತಾರಗೊಳ್ಳುತ್ತವೆ. ಎಡಪಕ್ಷಗಳು ಪೂರ್ಣ ಬಲದಿಂದಲೇ ಇಂತಹ ಪ್ರಯತ್ನಗಳಿಗೆ ತಡೆ ಒಡ್ಡುತ್ತವೆ. ಈ ಪ್ರತಿರೋಧದ ಅರಿವಿನಿಂದಲೇ ಈ ಕಾನೂನು ತಿದ್ದುಪಡಿಗಳನ್ನು ತರಲು ಸರ್ಕಾರ ಹಿಂಜರಿಯುತ್ತಿರುವುದು.

ಸಾಮ್ರಾಜ್ಯಶಾಹಿಗಳ ಲಾಭಕ್ಕೆ ಪೇಟೆಂಟು

ಪೇಟೆಂಟ್ ಬಗೆಗಿನ ಮಸೂದೆ ಲೋಕ ಸಭೆಯಲ್ಲಿ ಪಾಸಾಗಿದೆ. ಎಡಪಕ್ಷಗಳು, ರಾಷ್ಟ್ರೀಯ ಜನತಾದಳ ಮತ್ತು ಸಮಾಜವಾದಿ ಪಕ್ಷಗಳು ಮಾತ್ರ ಈ ಮಸೂದೆಯನ್ನು ವಿರೋಧಿಸಿ ಸಭಾತ್ಯಾಗ ಮಾಡಿದವು. ಕಾಂಗ್ರೆಸ್ ಸಹ ಈ ಮಸೂದೆಗೆ ಬೆಂಬಲ ತೋರಿದ್ದರಿಂದ ಅದು ಪಾಸಾ ಯಿತು. ಚಳಿಗಾಲದ ಅಧಿವೇಶನದಲ್ಲೇ ಈ ಮಸೂದೆ ರಾಜ್ಯಸಭೆಯಲ್ಲಿ ಪಾಸಾಗಿತ್ತು.

ಈ ಮಸೂದೆ 1970 ರ ಭಾರತೀಯ ಪೇಟೆಂಟ್ ಕಾಯಿದೆಗೆ ತಿದ್ದುಪಡಿ ಮಾಡುತ್ತದೆ. ಈ ತಿದ್ದುಪಡಿಯಿಂದಾಗಿ ವಿದೇಶಿ ಕಂಪನಿಗಳಿಗೆ ಪೂರ್ಣ ಮಾರುಕಟ್ಟೆ ಹಕ್ಕು ದೊರೆಯುತ್ತದೆ. ಔಷಧಿ ಮತ್ತು ಕೃಷಿ ರಾಸಾಯನಿಕಗಳ ಮಾರಾಟದಲ್ಲಿ ಈ ಹಕ್ಕು ಅವರಿಗೆ ದೊರೆಯಲಿದೆ.

ಭಾರತೀಯ ಪೇಟೆಂಟ್ ಕಾಯಿದೆ 1970 ಅಭಿವೃದ್ಧಿಶೀಲ ದೇಶಗಳಿಗೆ ಮಾದರಿಯಾದ ಕಾಯಿದೆ ಎನಿಸಿಕೊಂಡಿತು. ಈ ಕಾಯಿದೆಯಿಂದಾಗಿಯೇ ಸಾಮ್ರಾಜ್ಯ ಶಾಹಿ ದೇಶಗಳ ಒಳ ಪಿತೂರಿಗಳನ್ನು ಎದುರಿಸಿ ನಮ್ಮ ದೇಶ ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಲು ಸಾಧ್ಯವಾಗಿತ್ತು.

ವಿಶ್ವ ವ್ಯಾಪಾರ ಸಂಸ್ಥೆಗೆ ನೀಡಿರುವ ಭರವಸೆಯ ಪ್ರಕಾರ ಈ ಮಸೂದೆಯನ್ನು ಪಾಸು ಮಾಡದೇ ನಿರ್ವಾಹವಿರಲಿಲ್ಲ ಎಂಬ ಧೋರಣೆಯನ್ನು ಸರ್ಕಾರ ತಳೆದಿತ್ತು. ಆದರೆ ವಿಶ್ವ ಮಟ್ಟದ ವೇದಿಕೆಗಳಲ್ಲಿ ಇಂತಹ ದೇಶಕ್ಕೆ ಪ್ರತಿಕೂಲವಾಗುವ ಒತ್ತಡಗಳ ವಿರುದ್ಧ ಹೋರಾಡುವ ಕೆಲಸವನ್ನು ಸರ್ಕಾರ ಮಾಡಬೇಕಾಗಿತ್ತು. ಅದಕ್ಕೆ ಬದಲು ಪ್ರತಿಭಟನೆಯಿಲ್ಲದ ಶರಣಾಗತಿ/(ಶಾಮೀಲು) ಯನ್ನು ಸರ್ಕಾರ ತೋರಿದೆ.

ಕೇಂದ್ರದ ಕೈಗಾರಿಕಾ ಮಂತ್ರಿ ಸಿಕಂದರ್ ಭಕ್ತ್ ಅವರೇ ಹೇಳಿರುವಂತೆ ಮುಂದಿನ ದಾರಿ ಅತ್ಯಂತ ಕಷ್ಟದಾಯಕವಾಗಿದೆ. ಆದರೆ ಬೇರೆ ದಾರಿಯೇ ಇರಲಿಲ್ಲ. ಬೇರೆ ದಾರಿ ಇದೆಯೋ ಇಲ್ಲವೋ ಎಂಬುದನ್ನು ಜನಪರವಾಗಿ ಚಿಂತಿಸಿ ದಾರಿ ಹುಡುಕ ಹೊರಟಿದ್ದರೆ ಗೊತ್ತಾಗುತ್ತಿತ್ತು. ಜನವಿರೋಧಿ ಯಾಗಿರುವ ಸರ್ಕಾರ ಇಂತಹ ಪ್ರತಿಗಾಮಿ ಮಸೂದೆಯನ್ನು ಪಾಸು ಮಾಡಿ ಈಗ ಬೇರೆ ದಾರಿಯಿರಲಿಲ್ಲ ಎಂದು ಹೇಳಿಕೊಳ್ಳುತ್ತಿದೆ.

ದೇಶದ ಸ್ವಾವಲಂಬನೆಗಂತೂ ಈ ಹೊಸ ಮಸೂದೆ ತೀವ್ರವಾದ ಪೆಟ್ಟನ್ನು ಕೊಡಲಿದೆ. 'ಸ್ವದೇಶಿ' ಎಂದು ಕೂಗುವವರೂ ದೇಶದ ಹಿತಾಸಕ್ತಿಗಳನ್ನು ಕಾಯುವವರಲ್ಲ ಎಂಬುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಟನ್.ಪಿ.ಟಂ.ಪಿ. ಕರೆ

ಪುಟ 1 ರಿಂದ

ವಿರುದ್ಧ, ಆಹಾರಭದ್ರತೆಗಾಗಿ ಎಲ್ಲಾ ರಾಜ್ಯಗಳಲ್ಲಿ ಧರಣಿ

- ಮೇ 1: ಮೇ ದಿನಾಚರಣೆಯಲ್ಲಿ ಜಾಗತೀಕರಣ ಮತ್ತು ಕೋಮುವಾದದ ವಿರುದ್ಧ ವಿಶೇಷ ಒತ್ತಿನೊಂದಿಗೆ ಮೇ ದಿನಾಚರಣೆ
- ಮೇ 7: ಕೃಷಿ ಕೂಲಿಕಾರರಿಗೆ ಕೇಂದ್ರೀಯ ಶಾಸನ ತರಲು ಆಗ್ರಹಿಸಿ ರಾಷ್ಟ್ರಾದ್ಯಂತ ಮತ ಪ್ರದರ್ಶನಗಳು
- ಮೇ 12 : "ಎಲ್ಲರಿಗೂ ಶಿಕ್ಷಣ, ಎಲ್ಲರಿಗೂ ಉದ್ಯೋಗ" ಬೇಡಿಕೆಯ ಮೇಲೆ ಎಲ್ಲಾ ರಾಜ್ಯಗಳಲ್ಲಿ ಹಾಗೂ ರಾಜಧಾನಿಯಲ್ಲಿ ಮತಪ್ರದರ್ಶನ

ಈ ಕಾರ್ಯಕ್ರಮಗಳ ಜೊತೆಗೆ ದೇಶಾದ್ಯಂತ ಪಂಜಿನ ಮೆರವಣಿಗೆಯನ್ನು ನಡೆಸಬಹುದು ಎಂದಿರುವ ಎನ್.ಪಿ.ಎಂ.ಓ. ಮೇ ಅಂತ್ಯ ಅಥವಾ ಜೂನ್ ತಿಂಗಳ ಆರಂಭದಲ್ಲಿ ಕೋಮುವಾದದ ವಿರುದ್ಧ ಒಂದು ಅಖಿಲ ಭಾರತ ಸಮಾವೇಶ ನಡೆಸಲು ಸಭೆ ನಿರ್ಧರಿಸಿತು.

(ಐಎನ್ಎನ್)

ಉದಾರೀಕರಣದ ಚೌಕಟ್ಟಿನೊಳಗಿನ ರಾಜ್ಯ ಬಜೆಟ್

ಕರ್ನಾಟಕದ 1999-2000 ಸಾಲಿನ ಬಜೆಟ್ಟನ್ನು ಉಪ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಮಂಡಿಸಿದ್ದಾರೆ.

ರಾಜ್ಯ ಸರ್ಕಾರದ ಬಜೆಟ್ಟಿಗೆ ಹಲವು ಮಿತಿಗಳಿರುತ್ತವೆ. ಕೇಂದ್ರ ಸರ್ಕಾರ ಕೊಟ್ಟಿರುವ ಚೌಕಟ್ಟಿನೊಳಗೇ ಕಾರ್ಯ ಮಾಡಬೇಕಾದ ಸ್ಥಿತಿಯಿರುವಾಗ ಕೇಂದ್ರ ಸರ್ಕಾರವೇ ಜನ ಹಿತವನ್ನು ಬಲಿಕೊಟ್ಟಿರುವಾಗ ಕೇಂದ್ರ ನೀಡಿರುವ ಚೌಕಟ್ಟೇ ಅಂತಹದ್ದೆನ್ನಬಹುದು. ಆದರೆ ಆ ಚೌಕಟ್ಟಿನೊಳಗೇ ಜನಪರವಾದ ಕೆಲಸಗಳನ್ನು ಮಾಡುವ ನಿರಂತರವಾಗಿ ಜನಪರವಾಗಿ ಕೇಂದ್ರದೊಡನೆಯೂ ಹೋರಾಡುವ ಮನೋಭಾವವನ್ನು ರಾಜ್ಯ ಸರ್ಕಾರ ತೋರಿಸಬೇಕು. ಆದರೆ ಕರ್ನಾಟಕ ಸರ್ಕಾರ ಕೇಂದ್ರ ಚೌಕಟ್ಟಿನ ಮಿತಿಯೊಳಗೇ ಉಳಿದು ಉದಾರೀಕರಣದ ಚೌಕಟ್ಟಿನೊಳಗೇ ಕೆಲಸ ಮಾಡುವ ರೀತಿಯನ್ನು ಆಯ್ದುಕೊಂಡಿದೆ.

ಬಜೆಟ್ಟು ನೀಡಿರುವ ಮುಖ್ಯ ಪರಿಹಾರಗಳನ್ನು ನೋಡಿ:

ಬೀರ್, ಬ್ರ್ಯಾಂಡ್ ಇಲ್ಲದ ಚಹ, ಪ್ಲಾಸ್ಟಿಕ್ ಬ್ಯಾಗುಗಳು, ಕಟ್ಟಿಗೆ, ಫ್ಲೋರೊಸೆಂಟ್ ಲ್ಯಾಂಪ್‌ಗಳು ಪಾರಾಫಿನ್ ಮೇಣ ಹಾಗೂ ಜೇಡಿ ಮಣ್ಣಿನ ಮೇಲಿನ ಮಾರಾಟ ತೆರಿಗೆ ಕಡಿತ.

ರಾಗಿ ಹಿಟ್ಟು, ಕರ್ನಾಟಕದಲ್ಲಿ ರಿಜಿಸ್ಟರ್ ಆದ ಬಳಸಿದ ಕಾರು, ರಸಾಯನಿಕ ಗೊಬ್ಬರಗಳು, ಬ್ರ್ಯಾಂಡ್ ಹೆಸರಿಲ್ಲದ ಹಲ್ಲುಪುಡಿ, ಆಟಿಕೆಗಳು, ಅರಿಶಿಣ, ಮೇಣಬತ್ತಿಗಳು, ಮೀನುಗಾರಿಕೆ ಸಲಕರಣೆಗಳು, ತುತ್ತು ಮತ್ತು ರೇಷ್ಮೆ ಕಂಬಳಿಗಳ ಮೇಲೇ ಮಾರಾಟ ತೆರಿಗೆ ತೆಗೆದು ಹಾಕಲಾಗಿದೆ.

- ವಾಹನಗಳ ವರ್ಗಾವಣೆಯ ಮೇಲಿನ ಸ್ಟಾಂಪ್ ಶುಲ್ಕ ತೆಗೆದು ಹಾಕಲಾಗಿದೆ.
- ಕಲ್ಯಾಣ ಮಂಟಪಗಳ ಬಾಡಿಗೆ ಮಿತಿ 5000 ರೂ ನಿಂದ 10000 ಕ್ಕೆ ಏರಿಕೆ.
- ಹಸಿರು ಮನೆಗಳ ನಿರ್ಮಾಣಕ್ಕೆ ಶೇ. 70 ರಷ್ಟು ಸಹಾಯಧನ
- ಸಣ್ಣ ಕೈಗಾರಿಕೆಗಳ ಸಹಾಯಧನದ ಮಂಜೂರಾತಿ ಮೂರು ತಿಂಗಳುಗಳೊಳಗೆ.
- ಕಾಫಿ ಮೇಲಿನ ಟನ್ನೊಂದಕ್ಕೆ 400 ರೂಪಾಯಿಗಳ ಹೆಚ್ಚುವರಿ ತೆರಿಗೆ ತೆಗೆದು ಹಾಕಿರುವುದು.

ಹೊಸ ಹೊರೆಗಳು ಹೀಗಿವೆ

- ಸರಕು ವಾಹನಗಳು ಮತ್ತು ಮ್ಯಾಕ್ಸಿ ಕ್ಯಾಬ್‌ಗಳ ಮೇಲಿನ ವಾಹನ ತೆರಿಗೆ ಹೆಚ್ಚಳ
- ಬೀಡಿ ಎಲೆಗಳ ಮೇಲೆ, ನಾಟಾ, ಗೋಡಂಬಿ ಮತ್ತು ಹುಣಸೆಹಣ್ಣಿನ ಮೇಲೆ ತೆರಿಗೆ.
- ಭಟ್ಟಿ ವಾರುಗಳು, ಬ್ರುವರಿಗಳ ಮೇಲೆ ಲೈಸೆನ್ಸ್ ಫೀ ಹೆಚ್ಚಳ, ಹೆಂಡದ ಮೇಲೆ ಸುಂಕ ಹೆಚ್ಚಳ.

ಈ ಬಜೆಟ್ 138 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸಿ 65 ಕೋಟಿಗಳಷ್ಟು ಪರಿಹಾರವನ್ನು ನೀಡಿದೆ. ಒಟ್ಟಾರೆಯಾಗಿ 125 ಕೋಟಿ ರೂಪಾಯಿಗಳ ಕೊರತೆಯನ್ನು ಬಜೆಟ್ ತೋರಿಸಿದೆ.

ಇದಲ್ಲದೆ ಬಜೆಟ್ ವಿಆರ್‌ಎಸ್ ಅಂದರೆ ಸ್ವಯಂ ನಿವೃತ್ತಿ ಯೋಜನೆಗಾಗಿ 10 ಕೋಟಿ ರೂಪಾಯಿಗಳನ್ನೇ ಈ ಬಜೆಟ್ಟಿನಲ್ಲಿ ತೆಗೆದಿರಿಸಲಾಗಿದೆ. ವಿಆರ್‌ಎಸ್ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕುವ ಯೋಜನೆ. ಇದು ಬಂಡವಾಳಿಗರ ಬೇಡಿಕೆಯ ಯೋಜನೆ.

ಬದಲಿಗೆ ರೋಗಗ್ರಸ್ತ ಉದ್ದಿಮೆಗಳನ್ನು ಪುನರುಜ್ಜೀವನ ಗೊಳಿಸಲು ಹಣ ತೆಗೆದಿರಿಸಿ ಆ ದಿಕ್ಕಿನಲ್ಲಿ ಪ್ರಯತ್ನ ಮಾಡಬಹುದಾಗಿತ್ತು. ಇಂತಹ ಪ್ರಯತ್ನವನ್ನು ಸರ್ಕಾರ ಮಾಡಿಲ್ಲ. ಬದಲಿಗೆ ಉದ್ದಿಮೆಗಳನ್ನು ಮುಚ್ಚುವ ಕಾರ್ಯಕ್ರಮ ಹಾಕಿಕೊಂಡಿದೆ.

ಬಂಡವಾಳಿಗರೂ ಇದು ಕಲ್ಪನೆಯ ಕೊರತೆಯಿರುವ ಬಜೆಟ್ ಎಂದೇ ಟೀಕಿಸಿದ್ದಾರೆ. ಬಂಡವಾಳಿಗರ ಸಂಘಟನೆ ಇಲ್ಲದ ಜಿಎಮ್‌ಸಿಐ, ಎಫ್‌ಕೆಸಿಸಿಐಗಳು ಇದು ವಾರ್ಷಿಕ ಕಟ್ಟಳೆಯೊಂದನ್ನು ತೀರಿಸುವಂತೆ ಮಂಡಿಸಿರುವ ಬಜೆಟ್ ಎಂದಿವೆ. ○

"ಬೆಲೆಗಳು ಗಗನಕ್ಕೇರಿದೆ" ಸೂರಿ

ದೇವದುರ್ಗ: ಬಿಜೆಪಿ ನೇತೃತ್ವದ ಸಮಿಶ್ರ ಸರ್ಕಾರ ಕೇಂದ್ರದ ಅಧಿಕಾರ ಗದ್ದುಗೆ ಹಿಡಿದ ಮೇಲೆ ಜನ ಸಾಮಾನ್ಯರ ಅಗತ್ಯ ವಸ್ತುಗಳ ಮತ್ತು ಪಡಿತರ ವಸ್ತುಗಳ ಬೆಲೆ ವೇಗವಾಗಿ ಗಗನಕ್ಕೇರಿದೆ ಎಂದು ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಕಾಮ್ರೆಡ್ ಎಸ್. ಸೂರ್ಯನಾರಾಯಣ ರಾವ್ ಹೇಳಿದರು.

ಅವರು ಸಿಪಿಐ(ಎಂ) ಸಂಘಟಿಸಿದ ದೇವದುರ್ಗ ತಾಲೂಕು ಮೊಸರ ಕಲ್ಲು ಜಿಲ್ಲಾ ಪಂಚಾಯತ್ ಕ್ಷೇತ್ರದ ರಾಜಕೀಯ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಿದ್ದರು. ದೇಶದ ಸಂಪತ್ತನ್ನು ದೇಶಿಯ ಬಂಡವಾಳಿಗರು ವಿದೇಶಿ ಕಂಪನಿಗಳ ಜೊತೆ ಕೈಗೂಡಿಸಿ ಲೂಟಿ ಮಾಡಲೆತ್ನಿಸುತ್ತಿದ್ದಾರೆ. ಅವರ ಯತ್ನವನ್ನು ನಾವು ರಾಜಕೀಯವಾಗಿ ವಿಫಲಗೊಳಿಸಬೇಕಾಗಿದೆ ಎಂದು ಸೂರ್ಯನಾರಾಯಣ ರಾವ್ ಕರೆ ನೀಡಿದರು.

ಸಭೆಯಲ್ಲಿ ಮಾತನಾಡಿದ ರಾಜ್ಯ ಸಮಿತಿ ಸದಸ್ಯರಾದ ಚಂದ್ರಶೇಖರ್ ಬಾಳೆ ಪ್ರಜಾಸತ್ತಾತ್ಮಕ ರಾಜಕೀಯದ ಮಹತ್ವವನ್ನು ವಿವರಿಸಿದರು. ಮುಂಬರುವ ಚುನಾವಣೆಗಳಲ್ಲಿ ಶ್ರಮಿಕ ವರ್ಗದ ಸಿಪಿಐ(ಎಂ)ನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಸಭೆಯಲ್ಲಿ ಅಧ್ಯಕ್ಷತೆಯನ್ನು ವೈ. ರಾಮಣ್ಣ ವಹಿಸಿದ್ದರು. ಮಲ್ಲಯ್ಯ ಜಾಲಹಳ್ಳಿ, ಪಿ. ಗಿರಿಯಪ್ಪ, ಚಂದ್ರಶೇಖರ್ ನಾಡಗೌಡ ರಾಮಲಿಂಗಪ್ಪ ಗೌಡ ಬಿ.ಎಸ್. ದೇಸಾಯಿ, ಗೋವಿಂದಪ್ಪ ಬಸವಲಿಂಗಪ್ಪ ಉಪಸ್ಥಿತರಿದ್ದರು. ಎಂ. ಮಲ್ಲಿಕಾರ್ಜುನ ವಂದಿಸಿದರು.

ಕಛೇರಿ ಉದ್ಘಾಟನೆ:

ಮೊಸರಕಲ್‌ನಲ್ಲಿ ಜಿಲ್ಲಾ ಪಂಚಾಯತ್ ಸಿಪಿಐ(ಎಂ)ನ ವಲಯ ಸಮಿತಿ ಕಛೇರಿಯನ್ನು ಹಾಗೂ ಜಾಲಹಳ್ಳಿಯಲ್ಲಿ ಪಿ. ಗೋದಾವರಿ ಸ್ವಸಹಾಯ ಗುಂಪಿನ ಎರೆಹುಳು ಗೊಬ್ಬರ ಘಟಕವನ್ನು ಎಸ್. ಸೂರ್ಯನಾರಾಯಣ ರಾವ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ 800 ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು

ಅರಣ್ಯಾಧಿಕಾರಿಗಳ ಕಿರುಕುಳದ ವಿರುದ್ಧ ರೈತರ ಪ್ರತಿಭಟನೆ

ಬೆಂಗಳೂರು: ನಲವತ್ತು ಐವತ್ತು ವರ್ಷಗಳಿಂದ ಬೇಸಾಯ ಮಾಡುತ್ತಿರುವ ಬೆಂಗಳೂರು ಜಿಲ್ಲಾ ರೈತರಿಗೆ ಅರಣ್ಯಾಧಿಕಾರಿಗಳು ಕಿರುಕುಳ ನೀಡುತ್ತಿರುವುದನ್ನು ಪ್ರತಿಭಟಿಸಿ ಕರ್ನಾಟಕ ಪ್ರಾಂತ ರೈತ ಸಂಘಧ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಫೆಬ್ರವರಿ 27 ರಂದು ಜಿಲ್ಲಾಧಿಕಾರಿ ಕಛೇರಿ ಮುಂದೆ ನೂರಾರು ರೈತರು ಪ್ರತಿಭಟನಾ ಧರಣಿ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ರೈತ ಮುಖಂಡರುಗಳಾದ ಎನ್. ವೆಂಕಟಾಚಲಯ್ಯ ಹೆಚ್.ಸಿ. ಶಾಮಣ್ಣರೆಡ್ಡಿ ಒತ್ತುವರಿ ಮಾಡಿಕೊಂಡಿರುವ ಬಡ ರೈತರ ಬಗರು ಖುಂ ಸಾಗುವಳಿಗೆ ಜಮೀನಿಗೆ ಹಾಕುತ್ತಿರುವ ಬೇಲಿ ನಿಲ್ಲಿಸಬೇಕು ಹಾಗೂ ಅವರಿಗೆ ಉಳಿಮೆ ಚೀಟಿ ನೀಡಬೇಕು ಈ ಕಾಡಿನ ಸುತ್ತ ಮುತ್ತ ಇರುವ ರೈತರ ದನ ಕುರಿಗಳಿಗೆ ಮೇಯಲು ದಾರಿ ಬಿಡಬೇಕು, ಶ್ರೀಮಂತರು ಕಬಳಿಸಿರುವ ಭೂಮಿಯನ್ನು ವಶಪಡಿಸಿಕೊಂಡು ಬಡ ರೈತರಿಗೆ ಹಂಚಬೇಕು ಹಾಗೂ ಅರಣ್ಯ ಇಲಾಖೆಯಲ್ಲಿನ ಭ್ರಷ್ಟಾಚಾರ ನಿಲ್ಲಿಸಬೇಕೆಂದು ಒತ್ತಾಯಿಸಿ ದರು. ಇದೇ ಸಂದರ್ಭದಲ್ಲಿ ನಂಜಪ್ಪ ಹಾಗೂ ಮುನಿರೆಡ್ಡಿ ಭಾಗವಹಿಸಿದ್ದರು. ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿಗಳು ಅರಣ್ಯ ಅಧಿಕಾರಿಗಳು ರೈತರಿಗೆ ನೀಡುವ ಕಿರುಕುಳದ ಬಗ್ಗೆ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಈ ಪ್ರತಿಭಟನೆಯಲ್ಲಿ ಕೆಂಗೇರಿ, ಉತ್ತರ ಹಳ್ಳಿ ಮತ್ತು ಬೇಗೂರು ಹೋಬಳಿಗಳಿಂದ ರೈತರು ಭಾಗವಹಿಸಿದ್ದರು.

ಡಿವೈಎಫ್ಐ ಸಮ್ಮೇಳನಗಳು

ಉತ್ತರ ಕನ್ನಡ: ಮನುಷ್ಯರಾಗಿ ಹೇಗೆ ಬದುಕಬೇಕು ಎನ್ನುವುದನ್ನು ಕಲಿಸುವ ಬದಲು ಕೋಮುವಾದಿಯಾಗಿ ಬದುಕುವುದು ಹೇಗೆ ಎಂದು ಇಲ್ಲಿ ಕಲಿಸುತ್ತಿದ್ದಾರೆ. ಇದನ್ನು ಶಿಕ್ಷಣದಲ್ಲೂ ಅಳವಡಿಸುವ ಹುನ್ನಾರ ನಡೆಯುತ್ತಿದೆ. ಧರ್ಮ-ಜಾತಿಯ ಹೆಸರಿನಲ್ಲಿ ವರ್ಗೀಕರಣ; ಅದನ್ನು ಸ್ವಾರ್ಥದ ರಾಜಕಾರಣಕ್ಕೆ ಬಳಸಿಕೊಳ್ಳಲಾಗುತ್ತಿದೆ. ಹಿಂದುತ್ವದ ಹೆಸರಿನಲ್ಲಿ ದೇಶ ಕಟ್ಟುತ್ತೇವೆ ಎನ್ನುವ ಘೋಷಣೆ ಕ್ರೌರ್ಯದಿಂದ ಕೂಡಿರುವಂಥದ್ದು. ಮನುಷ್ಯ ಗೋರಿಯ ಮೇಲೆ ಕಟ್ಟುವ ಧರ್ಮ ಸಾಮ್ರಾಜ್ಯಕ್ಕೆ ಅರ್ಥವಿಲ್ಲ ಎಂದು ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ॥ ಕೆ. ಕೇಶವಶರ್ಮ ಹೇಳಿದರು.

ಅವರು ಮಾರ್ಚ್ 7 ರಂದು ಹೊನ್ನಾವರದಲ್ಲಿ ನಡೆದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.) ನ ಉತ್ತರ ಕನ್ನಡ ಪ್ರಥಮ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಇಂದು ದೇಶ ಎದುರಿಸುತ್ತಿರುವ ಕೋಮುವಾದಿ ಸವಾಲುಗಳ ಬಗ್ಗೆ ಪ್ರಸ್ತಾಪಿಸಿ ದೇಶದ ಇಡೀ ಇತಿಹಾಸವನ್ನು ತಿರುವು ಮರುವು ಮಾಡುತ್ತಿದ್ದಾರೆ. ಹಿಂದೂ ಎನ್ನುವ ಇವರ ಕಲ್ಪನೆಯೇ ಸುಳ್ಳು. ಬದುಕುವ ವಿಧಿ ವಿಧಾನದಿಂದ ನಮ್ಮಲ್ಲಿ ವೈವಿಧ್ಯತೆ ಇದೆಯೇ ಹೊರತಾಗಿ ಈ ವಿಧದ ಧರ್ಮದಿಂದ ಬಂದಿದ್ದಲ್ಲ. ಆಧುನಿಕ ವ್ಯಾಪಾರಿ, ಜಾಹೀರಾತು, ಸಂಸ್ಕೃತಿಯ ಮಧ್ಯೆ ಇದರ ಸ್ವರೂಪ ಇನ್ನೊಂದು ರೂಪವನ್ನು ಪಡೆದುಕೊಂಡಿದೆ ಎಂದು ಹೇಳಿ ಹೇಗೆ ವಿವಿಧ ಪ್ರದೇಶದ ಒಂದೇ ಜನಾಂಗದವರ ಬದುಕುವ ಶೈಲಿ ಬೇರೆ ಬೇರೆ ಎಂದು ಚರ್ಚಿಸಿದರು. ಪ್ರತಿಯೊಂದಕ್ಕೂ ಮಾನವೀಯವಾಗಿ ಸ್ಪಂದಿಸಲು ನಾವು ಕಲಿಯಬೇಕಾಗಿದೆ. ನಾವು ಇಂದು ಎದುರಿಸುತ್ತಿರುವ ಸಮಸ್ಯೆಯ ಮೂಲ ಇರುವುದು ಧರ್ಮದಲ್ಲಲ್ಲ, ಆರ್ಥಿಕ ಸ್ಥಿತಿಯಲ್ಲಿ. ಹಾಗಾಗಿ ವರ್ಗದ ಹಿನ್ನಲೆಯಲ್ಲಿ ನಮ್ಮ ಹೋರಾಟ ರೂಪಿಸಬೇಕಾಗಿದೆ ಎಂದು ಕೇಶವಶರ್ಮ ಹೇಳುತ್ತಾ ಡಿ.ವೈ.ಎಫ್.ಐ. ಇಂತಹ ಹೋರಾಟವನ್ನು ರೂಪಿಸಬೇಕೆಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ತಾಲೂಕಾ ಪಂಚಾಯತ ಉಪಾಧ್ಯಕ್ಷ ಪಿ.ಜಿ. ಭಟ್ಟ ಅಗ್ನಿ ಮಾತನಾಡಿ ಕೋಮುವಾದವೇ ಅಪಾಯಕಾರಿಯಾದದ್ದು, ಅದು ಹಿಂದೂ ಕೋಮುವಾದವಾಗಲೀ ಅದು ಮುಸ್ಲಿಂ ಕೋಮುವಾದವಾಗಲೀ ಅಥವಾ ಕ್ರಿಶ್ಚಿಯನ್ ಕೋಮುವಾದವಾಗಲೀ ಇದರಿಂದ ಅಪಾಯ ಇದ್ದೆ ಇದೆ. ಈ ಎಲ್ಲಾ ಕೋಮುವಾದವನ್ನು ಎದುರಿಸುವ ಸಮಾಜವನ್ನು ನಿರ್ಮಿಸಬೇಕಾಗಿದೆ ಎಂದರು. ಎಲ್ಲಾ ಜಾತಿ ಧರ್ಮಗಳ ಬಡವರ ಸಮಸ್ಯೆ ಒಂದೆ. ನಮ್ಮಲ್ಲಿ ಜಾತಿ ಸಂಘರ್ಷ ಆಗಿದೆ. ಧರ್ಮ ಸಂಘರ್ಷಗಳು ನಡೆಯುತ್ತಿವೆ. ಆದರೆ ಈ ಬಡವರ ಮತ್ತು ಶ್ರೀಮಂತರ ನಡುವೆ ಸಂಘರ್ಷ ನಡೆದರೆ ಮಾತ್ರ ಬದಲಾವಣೆ ಸಾಧ್ಯ ಎಂದು ಹೇಳಿ ಜಿಲ್ಲೆಯು ಎದುರಿಸುತ್ತಿರುವ ಸಮಸ್ಯೆಯ ಹಿನ್ನಲೆಯಲ್ಲಿ ಹೋರಾಟ ರೂಪಿಸಿ ನಾವು ನಿಮ್ಮೊಂದಿಗಿದ್ದೇವೆ. ಎಂದು ಹೇಳಿದರು.

ಡಿ.ವೈ.ಎಫ್.ಐ. ನ ರಾಜ್ಯ ಅಧ್ಯಕ್ಷರಾದ ಶಾಂತಾರಾಮ ನಾಯಕ ಮಾತನಾಡಿ ಡಿ.ವೈ.ಎಫ್.ಐ. ದೇಶದ ಅತ್ಯಂತ ದೊಡ್ಡ ಸಂಘಟನೆ ಯಾಗಿದ್ದು ಯುವಕರನ್ನು ದೇಶ ಕಟ್ಟುವ ಕೆಲಸದಲ್ಲಿ ಜಾತ್ಯಾತೀತವಾಗಿ ತೊಡಗಿಸುತ್ತದೆ. ಎಂದರು.

ಡಿ.ವೈ.ಎಫ್.ಐ.ನ ರಾಜ್ಯ ಸಹಕಾರ್ಯದರ್ಶಿ ಕೃಷ್ಣಪ್ಪ ಕೊಂಚಾಡಿ ಮಾತನಾಡಿ ಕೋಮುವಾದಿಗಳು ಯಾವತ್ತೂ ಕ್ರಿಮಿನಲ್‌ಗಳು. ಬಿಹಾರದ ಘಟನೆ, ಉಳ್ಳಾಲದ ಘಟನೆಗಳು ಇನ್ನೊಮ್ಮೆ ಇದನ್ನು ಸಾಬೀತು ಮಾಡಿದೆ. ದುಡಿಯುವ ಕೈಗಳಿಗೆ ಒಂದು ಉದ್ಯೋಗವನ್ನು ಕೊಡಿ ಎಂದು ಕೇಳುತ್ತೇವೆ, ನಾವು ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿಸಬೇಕೆಂದು ಹೋರಾಡುತ್ತಿದ್ದೇವೆ ಎಂದರು.

ಅತಿಥಿಗಳಾದ ತಿಲಕ ಗೌಡರು ಮಾತನಾಡಿ," ಕಾರ್ಮಿಕರ ಪರವಾಗಿ ಶುಭ ಕೋರಿದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿಠ್ಠಲ ಭಂಡಾರಿ ಅನೇಕ ಯುವಕ ಸಂಘಗಳು ಕೇವಲ ಯುವಜನೋತ್ಸವ ಮಾಡುವಲ್ಲಿಗೆ ಸಿಮೀತವಾಗಿದೆ. ಡಿ.ವೈ.ಎಫ್.ಐ ಯುವಕರನ್ನು ಅಭಿವೃದ್ಧಿ ಪರ ಹೋರಾಟದಲ್ಲಿ ತೊಡಗುವಂತೆ ಮಾಡುವುದರ ಜೊತೆಗೆ ಈ ಯುವಕರಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಲು ಪ್ರಯತ್ನಿಸುತ್ತದೆ. ಜಿಲ್ಲೆಯಲ್ಲಿಯೂ ಕೂಡಾ ಪರಿಸರದ ರಕ್ಷಣೆಯ ಹೆಸರಿನಲ್ಲಿ ಬಂದ ಯೋಜನೆಗಳಿಗೆಲ್ಲಾ ವಿರೋಧ ವ್ಯಕ್ತಪಡಿಸುವ ಕುರುಡುತನ ನಮ್ಮದಲ್ಲ. ಬದಲಾಗಿ ಆ ಯೋಜನೆಯನ್ನು ಜಿಲ್ಲೆಗೆ ಆಹ್ವಾನಿಸಿ, ಅದರಿಂದ ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ವೈಜ್ಞಾನಿಕ ಕ್ರಮ ಅನುಸರಿಸಲು ಒತ್ತಾಯಿಸುತ್ತೇವೆ. ಉದ್ಯೋಗವನ್ನು ಕೊಡುವ ಯೋಜನೆ ಹೆಚ್ಚಾಗಿ ಬರಬೇಕಾಗಿದೆ. ಇಂತಹ ಯುವಜನ ಪರವಾದ ಅಭಿವೃದ್ಧಿಗಾಗಿ ನಾವು ಒತ್ತಾಯಿಸಬೇಕಾಗಿದೆ ಎಂದು ಹೇಳಿದರು.

ರಾಮಾ ಗೌಡ ಸ್ವಾಗತಿಸಿದರು. ಶ್ರೀಧರ ಶೆಟ್ಟಿ ವಂದಿಸಿದರು.

ಡಿ.ವೈ.ಎಫ್.ಐ.ನ ನೂತನ ಜಿಲ್ಲಾ ಸಮಿತಿ:
ಅಧ್ಯಕ್ಷರು-ಶ್ರೀಧರ ಟಿ.ಶೆಟ್ಟಿ
ಕಾರ್ಯದರ್ಶಿ-ವಿಠ್ಠಲ ಭಂಡಾರಿ
ಉಪಾಧ್ಯಕ್ಷ-ಎನ್.ವಿ. ಭಟ್ಟ
ಸಹ ಕಾರ್ಯದರ್ಶಿ :ರಾಮಾ ಗೌಡ,
ಖಜಾಂಚಿ ಶಿವರಾಜು
ಸದಸ್ಯರು-ಜಗದೀಶ ಆಚಾರಿ, ಮಹೇಶ ಭಂಡಾರಿ, ಅನಂತ ಗೌಡ, ತುಕಾರಾಮ ನಾಯ್ಕ, ಸುಭಾಷ ಕೊಪ್ಪಿಕರ, ಎಲ್.ಎಂ. ನಾಯ್ಕ.

ಸುರಪುರ ತಾಲೂಕು ಯುವಜನ ಸಮ್ಮೇಳನ:

ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನ ಯುವ ಜನರ ಪ್ರಥಮ ಸಮ್ಮೇಳನವು ಫೆಬ್ರವರಿ 19 ಮತ್ತು 20 ರಂದು ಡಿ.ವೈ.ಎಫ್.ಐ. ನೇತೃತ್ವದಡಿಯಲ್ಲಿ ನಡೆಯಿತು. ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ರಾಜ್ಯ ಡಿ.ವೈ.ಎಫ್.ಐ. ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಆಗಮಿಸಿ ಯುವ ಜನತೆ ಸಮಸ್ಯೆಗಳನ್ನು ವಿವರಿಸಿ ಅವುಗಳ ಪರಿಹಾರೋಪಾಯಗಳಿಗಾಗಿ ಯುವ ಜನರು ಐಕ್ಯತೆಯಿಂದ ಹೋರಾಡಲು ಕರೆನೀಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಶ್ರೀಮಂತ ಚ. ಬಿರಾದಾರ ಮಾತನಾಡಿದರು.

ಫೆಬ್ರವರಿ 20 ರಂದು ನಡೆದ ಬಹಿರಂಗ ಸಭೆಯಲ್ಲಿ ಎಸ್.ವೈ. ಗುರುಶಾಂತ್ ಮಾತನಾಡಿದರು. ಇದೆ ಸಂದರ್ಭದಲ್ಲಿ ಕಾರ್ಮಿಕ ಮುಖಂಡರಾದ ದೇವಿಂದ್ರ ಪತ್ತಾರ್, ಚನ್ನಪ್ಪ ಅನೆಗುಂದಿ ಶ್ರೀಮಂತ ಹೋಳಕರ, ಜೈಲಾಲ ತೋಟದ ಮನಿ, ಚಂದ್ರಪ್ಪಾ ಹೊಸ್ಕೆರ ಮೊದಲಾದವರು ಮಾತನಾಡಿದರು.

ನೂತನ ತಾಲೂಕು ಸಮಿತಿ:
ಅಧ್ಯಕ್ಷರು ಯಲ್ಲಣ್ಣ ಗುವೆಂದಾರ ಉಪಾಧ್ಯಕ್ಷರು-ಭೀಮಣ್ಣ ಗೊನಾಳ, ಕೃಷ್ಣಪ್ಪಾ ಹವಾಲ್ದಾರ, ಕಾರ್ಯದರ್ಶಿ ಎಲ್ಲಪ್ಪ ಚೆನ್ನಾಕಾರ, ಸಹಕಾರ್ಯದರ್ಶಿಗಳು ಹನುಮಂತ ದಿವಾಕರ, ಶಿವರಾಜ ಪಾಟೀಲ ಕೊಡ್ಲಿಗಿ ಹಾಗೂ ಖಜಾಂಚಿಯಾಗಿ ಗೋವಿಂದಪ್ಪ ಬಿಜಾಪೂರ ಆಯ್ಕೆಯಾದರು.

ದೇವದುರ್ಗ: ತಾಲೂಕಿನ ಜಾಲಹಳ್ಳಿಯ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಹಾಗೂ ಮಹ್ಮದೀಯ ಯುವಕ ಮಂಡಳಿ (ರಿ)ಯ ಅಶ್ರಯದಲ್ಲಿ ಇತ್ತೀಚೆಗೆ ಕೋಮುಸೌಹಾರ್ದತೆ ಪ್ರತಿಪಾದಿಸುವ ನಿಟ್ಟಿನಲ್ಲಿ ಕೋಮುಸೌಹಾರ್ದತೆಯಲ್ಲಿ ಯುವಜನ ಹೆಸರಲ್ಲಿ ಸಮಾವೇಶ ನಡೆಯಿತು.

ದೇಶದ ಭವಿಷ್ಯ ಯುವಜನರ ಕೈಯಲ್ಲಿದೆ. ಅದನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಇಂದಿನ ಯುವಕರದ್ದು. ಇಂದು ಯುವಕರು ಚಂಚಲ ಸ್ವಭಾವದವರಾಗಿದ್ದು, ಅವರು ಕೋಮುವಾದದಂತಹ ಅಪಾಯದತ್ತ ಹೆಜ್ಜೆ ಇಡುತ್ತಿದ್ದಾರೆಂದು ನಾರಾಯಣ ಪುರ ಬಲದಂಡೆ ಕಾಲುವೆ ಹೋರಾಟ ಸಮಿತಿ ಪ್ರಧಾನ ಸಂಚಾಲಕರಾದ ಚಂದ್ರಶೇಖರ್ ಬಾಳೆ ಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಮಲ್ಲಯ್ಯ ಜಾಲಹಳ್ಳಿಯವರ ಅಧ್ಯಕ್ಷತೆಯ ಈ ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಅಯಾಜ್ ಅಹ್ಮದ್ ಹೈದರಾಲಿ ಮುಲ್ಲಾ ಮೊದಲಾದವರು ಮಾತನಾಡಿ ದೇಶದ ಆರ್ಥಿಕ ಒಂದೆಡೆ ಅವನತಿಯತ್ತ ಸಾಗುತ್ತಿದೆ, ಇನ್ನೊಂದೆಡೆ ದೇಶದ ಐಕ್ಯತೆಗೆ ಭಂಗ ಉಂಟಾಗುವ ರೀತಿ ಅಲ್ಪ ಸಂಖ್ಯಾತರ ಮೇಲೆ ದಾಳಿ ನಡೆಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಚಂದ್ರ ಶೇಖರ್ ನಾಡಗೌಡ ಪ್ರಾಸ್ತಾವಿಕ ಭಾಷಣ ಮಾಡಿದರು. ಇಬ್ರಾಹಿಂ ಯಾದಗೀರ್ ಕಾರ್ಯಕ್ರಮ ನಿರೂಪಿಸಿದರೆ, ಶೈಲೇಂದ್ರ ಕುಮಾರ್ ಘಾನಾಡೆ ವಂದಿಸಿದರು.

ಡಿ.ವೈ.ಎಫ್.ಐ. 6ನೇ ರಾಜ್ಯ ಸಮ್ಮೇಳನಕ್ಕೆ ಸ್ವಾಗತ ಸಮಿತಿ ರಚನೆ

ರಾಜ್ಯದಲ್ಲಿ ದಿನೇ ದಿನೇ ತಲೆ ಎತ್ತುತ್ತಿರುವ ಕೋಮುವಾದ ಒಂದೆಡೆ ಉದ್ಯೋಗ ನೀಡುವ ಬದಲಿಗೆ ಉದ್ಯೋಗ ಕಡಿತದಿಂದ ಯುವ ಜನರನ್ನು ಅಡಕೆ ಕತ್ತರಿಯಡಿ ನೂಕಿರುವ ಸರ್ಕಾರಗಳ ನೀತಿ ವಿರುದ್ಧ ಡಿ.ವೈ.ಎಫ್.ಐನ 6ನೇ ರಾಜ್ಯ ಸಮ್ಮೇಳನ ಕೊಡಗಿನ ವಿರಾಜ ಪೇಟೆಯಲ್ಲಿ ಏಪ್ರಿಲ್ 12, 13, 14 ರಂದು ನಡೆಯಲಿದೆ. ಈ ಸಮ್ಮೇಳನದಲ್ಲಿ ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್, ತ್ರಿಪುರ ರಾಜ್ಯದ ಯುವ ಮುಂದಾಳು ಹಾಗೂ ಸಚಿವರಾದ ಜಿತೇಂದ್ರ ಚೌಧರಿ ಮೊದಲಾದವರು ಪಾಲ್ಗೊಳ್ಳುವರು. ಏಪ್ರಿಲ್ 12 ರಂದು ಸಮ್ಮೇಳನದ ಅಂಗವಾಗಿ ಯುವಜನ ರ್‍ಯಾಲಿ ನಡೆಯಲಿದೆ.

ಈ ಸಮ್ಮೇಳನದ ಯಶಸ್ವಿಗಾಗಿ ಜಿಲ್ಲೆಯ ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರುಗಳುಳ್ಳ ಸ್ವಾಗತ ಸಮಿತಿ ರಚನೆ ಗೊಂಡಿದೆ.

ಗೌರವಾಧ್ಯಕ್ಷರು-ಎಂ.ಸಿ. ನಾಣಯ್ಯ ಜಿಲ್ಲಾ ಉಸ್ತುವಾರಿ ಸಚಿವರು, ಕಾರ್ಯಾಧ್ಯಕ್ಷರು - ಬಿ.ಆರ್. ಪ್ರಮೋದ್. ಅಧ್ಯಕ್ಷರು- ಪದ್ಮಿನಿ ಸೋಮಯ್ಯ, ವಿರಾಜಪೇಟೆ ಟೌನ್ ಪಂಚಾಯ್ತಿ ಅಧ್ಯಕ್ಷೆ, ಪ್ರಧಾನ ಕಾರ್ಯದರ್ಶಿ ಪೀಟರ್ ಲೋಬೋ, ಡಿ.ವೈ.ಎಫ್.ಐ. ಜಿಲ್ಲಾಧ್ಯಕ್ಷರು, ಉಪಾಧ್ಯಕ್ಷರುಗಳು: ಎ.ಆರ್. ಕೃಷ್ಣಕುಮಾರ್, ಟಿ.ಪಿ. ರಮೇಶ್, ಫಯಾಜ್ ಆಹಮ್ಮದ್, ಶಾಂತು ಅಪ್ಪಯ್ಯ, ವಸಂತ ಕುಮಾರ್ ಹೊಸಮನೆ, ಎಂ.ಟಿ. ವಿಜಯೇಂದ್ರ. ಮೈನುದ್ದೀನ್, ಶಿಮ್ಲಾ ಶ್ರೀನಿವಾಸ್, ಕೆ.ಬಿ.ಶಾಂತಪ್ಪ, ಡಿ.ಜೆ. ಪದ್ಮನಾಭ, ಎಂ.ಎ. ರಮೇಶ

ಕಾರ್ಯದರ್ಶಿಗಳು: ಕಿಶೋರ್ ಕುಟ್ಟಪ್ಪ, ರಮನಾಥ. ಬಿ.ಎಸ್., ಕಾವೇರಿ ಕೆ.ಎಂ., ಕಾಳಯ್ಯ ಹೆಚ್.ಎಂ., ವಿದ್ಯಾಧರ್ ಕೆ.ಆರ್., ನಾರಾಯಣ ಕೆ. ಕೆ., ಖಜಾಂಚಿ: ದಾಮೋದರ್.ಪಿ.ಆರ್

ಸ್ವಾಗತ ಸಮಿತಿಯಡಿ ವಿವಿಧ ಉಪ ಸಮಿತಿಗಳು ರಚನೆಯಾಗಿದ್ದು, ಸಮ್ಮೇಳನದ ಯಶಸ್ವಿಗಾಗಿ ಎಲ್ಲಾ ಸಿದ್ಧತಾ ಕಾರ್ಯಗಳು ವ್ಯಾಪಕವಾಗಿ ನಡೆಯುತ್ತಿದೆ.

ವಿದ್ಯುಚ್ಛಕ್ತಿ ಮಂಡಳಿ ಮುಂದೆ ರೈತರ ಧರಣಿ

ಬೆಂಗಳೂರು: ರೈತರ ಪಂಪ್‌ಸೆಟ್‌ಗಳಿಗೆ ಸಕಾಲದಲ್ಲಿ ವಿದ್ಯುತ್ ನೀಡಬೇಕು, ರೈತರ ಹಳೆ ಬಾಕಿಗಳನ್ನು ಮನ್ನ ಮಾಡಬೇಕು, ಕೆ.ಇ.ಬಿ. ಖಾಸಗೀಕರಣದ ಪ್ರಸ್ತಾಪ ಕೈಬಿಡಬೇಕು ಹಾಗೂ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ಫೆಬ್ರವರಿ 22 ರಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ 300 ಕ್ಕೂ ಹೆಚ್ಚು ಪಂಪ್ ಸೆಟ್ ಬಳಕೆದಾರರು ಕೆ.ಇ.ಬಿ. ಮುಂದೆ ಧರಣಿ ನಡೆಸಿದರು.

ಧರಣಿಕಾರರನ್ನುದ್ದೇಶಿಸಿ ಜಿಲ್ಲಾ ಅಧ್ಯಕ್ಷ ಎನ್.ವೆಂಕಟಾಚಲಯ್ಯ, ಹೆಚ್.ಸಿ. ಶಾಮಣ್ಣ ರೆಡ್ಡಿ, ಚಂದ್ರತೇಜಸ್ವಿ, ಶಿವರಾಮ ರೆಡ್ಡಿ ಮೊದಲಾದವರು ಮಾತನಾಡಿದರು. ಪಂಪ್‌ಸೆಟ್ ಬಳಕೆದಾರರ ಬೇಡಿಕೆಗಳನ್ನು ಬೆಂಬಲಿಸಿ ಪ್ರಾಂತ ರೈತ ಸಂಘದ ಪ್ರ. ಕಾರ್ಯದರ್ಶಿ ಪಿ. ಜಗನ್ನಾಥ್, ಸಿಐಟಿಯು ಜಿಲ್ಲಾ ಮುಖಂಡ ರಾಮಯ್ಯ ಮಾತನಾಡಿದರು. ಕೆ.ಇ.ಬಿ ಅಧ್ಯಕ್ಷರಿಗೆ ಬೇಡಿಕೆಗಳುಳ್ಳ ಮನವಿ ಸಲ್ಲಿಸಲಾಯಿತು.

ಈ ಕಾರ್ಯಕ್ರಮಕ್ಕೆ ಬೆಂಗಳೂರು ದಕ್ಷಿಣ ತಾಲೂಕು, ಮಾಗಡಿ, ದೊಡ್ಡ ಬಳ್ಳಾಪುರ ಮತ್ತು ಅನೇಕಲ್ ತಾಲೂಕುಗಳ ರೈತರು ಆಗಮಿಸಿದ್ದರು.


ರೈತರ ಸಮಸ್ಯೆ ಪರಿಹರಿಸುವಂತೆ ಮುಖ್ಯಮಂತ್ರಿಗೆ ಮನವಿ

ರೈತರ ಪಂಪ್‌ಸೆಟ್‌ಗಳಿಗೆ ಹಾಗೂ ಗೃಹ ಬಳಕೆದಾರರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಬೇಕು, ಪಂಪ್‌ಸೆಟ್‌ಗಳಿಗೆ ಮತ್ತಷ್ಟು ಠೇವಣಿ ಸಂಗ್ರಹದ ಆದೇಶವನ್ನು ವಾಪಸ್ಸು ಪಡೆಯಬೇಕು, ಶ್ರೀಮಂತರಿಂದ ಬರಬೇಕಾಗಿರುವ ಕೋಟ್ಯಾಂತರ ರೂ ಬಾಕಿ ವಸೂಲಿಗೆ ಕ್ರಮಕೈಗೊಳ್ಳಬೇಕು, ರೈತರನ್ನು ಆತ್ಮಹತ್ಯೆಗೀಳಿಸುವ ಸಾಲದ ಬಲೆಗಳಿಂದ ರಕ್ಷಿಸಬೇಕು ಎಂದು ಉಡುಪಿ ತಾಲ್ಲೂಕು ಪ್ರಾಂತ ರೈತ ಸಂಘದ ಸಮಿತಿ ತಹಸಿಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದೆ.

ಈ ನಿಯೋಗದಲ್ಲಿ ಉಡುಪಿ ಜಿಲ್ಲಾಮುಖಂಡರಾದ ಡೇವಿಡ್.ಎ. ಕರ್ಕಡ, ಎನ್. ಸಾದುಅಮೀನ್, ದೋಗು ಸುವರ್ಣ, ಗುಡ್ಡ ಪೂಜಾರಿ ಮಲ್ಲಾರು, ರಾಜುಪೂಜಾರಿ, ವಿಠಲಶೆಟ್ಟಿ ಮೊದಲಾದವರಿದ್ದರು.

ಬಿಜೆಪಿ ಸಮ್ಮಿಶ್ರ ಸರ್ಕಾರದ ಒಂದು ವರ್ಷ

ಮೂರು 'ಭ' ಗಳನ್ನು ಹೆಚ್ಚಿಸಿದ ವರ್ಷ



ವ್ಯಂಗ್ಯಚಿತ್ರ ಕೃಪೆ: 'ದಿ ಹಿಂದು'

ವಾಜಪೇಯಿ ಸರಕಾರ ಹೇಗೋ ಒಂದು ವರ್ಷವನ್ನು ಮುಗಿಸಿದ ಬಗ್ಗೆ ಸರ್ಕಾರಿ ಖರ್ಚಿನಲ್ಲಿ ಭಾರೀ ಪ್ರಚಾರ ನಡೆದಿದೆ. ಆದರೆ ವರ್ಷದಲ್ಲಿ ಈ ಕೇಂದ್ರ ಸರಕಾರ ಎಂಬುದು ನಿಜವಾಗಿ ಸಾಧಿಸಿದ್ದೇನು? ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಪರಿಶೀಲಿಸಿದ್ದಾರೆ.

ಮಾರ್ಚ್ 19. ಅರೆ! ಬಿಜೆಪಿಯ ನಾಯಕತ್ವದ ಸಮ್ಮಿಶ್ರ ಸರ್ಕಾರ ಒಂದು ವರ್ಷ ಮುಗಿಸಿತಲ್ಲ! ಇದೊಂದೇ ಅವರ ಸಾಧನೆ. ಯಾವ ಸಾರ್ವಜನಿಕ ಕ್ಷೇತ್ರವನ್ನೂ ಹೊಲಸೆಬ್ಬಿಸದೆ ಅವರು ಬಿಟ್ಟಿಲ್ಲ. ಅಧಿಕಾರ ವಹಿಸಿ ಕೊಂಡಾಗ ಈ ಸರ್ಕಾರ ರಾಷ್ಟ್ರೀಯ ಅಜೆಂಡಾ ಒಂದನ್ನು ತಯಾರಿಸಿತ್ತು (Natonal Agenda for Governance NAG -ನಾಗ್). ಬಿಜೆಪಿ 'ಸುಭದ್ರ ಸರ್ಕಾರ ಸಮರ್ಥ ನಾಯಕತ್ವ'ದ ಘೋಷಣೆ ನೀಡಿತು. ಭೂಖ್ (ಹಸಿವು) ಭಯ (ಭಯ) ಭ್ರಷ್ಟಾಚಾರ್ (ಭ್ರಷ್ಟಾಚಾರ) ನಿರ್ಮೂಲನ ಮಾಡುವ ಆಶ್ವಾಸನೆ ನೀಡಿತ್ತು. ಇವೆಲ್ಲಾ ನಿರ್ಮೂಲನೆ ಆಗಿಲ್ಲ ಎಂಬುದು ಚಿಕ್ಕಮಗುವಿಗೂ ಗೊತ್ತಾಗುವ ವಿಷಯ. ಆದರೆ ಇವೆಲ್ಲವನ್ನು ಹೆಚ್ಚಿಸಲು ಆಶ್ವಾಸನೆ ನೀಡಿದ್ದರೋ ಎಂಬ ಶಂಕೆ ಬರುವಷ್ಟು ಹದಗೆಟ್ಟ ಪರಿಸ್ಥಿತಿ.


ರೋಲ್ ಬ್ಯಾಕ್ ಸರ್ಕಾರ

ಸಮತಾ-ಮಮತಾ-ಲಲಿತಾ ರೋಗ ಸರ್ಕಾರವನ್ನು ಸದಾ ಕಾಡುತ್ತಿತ್ತು ಇವರಿರುವವರೆಗೆ ಸುಭದ್ರತೆ ಸರ್ಕಾರದ ಬಳಿ ಸುಳಿಯಲೂ ಇಲ್ಲ. ಸರ್ಕಾರ ಏನನ್ನೋ ಮಾಡುವುದು, ಈ ತ್ರಿವಳಿಗಳಲ್ಲೊಬ್ಬರು ಹೂಂಕಾರ ಹಾಕಿದ್ರೆ ಸಾಕು, ಆ ಕ್ರಮ ಹಿಂದಕ್ಕೆ-ರೋಲ್‌ಬ್ಯಾಕ್. ಈ ಸರ್ಕಾರಕ್ಕೆ ರೋಲ್ ಬ್ಯಾಕ್ ಎಂಬ ಅಡ್ಡ ಹೆಸರೇ ಬಿದ್ದಿದೆ. ಬಿಜೆಪಿ ರಾಜ್ಯ ಸರ್ಕಾರಗಳ ಒಳಗೆ ಯಾದವೀ ಕಲಹ (ದೆಹಲಿಯಲ್ಲಿ ಖುರಾನಾ ಸಾಹಿಬ್ ಸಿಂಗ್-ಸುಶ್ಮಾ ಸ್ವರಾಜ್ ಕಲಹವನ್ನೇ ನೋಡಿ), ಸರ್ಕಾರದ ಸಚಿವರ ನಡುವೆ ಘರ್ಷಣೆ (ಮುರಳಿ ಮನೋಹರ ಜೋಶಿ ಉಮಾ ಭಾರತಿ ರಗಳೆ ನೋಡಿ) ಸುಭದ್ರತೆಯ ಬದಲು ಅರಾಜಕತೆಯ ಸೀಮೆಗೆ ತಂದು ನಿಲ್ಲಿಸಿತ್ತು.

ಭ್ರಷ್ಟಾಚಾರಕ್ಕೆ ಅಗ್ರಮಣೆ

ಭ್ರಷ್ಟಾಚಾರದ ಮೂಲೋತ್ಪಾಟನೆ ಎನ್ನುವದು ಬೊಬ್ಬಾಟವಾಗೇ ಉಳಿದಿದೆ. ಲೋಕಪಾಲ್ ಮಸೂದೆ (UF ಸರ್ಕಾರ ಈಗಾಗಲೇ ಅಂಗೀಕರಿಸಿದ್ದರೂ), ರಪ್ತು ಹಣ ಬೆಳ್ಳಗೆ ಮಾಡುವುದರ ವಿರುದ್ಧ ಮಸೂದೆ (ಸಾಕಷ್ಟು ಹಲ್ಲುಕಿತ್ತು ನಿರರ್ಥಕವಾಗಿದ್ದರೂ) ಪಾರ್ಲಿಮೆಂಟಿನಲ್ಲಿ ಪಾಸು ಮಾಡಿಸಲು ಸರ್ಕಾರಕ್ಕೆ ಪುರಸೊತ್ತೇ ಆಗಲಿಲ್ಲ.

ಇನ್ನು ಭ್ರಷ್ಟಾಚಾರದ ಕೇಸುಗಳನ್ನು ಬೇಗನೇ ಮುಗಿಸಿ ಕ್ರಮ ಕೈಗೊಳ್ಳುವ ಬಗ್ಗೆ ಈ ಸರ್ಕಾರದ್ದು ರೆಕಾರ್ಡೇ ಎನ್ನಬೇಕು. ಹಿಂದೆ ಯಾವ ಭ್ರಷ್ಟ ಜನರನ್ನು ಸರ್ಕಾರವೂ ಇಷ್ಟು ರಾಜಾರೋಷವಾಗಿ ರಕ್ಷಿಸಲಿಲ್ಲ ಎಂದು ಧಾರಾಳವಾಗಿ ಹೇಳಬಹುದು. ವಿರೋಧ ಪಕ್ಷವಾಗಿದ್ದಾಗ ಜಯಲಲಿತಾ ಸುಖರಾಂ ಮೇಲೆ ಎಗರಾಡುತ್ತಿದ್ದ, ವೀರಾವೇಶದಿಂದ ಮಾತಾನಾಡುತ್ತಿದ್ದ ಬಿಜೆಪಿ ಅವರಿಗೆ ಈಗ ಉರುಳು ಸೇವೆ ಸಲ್ಲಿಸುತ್ತಿದೆ. ಕೇಸುಗಳ ಟ್ರಾನ್ಸ್‌ಫರ್, ಜಡ್ಜುಗಳ ಟ್ರಾನ್ಸ್‌ಫರ್ ರಿಟೈರ್ ಮಾಡುವುದು ಒಂದಲ್ಲ ಎರಡಲ್ಲ ಜಯಲಲಿತರನ್ನು ಭ್ರಷ್ಟಾಚಾರದ ಕೇಸುಗಳಿಂದ ರಕ್ಷಿಸಲು ಮಾಡಿದ್ದು. ಜಯಲಲಿತಾ ಮಾತ್ರ ಸರ್ಕಾರ ರಕ್ಷಿಸಬಲ್ಲವಳು ತಾನೇ! 11ನೇ ಲೋಕಸಭಾದಲ್ಲಿ ಎರಡುವಾರ ಯಾರ ವಿರುದ್ಧ ಭ್ರಷ್ಟಾಚಾರದ ಅಪಾದನೆ ಬಗ್ಗೆ ಬಿಜೆಪಿ ಕೋಲಾಹಲ ನಡೆಸಿತ್ತೋ ಅದೇ ಸುಖರಾಂ ಈಗ ಅಪ್ತ ಮಿತ್ರ. ಅವರದೇ ವಿಶೇಷ ಆರ್ಥಿಕ ಸಲಹಾಗಾರ ಅಡ್ವಾಣಿ, ಯಶವಂತ ಸಿನ್ಹಾ, ಮಹಾಜನ್ ಮೇಲೆ ಗುರುತರ ಭ್ರಷ್ಟಾಚಾರ ಆರೋಪ ಮಾಡಿದ್ದಾರೆ. ರಕ್ಷಣಾ ಮಂತ್ರಿ ಜಾರ್ಜ್ ಫೆರ್ನಾಂಡಿಸ್ ಮೇಲೆ ಅಡ್ಮಿರಲ್ ವಿಷ್ಣು ಭಾಗವತ್ ಮಾಡಿದ ಭ್ರಷ್ಟಾಚಾರದ ಅಪಾದನೆ ಗುರುತರವಾದದ್ದೇ. ಜಪಾನಿ ಕಂಪನಿ ಸುಜುಕಿ ಮಾರುತಿಯನ್ನು ಮಾರಿಬಿಟ್ಟದ್ದಂತೂ ಭ್ರಷ್ಟಾಚಾರದ ಪರಾಕಾಷ್ಟೆ.



ಕೃಪೆ: 'ದಿ ಹಿಂದು'ನಲ್ಲಿ ಸುರೇಂದ್ರನ್

'ವಿದೇಶಿ' ಯಾದ ಸ್ವದೇಶಿ!

ಪೇಟೆಂಟ್ ಮಸೂದೆ ವಿಮಾ ಖಾಸಗೀಕರಣ ಮಸೂದೆ ವಿಷಯದಲ್ಲಂತೂ ಬಿಜೆಪಿಯ ತಿಪ್ಪರಲಾಗ ಈಗ ಜಗಜ್ಜಾಹೀರು. ಈ ಎರಡು ಮಸೂದೆಗಳನ್ನು ಕಾಂಗ್ರೆಸ್ ಸರ್ಕಾರ ತಂದಾಗ ಎಡ ಪಕ್ಷಗಳ ಜತೆ ವೀರಾವೇಶದಿಂದ ವಿರೋಧಿಸಿದ ಬಿಜೆಪಿ, ಈಗ ಅಷ್ಟೇ ವೀರಾವೇಶ ದಿಂದ ಪಾಸು ಮಾಡಿಸಲು ಹೆಣಗಿತು. ಅದು ಮಾತ್ರವಲ್ಲ ನಾಚಿಕೆ ಇಲ್ಲದ ರೀತಿಯಲ್ಲಿ ಕಾಂಗ್ರೆಸ್‌ನ ಜತೆ ಶಾಮೀಲಾಗಿ ಈ ಮಸೂದೆಗಳನ್ನು ಪಾಸು ಮಾಡಿಸಿಕೊಂಡಿದೆ.

ಸ್ವದೇಶೀ ಮಂತ್ರ ಜಪಿಸುತ್ತಾ ಈ ಸರ್ಕಾರ ಭಾರತೀಯ ಕಂಪನಿಗಳನ್ನು, ಅವುಗಳ ಸ್ವತ್ತನ್ನೆಲ್ಲಾ ವಿದೇಶಿ ಕಂಪನಿಗಳಿಗೆ ಧಾರೆ ಎರೆದು ಕೊಟ್ಟಿದೆ. ಪರಿಣಾಮ ಸ್ಪಷ್ಟವಿದೆ. ಬಿರ್ಲಾರ ಹಿಂದೂಸ್ತಾನ ಮೋಟಾರ್ಸ್ ಜನರಲ್ ಮೋಟಾರ್ಸ್ ಜೋಳಿಗೆಗೆ ಬಿದ್ದಿದೆ. ಫೋರ್ಡ್ ಮಹೀಂದ್ರಾ ಕಂಪನಿಯನ್ನು ನುಂಗಿದೆ. ಯುನಿಲಿವರ್ ಟಾಟಾನ ಟೆಲ್ಕೊವನ್ನು ಕಬಳಿಸಿದೆ. ಕೋಕಾ ಕೋಲಾ ಪಾರ್ಲೆಯನ್ನು ನುಂಗಿ ಕೋಕ್ ಕುಡಿದಿದೆ. ಟಾಟಾ ಬಿರ್ಲಾ ಮಹೀಂದ್ರಾಗಳದ್ದೇ ಈ ಕತೆಯಾ ದರೆ ಇತರ ಚಿಕ್ಕ ಕಂಪನಿಗಳ ಅವಸ್ಥೆ ಏನು? ವಿದೇಶೀ ಕಂಪನಿಗೆ ಶೇಕಡಾ 75, ಅನಿವಾಸಿ ಭಾರತೀಯರಿಗೆ ಶೇಕಡಾ 100 ಕ್ಕೆ ಅಟೋಮ್ಯಾಟಿಕ್ ಕ್ಲಿಯರೆನ್ಸ ಮಿತಿ ಏರಿಸಿದ್ದು, ಕಂಪನಿಗಳ ವಿಲೀನ, ವಹಿಸಿಕೊಳ್ಳುವುದನ್ನು ಬಜೆಟ್ ಸುಲಭ ಮಾಡಿದ್ದು ಇತ್ಯಾದಿ ಇದಕ್ಕೆ ಕಾರಣ.

ಸಾರ್ವಜನಿಕ ಕ್ಷೇತ್ರದ ಲೂಟಿ ಮತ್ತು ಬೆರೋಜ್‌ಗಾರಿ ಬಡಾವೋ

ಉತ್ತಮವಾಗಿ ನಡೆಯುತ್ತಿರುವ ಸಾರ್ವಜನಿಕ ಕ್ಷೇತ್ರದ ಘಟಕಗಳ ಬೇಕಾಬಿಟ್ಟಿ ಮಾರಾಟ ನಡೆದಿದೆ. ಕ್ರಾಸ್ ಹೋಲ್ಡಿಂಗ್ ಮೂಲಕ ಈ ಘಟಕಗಳ ಆಸ್ತಿಯನ್ನು ಸರ್ಕಾರ ತನ್ನ ದುಂದುವೆಚ್ಚಕ್ಕೆ ಬಳಸಿ ಕೊಂಡಿದೆ. ಸಾವಿರಾರು ಕೋಟಿಗಳಷ್ಟು ಕಾರ್ಮಿಕರಿಗೆ ರಿಟೈರ್ ಮಾಡುವಾಗ ಈಗ ಹಣ ಕೊಡುವುದು ಇಲ್ಲ. ಅತನಿಗೆ ಸರ್ಕಾರದ ಬಾಂಡ್‌ಗಳನ್ನು ಕೊಟ್ಟು ಕಳಿಸಲಾಗುತ್ತಿದೆ. ಇದು ಬಿಜೆಪಿಯ ಒಂದು ವರ್ಷದ ಸಾಧನೆ! ಸಾರ್ವಜನಿಕ ಕ್ಷೇತ್ರಗಳ ಘಟಕಗಳ ಮುಚ್ಚುವಿಕೆ, ಸರ್ಕಾರಿ ನೌಕರರಿಗೆ ನಿವೃತ್ತಿ ವಯಸ್ಸು ಎರಡು ವರ್ಷ ಏರಿಸಿದ್ದು, ರೋಜಗಾರ್ ಯೋಜನೆಯನ್ನು ಕಾರ್ಯಗತ ಮಾಡದಿರುವುದು (17 ಸಾವಿರ ಕೋಟಿ ರೂಗಳ ಯೋಜನಾ ಹಣವನ್ನು ಖರ್ಚೆ ಮಾಡಿಲ್ಲ), ಈಯೋಜನೆಗಳಿಗೆ ಹಣ ಕಡಿತ ಇವೆಲ್ಲವುಗಳಿಂದ ಬೇರೋಜಗಾರಿ ಹಠಾವೋ ಅಲ್ಲ, ಬೆರೋಜ್‌ಗಾರಿ ಬಡಾವೋ ಅವರ ಉದ್ದೇಶ ಎಂದು ಸ್ಪಷ್ಟವಾಗಿದೆ.

ಭೂಖ್ ಬಡಾವೊ

ಅದೇ ರೀತಿ ಭೂಖ್ ಹಠಾವೊ ಭೂಖ್ ಬಡಾವೋ ಆಗಿದೆ. ವರ್ತಕರ ಜತೆ ಶಾಮೀಲಾಗಿ ಎಲ್ಲಾ ಅಗತ್ಯವಸ್ತುಗಳ, ತರಕಾರಿಗಳ ಬೆಲೆ ಏರಿಕೆಗೆ ಕಾರಣವಾಗಿದೆ ಒಂದು ಕಡೆ, ಇನ್ನೊಂದು ಕಡೆ. ಪ್ರತಿವಸ್ತುವಿನ ತಾನೇ ಬೆಲೆಗಳನ್ನು ಏರಿಸಿದೆ. ಬೆಲೆ ಏರಿಕೆ ಬಗ್ಗೆ ಅಂಕೆ ಸಂಖ್ಯೆಗಳ ಅಗತ್ಯವೇ ಇಲ್ಲ.

ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ಕೊಡಲಿ ಏಟು

ಸಂವಿಧಾನವನ್ನು ಪುನರ್ ವಿಮರ್ಶಿಸುವ ಬಗ್ಗೆ ಸಲಹೆ, ಚುನಾಯಿತ ಪಾರ್ಲಿಮೆಂಟಿಗೆ ಕಡ್ಡಾಯ ಐದು ವರ್ಷ ಅವಧಿಯ ಸಲಹೆ, ಪಾರ್ಲಿಮೆಂಟ್ ಅಧಿವೇಶನದಲ್ಲಿ ಇರದಾಗ, ಸುಗ್ರೀವಾಜ್ಞೆಗಳ ಸುಗ್ಗಿ, ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಕೇಂದ್ರ ಅಧ್ಯಯನ ತಂಡಗಳ ಅಸಂವೈಧಾನಿಕ ಮಧ್ಯ ಪ್ರವೇಶ, ಬಿಹಾರದಲ್ಲಿ ಕಲಮು 356ರ ಪ್ರಯೋಗ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ಕೊಡಲಿ ಏಟು ಕೊಡುವ ಕ್ರಮಗಳು. ಕೋಮುವಾದಿಗಳನ್ನು ಮುಖ್ಯ ಅಧಿಕಾರದ ಸ್ಥಾನಗಳಲ್ಲಿ ಸಂಶೋಧನಾ ಸಂಸ್ಥೆಗಳಲ್ಲಿ, ಆರೆಸ್ಸೆಸ್ ನಾಯಕರನ್ನು ಸರ್ಕಾರಿ, ಗವರ್ನರ್ ಹುದ್ದೆಗಳಲ್ಲಿ ನೇಮಕ ಸೇನಾ ಮುಖ್ಯಸ್ಥರ ಆಯ್ಕೆ, ಬಡ್ತಿಗಳೂ ಕೋಮುವಾದಿ ಚೆಲ್ಲಾಟ ನೌಕಾ ಸೇನಾ ಮುಖ್ಯಸ್ಥರ ವಜಾ ಇವೆಲ್ಲಾ ಪ್ರಸ್ತುತ ಜಾತ್ಯಾತೀತ ಪಾರ್ಲಿಮೆಂಟ್ ಪ್ರಭುತ್ವ ನಾಶ ಮಾಡಿ ಹಿಂದೂ ರಾಷ್ಟ್ರ ಹಿಂಬಾಗಿಲಿನಿಂದ ಹೇರುವುದಕ್ಕೆ ಸನ್ನಾಹ.

ಅಮೇರಿಕನ್ ಸಾಮ್ರಾಜ್ಯಶಾಹಿ ಮುಂದೆ ನಾಚಿಕೆಗೇಡಿನ ಉರುಳುಸೇವೆ

ಪೋಖ್ರಾನ್ ನಂತರ ದೇಶದ ಹೆಮ್ಮೆ ಹೆಚ್ಚಿದೆ ಎಂದು ಅರಚಿದ ಈ ಸರ್ಕಾರ ಅಮೆರಿಕ ಮತ್ತು ಇತರ ಸಾಮ್ರಾಜ್ಯ ಶಾಹಿಗಳ ಒತ್ತಡಕ್ಕೆ ಮಣಿದು CTBT ಗೆ ಸಹಿಹಾಕಲು ಪಾರ್ಲಿಮೆಂಟ್ ಮತ್ತು ಜನತೆಯ ಬೆನ್ನ ಹಿಂದೆ ಒಪ್ಪಿಕೊಂಡಿದೆ. ಈ ಸರ್ಕಾರ ಈಗಾಗಲೇ ಭಾರತ ತಲೆ ತಗ್ಗಿಸುವಂತೆ ಮಾಡಿದೆ.

ಕೋಮುವಾದಿ ಧಾಳಿ ಮುಗಿಲು ಮುಟ್ಟಿದೆ

ಅಯೋಧ್ಯೆಯ ರಾಮಮಂದಿರದ ನಿರ್ಮಾಣಕ್ಕೆ ಭರದ ಸಿದ್ಧತೆಯಿಂದ ಆರಂಭವಾಗಿ ಈ ಒಂದು ವರ್ಷದಲ್ಲಿ

ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿಕೆ

ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಮಾರ್ಚ್ 12 ಹಾಗೂ 13 ರಂದು ಸಭೆ ಸೇರಿ ಇತ್ತೀಚಿನ ಬೆಳವಣಿಗೆಗಳ ವಿಮರ್ಶೆ ನಡೆಸಿತು. ಸಭೆಯ ನಂತರ ನೀಡಿದ ಪತ್ರಿಕಾ ಹೇಳಿಕೆಯನ್ನು ಇಲ್ಲಿ ಕೊಡಲಾಗಿದೆ.

ಅಲ್ಪಸಂಖ್ಯಾತರ ಮೇಲೆ ಹಲ್ಲೆಗಳು - ಅಲ್ಪಸಂಖ್ಯಾತರ ಹಕ್ಕುಗಳಿಗೆ ರಕ್ಷಣೆಯಿಲ್ಲ

ಕೇಂದ್ರ ಸಮಿತಿ ಕಳೆದ ಡಿಸೆಂಬರ್ 1998 ರ ಮಧ್ಯಭಾಗದಲ್ಲಿ ನಡೆಸಿದ ಸಭೆಯ ನಂತರ ಕ್ರಿಶ್ಚಿಯನ್ ಕೋಮಿನ ಮೇಲೆ ಧಾಳಿಗಳು ಹೆಚ್ಚಿರುವುದನ್ನು ಆತಂಕದಿಂದ ಗಮನಿಸಿತು. ಈ ಧಾಳಿಗಳ ವ್ಯಾಪಕ ಸ್ವರೂಪವನ್ನು ನೋಡಿದಾಗ ಇವು ಅಲ್ಲೊಂದು ಇಲ್ಲೊಂದು ಸಂಭವಿಸುವ ಘಟನೆಗಳಲ್ಲ, ಆರ್.ಎಸ್.ಎಸ್. ಮತ್ತು ಅದಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಯೋಜಿತರೀತಿಯಲ್ಲಿ ನಡೆಸಿರುವ ಪ್ರಕ್ಷೋಭೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಆರ್.ಎಸ್.ಎಸ್. ಹಾಗೂ ವಿಶ್ವ ಹಿಂದು ಪರಿಷತ್ ಮತಾಂತರ ಎಂಬುದರ ಬೆದರಿಕೆಯ ಹೆಸರಲ್ಲಿ ತಮ್ಮ ದ್ವೇಷ ಪ್ರಚಾರವನ್ನು ಮುಚ್ಚಿಡಬಯಸುತ್ತಿವೆ. ಕೇಂದ್ರ ಸರ್ಕಾರ ಸಂವಿಧಾನವನ್ನು ಎತ್ತಿ ಹಿಡಿಯುವ ತನ್ನ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲವಾಗಿದೆ. ಗುಜರಾತಿನಲ್ಲಂತೂ ಇದು ಎದ್ದು ಕಾಣುತ್ತಿದೆ. ಅಲ್ಲಿಯ ಬಿಜೆಪಿ ಸರಕಾರ ಹೊರಡಿಸಿದ ಪೋಲೀಸ್ ಸುತ್ತೋಲೆಗಳು ಕ್ರಿಶ್ಚಿಯನ್ ಮತ್ತು ಮುಸ್ಲಿಂ ಕೋಮುಗಳನ್ನು ಸಂದೇಹದಿಂದ ನೋಡಿವೆ. ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗ ಸಂವಿಧಾನ ನೀಡಿರುವ ಅಲ್ಪಸಂಖ್ಯಾತರ ಹಕ್ಕುಗಳು ಸಿಗುವಂತೆ ಮಾಡುವುದು ಸಾಧ್ಯವಿಲ್ಲ ಎಂಬುದನ್ನು ಇತ್ತೀಚಿನ ಅನುಭವ ತೋರಿಸಿಕೊಟ್ಟಿದೆ.

ಈದ್ ಹಬ್ಬದ ವೇಳೆ ಪ್ರಾಣಿವಧೆ ಬಗ್ಗೆ ವಿಶ್ವಹಿಂದು ಪರಿಷದ್ ಮತ್ತು ಭಜರಂಗ ದಳ ಒಡ್ಡಿರುವ ಬೆದರಿಕೆಗಳನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿತು. ಇದು ಕೋಮು ಗಲಭೆಗಳನ್ನು ಪ್ರಚೋದಿಸುವ ಉದ್ದೇಶದ್ದು. ಕೇಂದ್ರ ಸರ್ಕಾರ, ವಿಶೇಷವಾಗಿ ಗುಜರಾತ್ ಮತ್ತು ಮಹಾರಾಷ್ಟ್ರ ಸರಕಾರಗಳು ಈ ವಿಷಯದಲ್ಲಿ ಉದ್ರೇಕಕಾರಿ ಚಟುವಟಿಕೆಗಳು ನಡೆಯದಂತೆ ತಡೆಯುವುದು ಅತ್ಯವಶ್ಯಕ.

ಕೇಂದ್ರ ಬಜೆಟ್- ಮತ್ತಷ್ಟು ಹೊರೆಗಳು; ವರ್ಷಾಂತ್ಯದೊಳಗೆ ಮತ್ತೆ ಹೊಸ ಹೊರೆಗಳ ಸಂಭವ

ಪ್ರಸಕ್ತ ವರ್ಷದ ಕೇಂದ್ರ ಬಜೆಟ್ ಬಹುಪಾಲು ಪರೋಕ್ಷ ತೆರಿಗಗಳಿಂದಲೇ ಸಂಪನ್ಮೂಲ ಸಂಗ್ರಹಕ್ಕೆ ಒತ್ತು ನೀಡಿ ಜನಗಳ ಮೇಲೆ ಇನ್ನಷ್ಟು ಹೊರೆಗಳನ್ನು ಹಾಕಲಿದೆ. ಏಕೆಂದರೆ ಪರೋಕ್ಷ ತೆರಿಗೆಗಳು ಬೆಲೆಯೇರಿಕೆಗಳ ಮೂಲಕ ಹೊರೆಯನ್ನು ಬಳಕೆದಾರರ ಮೇಲೆ ವರ್ಗಾಯಿಸುತ್ತವೆ. ಬಜೆಟ್ ಮೊದಲೇ ಅಕ್ಕಿ,ಗೋಧಿ, ಸಕ್ಕರೆ, ಯೂರಿಯಾ, ಅಡುಗೆ ಅನಿಲದ ಬೆಲೆಗಳನ್ನು ಏರಿಸಲಾಗಿತ್ತು. ಜತೆಗೆ ರೈಲ್ವೇ ಬಜೆಟ್ ಸಾಗಾಣಿಕೆ ದರಗಳನ್ನು ಏರಿಸಿತ್ತು. ಈ ಹಿನ್ನೆಲೆಯಲ್ಲಿ ಬಂದ ಬಜೆಟ್ ಡೀಸೆಲ್ ಬೆಲೆಗಳನ್ನು ಏರಿಸಿತು. ಇವೆಲ್ಲಾ ಸೇರಿ ಜೀವನಾವಶ್ಯಕ ಸರಕುಗಳ ಸಾಗಾಣಿಕೆ ಖರ್ಚು ಗಮನಾರ್ಹವಾಗಿ ಏರಿ ಅವು ಹಣದುಬ್ಬರ ವನ್ನು ಹೆಚ್ಚಿಸಲಿವೆ. ಇದರಿಂದ ಜನಸಾಮಾನ್ಯರ ನಿಜ ಆದಾಯ ಇಳಿದು, ಅವರ ಬದುಕಿನ ಮೇಲೆ ಇನ್ನಷ್ಟು ಹೊರೆ ಹಾಕಲಿದೆ.

ಕೇಂದ್ರ ಬಜೆಟ್ ಕಂಪನಿ ವಲಯ ಮತ್ತು ಶ್ರೀಮಂತ ವಿಭಾಗಗಳಿಗೆ 8000 ಕೋಟಿ ರೂ.ಗಳಷ್ಟು ರಿಯಾಯ್ತಿಗಳನ್ನು ಕೊಟ್ಟಿದೆ. ಅಲ್ಲದೆ ಕೈಗಾರಿಕಾ ಹಿಂಜರಿತದ ಸಮಸ್ಯೆಯನ್ನು ಎದುರಿಸುವಲ್ಲಿ ವಿಫಲವಾಗಿರುವುದಷ್ಟೇ ಅಲ್ಲ, ಅದನ್ನು ಇನ್ನಷ್ಟು ಹೆಚ್ಚಿಸಲಿದೆ. ಹಣಕಾಸು ಸಂಸ್ಥೆಗಳಿಗೆ, ಶೇರು ಮಾರುಕಟ್ಟೆಗಳಿಗೆ ನೀಡಿರುವ ದೊಡ್ಡ ರಿಯಾಯ್ತಿಗಳು ಈಗಿನ ಬಿಕ್ಕಟ್ಟಿಗೆ ಕಾರಣವಾದ ಬೇಡಿಕೆಯಲ್ಲಿನ ಸ್ಥಗಿತತೆಯ ಸಮಸ್ಯೆಯನ್ನು ನಿವಾರಿಸುವುದಿಲ್ಲ.

ವಿದೇಶೀ ಬಂಡವಾಳಕ್ಕೆ 75% ಹಾಗೂ ಅನಿವಾಸಿ ಹೂಡಿಕೆಗಳಿಗೆ 100% ನೇರ ಅನುಮತಿಯಂತಹ ಹಲವಾರು ಪ್ರೋತ್ಸಾಹಕ ಕ್ರಮಗಳಿಂದಾಗಿ ಈ ಬಜೆಟ್ ಸ್ವದೇಶಿಯನ್ನು ಅಂತಿಮವಾಗಿ ಸಮಾಧಿ ಮಾಡಿದೆ. ಕಂಪನಿಗಳ ವಿಲೀನಗಳು, ವಹಿಸಿಕೊಳ್ಳುವಿಕೆಗಳಿಗೆ ಸೌಲಭ್ಯ ಕಲ್ಪಿಸಿ ಭಾರತೀಯ ಆಸ್ತಿಗಳು ವಿದೇಶಿ ಕೈಗಳಿಗೆ ಹೋಗುವಂತೆ ಈ ಬಜೆಟ್ ಮಾಡಿದೆ.

ಲಾಭದಲ್ಲಿರುವ ಸಾರ್ವಜನಿಕ ವಲಯದಲ್ಲಿರುವ ಘಟಕಗಳಲ್ಲಿ ದೊಡ್ಡ ಪ್ರಮಾಣದ ಬಂಡವಾಳವನ್ನು ಹಿಂತೆಗೆದುಕೊಳ್ಳುವ ಅ[illegible] ನಷ್ಟದಲ್ಲಿರುವ ಘಟಕಗಳನ್ನು ಮುಚ್ಚಿಯೇ ಬಿಡುವ ವಾಜಪೇಯಿ ಸರಕಾರದ ಆಕಾಂಕ್ಷೆ ಈ ಬಜೆಟ್ ಪ್ರಸ್ತಾಪಗಳಿಂದ ದೃಢಪಟ್ಟಿದೆ. ವಿ.ಆರ್.ಎಸ್. ಯೋಜನೆಯಡಿ ಸಾರ್ವಜನಿಕ ವಲಯದ ಘಟಕಗಳ ಬಾಂಡ್(ಸಾಲಪತ್ರ)ಗಳನ್ನು ನೀಡುವ ಪ್ರಸ್ತಾ[illegible]



ಕೃಪೆ: 'ದಿ ಹಿಂದು'ನಲ್ಲಿ ಸುರೇಂದ್ರನ್

ಆರೆಸ್ಸೆಸ್ ಸಂಘ ಪರಿವಾರ ಕೋಮುವಾದಿ ದಾಳಿ ತಾರಕಕ್ಕೆ ಮುಟ್ಟಿದೆ. ಝಬುವಾದಲ್ಲಿ ಕ್ರೈಸ್ತ ಸನ್ಯಾಸಿನಿಯರ ಮೇಲೆ ಅತ್ಯಾಚಾರ, ಒರಿಸ್ಸಾದಲ್ಲಿ ಸ್ಟೈನ್ಸ್ ಜೀವಂತ ದಹನ, ಬಾಬಬುಡನಗಿರಿಯಲ್ಲಿ ದತ್ತ ಪೀಠ ವಿಮೋಚನೆಯ ಪ್ರಚೋದನೆ, ಸುರತ್ಕಲ್ ಕೋಮು ಗಲಭೆ, ಪಾಕಿಸ್ತಾನಿ ಕ್ರಿಕೆಟ್ ಟೀಮಿನ ವಿರುದ್ಧ ಶಿವಸೇನಾ ದಾಂಧಲೆ, ಫೈರ್ ಫಿಲಂನ ಮೇಲೆ ದಾಳಿ, ಎಂ.ಎಫ್. ಹುಸೇನರ ಮೇಲೆ ದಾಳಿ, ಮುಂಬಯಿಯಲ್ಲಿ ಗುಲಾಂ ಅಲಿ ಸಂಗೀತ ಕಚೇರಿಗೆ ತಡೆ ಹೀಗೆ ಒಂದಲ್ಲ ಎರಡಲ್ಲ ಕೋಮುವಾದಿ ಪ್ರಚೋದನೆಯ ದುಷತ್ಯಗಳು. ಶ್ರೀ ಕೃಷ್ಣ ಆಯೋಗದ ವರದಿಯ ಬಗ್ಗೆ ತಿರಸ್ಕಾರ; ಸರಸ್ವತಿ ವಂದನೆಯ ದಾಂಧಲೆ, ವಂದೇ ಮಾತರಂನ ಬಗ್ಗೆ ರಾದ್ಧಾಂತ, ಗುಜರಾತ್‌ನಲ್ಲಿ ಚರ್ಚುಗಳ ಸುಡುವಿಕೆ, ಕ್ರಿಶ್ಚಿಯನ್ನರ ಮೇಲೆ ದಾಳಿ-ಒಂದೇ ವರ್ಷದಲ್ಲಿ ಕೋಮುವಾದಿ ದಾಳಿ ತಾರತಕ್ಕೇರಿದ ಬಗೆ. ಪರಿಸ್ಥಿತಿ ಎಷ್ಟು ಹದಗೆಟ್ಟಿದೆಯೆಂದರೆ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಮುಖ್ಯಸ್ಥ ಸಂವಿಧಾನ ವಿಧಿಸಿರುವ ಅಲ್ಪಸಂಖ್ಯಾತರ ಬಗೆಗಿನ ಕರ್ತವ್ಯವನ್ನು ಸರ್ಕಾರ ಸಂಪೂರ್ಣ ಕೈ ಬಿಟ್ಟಿದೆ ಎಂದು ಖಾರವಾಗಿ ಹೇಳಬೇಕಾಗಿದೆ. ಚರಿತ್ರೆಯ ಪಠ್ಯ ಪುಸ್ತಕವನ್ನು ಕೋಮುವಾದಿಗೊಳಿಸುವ ಪ್ರಯತ್ನ ಬಿಜೆಪಿಯ ಹಳೆತಂತ್ರ - ಈಗ ಅದು ಪುನರುಜ್ಜೀವನಗೊಂಡಿದೆ.

ವಿದೇಶಿ ಮಿಶನರಿಗಳ ಮತಾಂತರ ಚಟುವಟಿಕೆಗಳು ಹಿಂದೂ ಧರ್ಮಕ್ಕೆ ಅಪಾಯ ಎಂಬ ನೆಪದಲ್ಲಿ, ಕ್ರೈಸ್ತರ ಮೇಲೆ ಅತ್ಯಾಚಾರ ಈ ಕೋಮುವಾದಿ ದಾಳಿಯ ತರ್ಕ. ಈ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಸಿ ಬಿಜೆಪಿ ಸರ್ಕಾರದ ಅನರ್ಥಗಳನ್ನು ಮುಚ್ಚಿಕೊಳ್ಳುವ ಹುನ್ನಾರ ಸಹ ಇದರ ತರ್ಕ

ಅಪರಾಧಗಳಲ್ಲಿ ಏರಿಕೆ- ಭಯ ಹೋಗಿರುವುದು ಕ್ರಿಮಿನಲ್‌ಗಳಿಗೆ

ಸರ್ಕಾರದ ಸೂತ್ರ ಹಿಡಿದ ಸಂಘ ಪರಿವಾರವೇ ಕೋಮುವಾದಿ ಹಿಂಸಾಚಾರವನ್ನು ತನ್ನ ನೀತಿ ಎಂದು ಅಂಗೀಕರಿಸಿರುವಾಗ ಇತರ ಅಪರಾಧಿ ಶಕ್ತಿಗಳು ಸುಮ್ಮ ನಿರುತ್ತಾರೆಯೇ? ಅಪರಾಧ ಗಮನಾರ್ಹವಾಗಿ ಏರಿದೆ. ಈ ಒಂದು ವರ್ಷದಲ್ಲಿ ಅಪರಾಧ 60 ಸಾವಿರಕ್ಕೆ ಏರಿದೆ. ಮೊದಲ ಸ್ಥಾನ ಉತ್ತರ ಪ್ರದೇಶ, ಎರಡನೇ ಸ್ಥಾನ ಮಹಾರಾಷ್ಟ್ರ. ಎರಡೂ ಬಿಜೆಪಿ ಪರಿವಾರದ ನಿಯಂತ್ರಣದಲ್ಲಿರುವವೇ. 60 ಸಾವಿರ ಅಪರಾಧಗಳಲ್ಲಿ ಕೊಲೆಗಳೇ 38,000, ದೆಹಲಿಯ ಪರಿಸ್ಥಿತಿ ತೀರಾ ಹದಗೆಟ್ಟಿದೆ.

ಇಂತಹ ಸರ್ಕಾರ ಒಂದು ದಿನವೂ ಹೆಚ್ಚು ಇರಕೂಡದು. ಹಳೆಯ ಗಾದೆಯಂತೆ ದುಷ್ಟರು ಸಫಲರಾಗ ಬೇಕಾದರೆ ಶಿಷ್ಟರು ಸುಮ್ಮನಿರುವ ರಾಷ್ಟ್ರೀಯ ಸನ್ನಿವೇಶ ಮುಂದುವರೆಯ ಬಾರದು. ಸರ್ಕಾರವನ್ನು ಕಿತ್ತೊಗೆಯಲು ಎಲ್ಲಾ ಶಿಷ್ಟರು ಸಕ್ರಿಯರಾಗಬೇಕು.



ಕೃಪೆ: 'ದಿ ಹಿಂದು'ನಲ್ಲಿ ಕೇಶವ್

ಮುಖಭಂಗ, ಗೊಂದಲ ತಂದ ವಾಜಪೇಯಿಯವರ ಕಲ್ಕತ್ತಾ ಭೇಟಿ

ತನ್ನ ಸರಕಾರ ಒಂದು ವರ್ಷ ಮುಗಿಸಿದ್ದನ್ನು ಭವ್ಯವಾಗಿ ಆಚರಿಸಲು ವಾಜಪೇಯಿ ಭಾರೀ ಪ್ರಚಾರದ ನಡುವೆ ಕಲ್ಕತ್ತೆಗೆ ಹೋಗಿದ್ದರು. ಕಲ್ಕತ್ತೆಯ ಬ್ರಿಗೇಡ್ ಮೈದಾನ ಯಾವುದೇ ಮುಖಂಡನ ಜನಪ್ರಿಯತೆಯ ಅಳತೆಗೋಲು ಎಂದು ಪರಿಗಣಿಸಲ್ಪಟ್ಟಿದೆ. ಮಾರ್ಚ್ 20 ರಂದು ಬ್ರಿಗೇಡ್ ಪರೇಡ್‌ನಲ್ಲಿ ರಚಿಸಿದ್ದ ಬಿಜೆಪಿಯ ಮಹಾ ಅಬ್ಬರದ ವೇದಿಕೆಯೇರಿ ಸುತ್ತ ನೋಡಿದಾಗ ವಾಜಪೇಯಿಯವರಿಗೆ ನಿರಾಸೆ ಕಾದಿತ್ತು. ಜನಗಳಿಗಿಂತ ಅವರನ್ನು ಕರೆತಂದ ವಾಹನಗಳೇ ಕಾಣಿಸುತ್ತಿದ್ದವು. ಅವರ ನಿರಾಸೆ ನಂತರ ಅವರು ಮಾಡಿದ ಸಣ್ಣ ಭಾಷಣದಲ್ಲೂ ಎದ್ದು ಕಾಣುತ್ತಿತ್ತು.

ವೇದಿಕೆಯ ಮೇಲೆ ಇದ್ದ ಕೇಂದ್ರ, ರಾಜ್ಯ ಬಿಜೆಪಿಯ ಚಿಕ್ಕ-ದೊಡ್ಡ ಕುಳಗಳೆಲ್ಲಾ ವಾಜಪೇಯಿಯವರ ಭಾಷಣದಿಂದ ಏನೇನೋ ನಿರೀಕ್ಷಿಸಿದ್ದರು. ಅವೆಲ್ಲಾ ಹುಸಿಯಾಯಿತು. ಬಿಜೆಪಿ 'ಅನಾಗರೀಕ ಮತ್ತು ಅಸಂಸತ ಪಕ್ಷ' ಎಂದು ಜ್ಯೋತಿ ಬಸುರವರು ಮತ್ತೆ-ಮತ್ತೆ ವರ್ಣಿಸುತ್ತಿರುವುದು ವಾಜಪೇಯಿಯವರನ್ನು ಕಕ್ಕಾಬಿಕ್ಕಿಯಾಗಿಸಿರಬೇಕು. ಭಾರೀ ಟಾಂಟಾಂ ಆಗಿರುವ ಅದರ ಸ್ಥಿತಪ್ರಜ್ಞತೆ ಮಾಯವಾಗಿತ್ತು. 'ಆದರಣೀಯ ಜ್ಯೋತಿಬಸುಜೀ' ಹೀಗೆ ಏಕೆ ಮತ್ತೆ-ಮತ್ತೆ ಹೇಳುತ್ತಿರಬಹುದು ಎಂಬ ಬಗ್ಗೆ ಸ್ವಗತದಂತಿತ್ತು ಅವರ ಭಾಷಣದ ಬಹುಭಾಗ.

ತಪ್ಪು ದಾರಿ ಹಿಡಿಯುವವರು ಸದಾ ಮರೆಗುಳಿಯಾಗಿರುತ್ತಾರಂತೆ. ವಾಜಪೇಯಿಯವರಂತೂ ಅದಕ್ಕೆ ಹೊರತಾಗಿದ್ದಂತೆ ಕಂಡು ಬರಲಿಲ್ಲ. ಇಲ್ಲವಾದರೆ ಜ್ಯೋತಿ ಬಸುರವರು ಏಕೆ ಹಾಗೆ ಹೇಳುತ್ತಿದ್ದಾರೆ ಎಂಬ ಬಗ್ಗೆ ಬಹಿರಂಗ ಸ್ವಗತದ ಅಗತ್ಯವಿರಲಿಲ್ಲ. ಮಸೀದಿಗಳನ್ನು ಒಡೆಯುವ, ಮಿಶನರಿಗಳನ್ನು ಸುಡುವ, ಒಂದು ವರ್ಷದಲ್ಲಿ 150 ಕಡೆ ಕ್ರೈಸ್ತ ಅಲ್ಪಸಂಖ್ಯಾತರ ಮೇಲೆ ಹಲ್ಲೆ ನಡೆಸುವವರಿಗೆ ಆಶ್ರಯ, ಪೋಷಣೆ ನೀಡುವ, ಮತಾಂತರದ ಅಪಪ್ರಚಾರದಲ್ಲಿ ಪ್ರಧಾನಮಂತ್ರಿಗಳೇ ಭಾಗಿಯಾಗಿರುವ, ಶ್ರೀ ಕೃಷ್ಣ ಆಯೋಗ ಬಲವಾಗಿ ಟೀಕಿಸಿದ ಮುಂಬೈ ದಂಗೆಗಳ ಅಪರಾಧಿಗಳಾದ, ಪಾಕಿಸ್ತಾನಿ ಕಲಾವಿದರನ್ನು, ಕ್ರಿಕೇಟರುಗಳನ್ನು ಬೆದರಿಸುವ ಶಿವಸೇನೆಯ ಮುಖಂಡರ ಕಾಲು ಹಿಡಿಯುವ, ದೇಶದ ಪರಂಪರೆಗೇ ಮಸಿ ಬಳಿಯುವ ಪಕ್ಷಕ್ಕೆ 'ಅನಾಗರೀಕ ಮತ್ತು ಅಸಂಸತ' ಎಂದಲ್ಲದೆ ಬೇರೇನು ಬಿರುದು ಯೋಗ್ಯವೆನಿಸೀತು? ಆದ್ದರಿಂದಲೇ ವಾಜಪೇಯಿಯವರು ಬಂಗಾಳದಲ್ಲಿದ್ದಾಗಲೂ ಜ್ಯೋತಿಬಸು ಈ ಮಾತನ್ನು ಸಭೆಯೊಂದರಲ್ಲಿ ಬಲವಾಗಿ ಪುನರುಚ್ಚರಿಸಿದರು.

ಸ್ವಗತದ ನಂತರ ಎಂದಿನಂತೆ ತಡೆ-ತಡೆದು ಕಣ್ಣು ಪಿಳಿ ಪಿಳಿಸುತ್ತಾ ಪ್ರಧಾನಮಂತ್ರಿಗಳು ಪಶ್ಚಿಮ ಬಂಗಾಳ ಜನತೆಯ ಬಗ್ಗೆ ಭಂಡ ಮಾತುಗಳನ್ನು ಉದುರಿಸಿದರು. ನಿರೀಕ್ಷಿಸಿದಂತೆ ಎಡ ಪಕ್ಷಗಳ ಬಗ್ಗೆಯೂ ಉದುರಿಸಲಾರಂಭಿಸಿದರು. ಪಶ್ಚಿಮ ಬಂಗಾಳ ದೇಶದ ಅತ್ಯಂತ ಕಮ್ಮಿ ಕೈಗಾರೀಕರಣ ಹೊಂದಿದ ರಾಜ್ಯ ಎಂದರು! ಬಂಡವಾಳ ಈ ರಾಜ್ಯದಿಂದ ಹೊರ ಹೋಗುತ್ತಿದೆ ಎಂದರು. ಈ ಯಾವ ಆಪಾದನೆಗಳಿಗೂ ಅವರು ಪುರಾವೆಗಳನ್ನೇನನ್ನೂ ಕೊಡಲಿಲ್ಲ. ಮಮತಾರವನ್ನು ಬಾಯಿ ಮುಚ್ಚಿಸಲು ಟಾಂಟಾಂ ಮಾಡಿದ 'ಬೆಂಗಾಲ್ ಪ್ಯಾಕೇಜ್' ಬಗ್ಗೆ ಸಭೆಯಲ್ಲೂ ಮಾತನಾಡಿದರು, ಭಾರತ್ ಚೇಂಬರ್ ಆಫ್ ಕಾಮರ್ಸ್‌ನಲ್ಲೂ ಮಾತನಾಡಿದರು. ಎಲ್ಲಾ ರೀತಿಯ ರಾಜನೀತಿ, ಸಿದ್ಧಾಂತಗಳನ್ನು ಬಿಟ್ಟು ಸಂಪತ್ತು ಸೃಷ್ಟಿ ಮಾಡಿ ಎಂದು ಬಂಡವಾಳಿಗರಿಗೆ ಸಲಹೆ ಮಾಡಿದರು. ಬಿಜೆಪಿಯ, ಆರ್.ಎಸ್.ಎಸ್.ನ ಸಿದ್ಧಾಂತವನ್ನೂ ತಾವು ಕೈಬಿಡಬೇಕೇ ಎಂಬ ಗೊಂದಲ ಚೇಂಬರ್ ಆಫ್ ಕಾಮರ್ಸ್‌ನ ಧನ ಸಂಪನ್ನರಲ್ಲಿ ಉಂಟಾಗಿದ್ದರೆ ಆಶ್ಚರ್ಯವಿಲ್ಲ.

ಮರುದಿನ ಜ್ಯೋತಿಬಸುರವರು ನೀಡಿದ ಸಂಕ್ಷಿಪ್ತ ಪತ್ರಿಕಾ ಹೇಳಿಕೆ ಎಡರಂಗ ಸರಕಾರದ ಬಗ್ಗೆ ಆಪಾದನೆಗಳನ್ನು ಮಾಡಿದ ಪ್ರಧಾನಮಂತ್ರಿಗಳ ಮಾತುಗಳ ಟೊಳ್ಳುತವನ್ನು ಪಶ್ಚಿಮ ಬಂಗಾಳದ ಜನತೆಯ ಮುಂದೆ ಬಟ್ಟ ಬಯಲು ಮಾಡಿತು. ಅವರ ಇದ್ದಬದ್ದ ಪ್ರತಿಷ್ಠೆಯ ಮುಂದೆಯೂ ಪ್ರಶ್ನೆ ಚಿಹ್ನೆಯಿಟ್ಟಿತು.

ಇಡೀ ಪೂರ್ವ ಭಾರತಕ್ಕೆ ಯಾವುದೇ ಕೇಂದ್ರೀಯ ನೆರವು ನೀಡದಿರುವುದು ದಿಲ್ಲಿಯನ್ನಾಳಿದ ಕಾಂಗ್ರೆಸ್ ಸರಕಾರಗಳ ಸುಯೋಜಿತ ಧೋರಣೆಯಾಗಿತ್ತು. ಸಹಜವಾಗಿಯೇ ಉಳಿದ ಕೆಲವು ರಾಜ್ಯಗಳು ಕೈಗಾರಿಕೆಯಲ್ಲಿ ಪಶ್ಚಿಮ ಬಂಗಾಳಕ್ಕಿಂತ ಮುಂದೆ ಹೋದವು. ಅದಿರಲಿ ಬಿಜೆಪಿ ಈಗ ಏನು ಮಾಡುತ್ತಿದೆ? ಕಾಂಗ್ರೆಸ್ಸಿನ ಹೆಜ್ಜೆ ಗುರುತುಗಳನ್ನೇ ಅನುಸರಿಸುತ್ತಿದೆ ಎಂದು ಲೇವಡಿ ಮಾಡಿದರು ಜ್ಯೋತಿಬಸು. ಪ್ರವಾಹ ಪರಿಹಾರಕ್ಕೆ ನೆರವು ನೀಡುವ ಬಗ್ಗೆಯೂ ಲಕ್ಷ್ಯ ವಹಿಸದ ಬಿಜೆಪಿ ನೇತೃತ್ವದ ಸರಕಾರ ಕೈಗಾರಿಕಾ ಬೆಳವಣಿಗೆಯ ಬಗ್ಗೆ ಮಾತನಾಡುವುದೇ ಎಂದು ಖಾರವಾಗಿ ಪ್ರಶ್ನಿಸಿದರು. ಪ್ರಧಾನಮಂತ್ರಿಗಳು ಗಾಳಿಯಲ್ಲೇ ಮಾತನಾಡಿದರೆ ಜ್ಯೋತಿಬಸುರವರು ಅಂಕಿ-ಅಂಶಗಳನ್ನು ಮುಂದಿಟ್ಟು ಹೇಗೆ ಪಶ್ಚಿಮ ಬಂಗಾಳ ಒಂದು ರಾಜ್ಯ ಸರ್ಕಾರ ಎದುರಿಸಬೇಕಾದ ಮಿತಿಗಳ ನಡುವೆಯೂ ನಿರಂತರವಾಗಿ ಸಾಕಷ್ಟು ಸಂಖ್ಯೆಯಲ್ಲಿ ಬಂಡವಾಳವನ್ನು ಆಕರ್ಷಿಸಿ ಒಂದೊಮ್ಮೆ ಕಾಂಗ್ರೆಸ್ ಆಡಳಿತದಲ್ಲಿ ನರಳುತ್ತಿದ್ದ ಕೈಗಾರಿಕಾ ವಲಯ ಪುನಶ್ಚೇತನ ಹೊಂದಿದರೆ, ಇನ್ನೊಂದೆಡೆ ಭೂಸುಧಾರಣೆಗಳು ವಿಸ್ತರಿಸಿದ ಆಂತರಿಕ, ಮಾರುಕಟ್ಟೆಯಿಂದಾಗಿ ಸಣ್ಣ ಪ್ರಮಾಣದ ಉದ್ದಿಮೆಗಳು, ಗುಡಿ ಕೈಗಾರಿಕೆಗಳು ಸಮೃದ್ಧಗೊಂಡಿವೆ ಎಂದು ತೋರಿಸಿಕೊಟ್ಟರು.

"ನಮ್ಮ ಪ್ರಾಂತ್ಯಕ್ಕೆ ಬರಬೇಕಾದ ಹಣವನ್ನು ಪಡೆಯಲು ನಾವು ಸದಾ ಕೇಂದ್ರ ಸರ್ಕಾರದೊಂದಿಗೆ ಸಂಪರ್ಕದಲ್ಲಿದ್ದೇವೆ. ಆದರೆ ದಿಲ್ಲಿಯಲ್ಲಿ ತನ್ನ ಆಡಳಿತದಡಿ ವಿವಿಧ ಇಲಾಖೆಗಳು ಕೆಲಸ ಮಾಡುವ ವೈಖರಿಗೆ ಪ್ರಧಾನ ಮಂತ್ರಿಗಳು ನಮ್ಮನ್ನು ದೂಷಿಸಿದರೆ ಹೇಗೆ? ಈ ರಾಜ್ಯದಲ್ಲಿನ ಸಾರ್ವಜನಿಕ ವಲಯ ಘಟಕಗಳಿಗೆ ಆರ್ಡರ್‌ಗಳನ್ನು ಒದಗಿಸಲೂ ಹಿಂದೆ-ಮುಂದೆ ನೋಡುವ ಇಲಾಖೆಗಳನ್ನು ಇಟ್ಟುಕೊಂಡು ನಮ್ಮನ್ನು ದೂರಬಾರದು' ಎಂದು ಜ್ಯೋತಿಬಸು ಪ್ರಧಾನಮಂತ್ರಿಗಳ, ಅವರ ಸರಕಾರದ ಅವರ ಬೆಂಬಲಿಗರ ಗೋಸುಂಬೆತನವನ್ನು ಬಯಲಿಗೆಳೆದರು.

...ರ್ಮಿಕರ ಕಾನೂನು ಬದ್ಧ ಹಕ್ಕುಗಳನ್ನು ...ಸುತ್ತದೆ, ಜನ-ವಿರೋಧಿ 'ಎಕ್ಸಿಟ್ ...ಸಿ'(ನಿರ್ಗಮನ ನೀತಿ)ಯ ಜಾರಿಗೆ ...ಶ ಮಾಡಿಕೊಡುತ್ತದೆ.

...ಗಾರಿಕಾ ಹಿಂಜರಿತದ ಪ್ರವೃತ್ತಿಗಳನ್ನು ...ಳಿಸುವ, ಏನಿಲ್ಲೆಂದರೂ ಪ್ರವೃತ್ತಿಗಳನ್ನು ...ದುವರಿಸುವ ಕ್ರಮಗಳಿಂದಾಗಿ ...ಟ್‌ನಲ್ಲಿ ಅಂದಾಜು ಮಾಡಿದ ರೆವಿನ್ಯೂ ...ಹ ಗುರಿಗಿಂತ ಬಹಳ ಕಮ್ಮಿಯಾಗುವುದು ...ತ. ಇದು ಹಣಕಾಸು ಸನ್ನಿವೇಶವನ್ನು ...ಷ್ಟ ಕ್ಲಿಷ್ಟಗೊಳಿಸಿ ವರ್ಷದ ಮಧ್ಯದಲ್ಲೇ ...ಳನ್ನು ಏರಿಸಿ ಜನಗಳ ಮೇಲೆ ಇನ್ನಷ್ಟು ...ತ ಹೊರೆಗಳನ್ನು ಹೇರುವ ಪರಿಸ್ಥಿತಿ ...ಾಗುತ್ತದೆ.

...ರಕಾರ ತನ್ನ ಬಜೆಟ್ ಕೊರತೆಗಳನ್ನು ...ಸಲು ಸಂಪನ್ಮೂಲಗಳನ್ನು ಸಂಗ್ರಹಿಸಲು ...ಕರಿಸಿದ ವಿಧಾನಗಳನ್ನು ಕೇಂದ್ರ ಸಮಿತಿ ...ಸಿತು. ಸಾರ್ವಜನಿಕ ವಲಯದ ...ಗಳ ಪರಸ್ಪರ ಶೇರುಗಳನ್ನು ...ಸುವುದು, ಪ್ರಮುಖ ಘಟಕಗಳು ತಮ್ಮ ...ಗಳನ್ನು ಮರು ಖರೀದಿಸುವಂತೆ ...ು ಹಾಕುವುದು ಮುಂತಾದ ವಿಧಾನಗಳ ಮೂಲಕ ಸಾರ್ವಜನಿಕ ಆಸ್ತಿಗಳನ್ನು ನಾಶಮಾಡಲಾಗುತ್ತಿದೆ. ಈ ವಂಚಕ ನೀತಿಯನ್ನು ತಕ್ಷಣ ನಿಲ್ಲಿಸಬೇಕು ಎಂದು ಕೇಂದ್ರ ಸಮಿತಿ ಸರಕಾರಕ್ಕೆ ಕರೆ ನೀಡಿದೆ. ಇದರ ಬರಲು ಸರ್ಕಾರ ಲಾಭಕರವಾದ ಸಾರ್ವಜನಿಕ ವಲಯ ಘಟಕಗಳನ್ನು ಬಲಪಡಿಸಲು, ಹಣವಿಲ್ಲದೆ ನರಳುತ್ತಿರುವ ಘಟಕಗಳನ್ನು ಪುನರುಜ್ಜೀವನಗೊಳಿಸಲು ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು.

ಬಿಹಾರದಲ್ಲಿ ಮಹತ್ವದ ವಿಜಯ ಭೂ ಸುಧಾರಣೆಗಳ ಜಾರಿ ಅತ್ಯಗತ್ಯ

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆಯ ರದ್ದತಿ ದೇಶ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೊಂದು ಮಹತ್ವದ ವಿಜಯ. ಆರೇ ತಿಂಗಳಲ್ಲಿ ವಾಜಪೇಯಿ ಸರಕಾರ ಬಿಹಾರ ರಾಜ್ಯ ಸರಕಾರವನ್ನು ಉರುಳಿಸಲು 356ನೇ ಕಲಮನ್ನು ಎರಡು ಸಲ ಪ್ರಯೋಗಿಸಿತು. ಕೇವಲ ಸಮತಾ ಪಾರ್ಟಿಗೆ ಕೊಟ್ಟ ಭರವಸೆಯನ್ನು ಈಡೇರಿಸಲಿಕ್ಕಾಗಿ ಹಾಗೂ ಪ್ರತಿಪಕ್ಷಗಳ ಸರಕಾರಗಳನ್ನು ನಿರ್ಮೂಲ ಮಾಡಲಿಕ್ಕಾಗಿಯೇ ಈ ರೀತಿ 356ನೇ ಕಲಮನ್ನು ಸಿನಿಕತನದಿಂದ ಬಳಸಲಾಯ್ತು. ಸಂಸತ್ತಿನಲ್ಲಿ ಪ್ರತಿಪಕ್ಷಗಳ ಐಕ್ಯತೆಯಿಂದಾಗಿ ಯಾವುದಕ್ಕೂ ಹೇಸದ ಈ ಕ್ರಮ ವಿಫಲಗೊಂಡಿತು.

ಬಿಹಾರದಲ್ಲಿ ಗ್ರಾಮೀಣ ಬಡವರು ಅದರಲ್ಲೂ ಭೂಹೀನ ದಲಿತರು ತಮ್ಮ ಹಕ್ಕುಗಳಿಗಾಗಿ ಎದ್ದು ನಿಂತಾಗ ದುಷ್ಟ ಭೂಮಾಲಕರ ಭಯೋತ್ಪಾದನೆಯನ್ನು ಎದುರಿಸಬೇಕಾಗುತ್ತದೆ. ಈ ಹಿಂದೆ ಲಾಲೂ ಪ್ರಸಾದ್ ಸರಕಾರವಾಗಲೀ, ನಂತರ ರಾಬ್ರಿದೇವಿ ಸರಕಾರವಾಗಲೀ ಅರೆ-ಪಾಳೆಯಗಾರೀ ಭೂಸಂಬಂಧಗಳಲ್ಲಿ ಬದಲಾವಣೆ ತರಬಹುದಾದ ಭೂ ಸುಧಾರಣಾ ಕ್ರಮಗಳನ್ನು ಜಾರಿಗೆ ತರುವತ್ತ ಏನೂ ಮಾಡಲಿಲ್ಲ. ಸಿಪಿಐ (ಎಂ) ಮತ್ತು ಎಡ ಪಕ್ಷಗಳು ನಿರಂತರವಾಗಿ ಕ್ರಮಗಳಿಗಾಗಿ ಹೋರಾಡಿವೆ. ರಾಬ್ರಿ ದೇವಿ ಸರಕಾರ ಈ ಪ್ರಶ್ನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅದು ಗ್ರಾಮೀಣ ಪ್ರದೇಶಗಳಲ್ಲಿ ದಮನಕ್ಕೊಳಗಾದ ವಿಭಾಗಗಳ ರಕ್ಷಣೆಗೆ ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು.

ರಾಷ್ಟ್ರೀಯ ಸಮಾವೇಶದ ಕರೆ

ಕೋಮುವಾದದ ವಿರುದ್ಧ ಹಾಗೂ ಅಲ್ಪಸಂಖ್ಯಾತರ ರಕ್ಷಣೆಗಾಗಿ ರಾಷ್ಟ್ರೀಯ ಸಮಾವೇಶವೊಂದನ್ನು ಫೆಬ್ರವರಿ 20 ರಂದು ನಡೆಸಲು ಪಕ್ಷದ ಮುಖಂಡತ್ವ ಹಾಗೂ ಎಡಪಕ್ಷಗಳು ವಹಿಸಿದ ಮುತುವರ್ಜಿಯನ್ನು ಕೇಂದ್ರ ಸಮಿತಿ ಮೆಚ್ಚಿಕೊಂಡಿತು. ಇದರಲ್ಲಿ ಎಡ ಪ್ರಜಾಪ್ರಭುತ್ವವಾದಿ ಧರ್ಮನಿರಪೇಕ್ಷ ಪಕ್ಷಗಳು ಹಾಗೂ ಪ್ರಮುಖ ನಾಗರೀಕರು ವ್ಯಾಪಕವಾಗಿ ಭಾಗವಹಿಸಿದ್ದಾರೆ. ಇದು ದೇಶ ಎದುರಿಸುತ್ತಿರುವ ಕೋಮುವಾದಿ ಅಘಾತದ ಬಗ್ಗೆ ಇರುವ ಆಳವಾದ ಆತಂಕವನ್ನು ತೋರಿಸಿದೆ. ಈ ಪಿಡುಗನ್ನು ಎದುರಿಸಲು ಎಲ್ಲಾ ಪ್ರಜಾಪ್ರಭುತ್ವವಾದಿ, ಧರ್ಮನಿರಪೇಕ್ಷ ಶಕ್ತಿಗಳು ಒಟ್ಟಾಗಲು ಒಂದು ವೇದಿಕೆಯನ್ನು ಇದು ಒದಗಿಸಿತು. ಕೇಂದ್ರ ಸಮಿತಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವ ಪ್ರತಿಜ್ಞೆಗೆ ಒಂದು ಕೋಟಿ ಸಹಿಗಳನ್ನು ಸಂಗ್ರಹಿಸುವ ಸಾಮೂಹಿಕ ಪ್ರಕ್ಷೋಭೆ ಭಾರೀ ಯಶಸ್ಸು ಕಾಣುವಂತೆ ಮಾಡಬೇಕು ಎಂದು ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಅಡ್ಮಿರಲ್ ಭಾಗವತ್ ಪ್ರಕರಣ

ನೌಕಾಸೇನಾ ಮುಖ್ಯಸ್ಥ ಅಡ್ಮಿರಲ್ ಭಾಗವತ್‌ರನ್ನು ಸ್ವೇಚ್ಛಾಚಾರದಿಂದ ವಜಾ ಮಾಡಿದ್ದಕ್ಕೆ ಸೂಕ್ತ ವಿವರಣೆ ನೀಡಲಾಗದ ವಾಜಪೇಯಿ ಸರಕಾರ ಅದರಿಂದ ತಪ್ಪಿಸಿಕೊಳ್ಳುವ ನಿಲುವು ತಳೆದದ್ದನ್ನು ಕೇಂದ್ರ ಸಮಿತಿ ಬಲವಾಗಿ ಟೀಕಿಸಿದೆ. ಸಂಸತ್ತಿನಲ್ಲೂ ಮತ್ತೆ ಮತ್ತೆ ಹೇಳಿಕೊಂಡರೂ ಸರಕಾರ ಯಾವುದೇ ಒಪ್ಪತಕ್ಕ ಉತ್ತರ ಕೊಟ್ಟಿಲ್ಲ. ಈ ವಿಷಯವನ್ನು ಸಂಸತ್ತಿನಲ್ಲಿ ಚರ್ಚಿಸಿ, ಈ ಅಭೂತಪೂರ್ವ ಕ್ರಮದ ಹರಹನ್ನು ದೇಶದ ಮುಂದಿಡುವುದು ಅತ್ಯಗತ್ಯ. ಈ ವಿಪತ್ಕಾರಿ ಕ್ರಮವನ್ನು ಮುಚ್ಚಿಕೊಳ್ಳಲು ರಾಷ್ಟ್ರೀಯ ಭದ್ರತೆಯ ನೆವವೊಡ್ಡುವುದನ್ನು ಒಪ್ಪಲು ಸಾಧ್ಯವಿಲ್ಲ.

ಗುರುಸ್ವಾಮಿಯವರ ಆಪಾದನೆಗಳು

ಹಣಕಾಸು ಮಂತ್ರಿಗಳ ಮಾಜಿ ಸಲಹೆಗಾರ ಬಿಜೆಪಿ ನೇಮಿಸಿದ ಮೋಹನ್ ಗುರುಸ್ವಾಮಿ ವಾಜಪೇಯಿ ಸರಕಾರದ ನಿರ್ಣಯ ಪ್ರಕ್ರಿಯೆಯಲ್ಲಿ ದೊಡ್ಡ ಬಂಡವಾಳಿಗರ ಗುಂಪುಗಳ ಪ್ರಭಾವದ ಬಗ್ಗೆ ಹೊರಗೆಡಹಿದ ಸಂಗತಿಗಳ ಬಗ್ಗೆ ವಿಚಾರಣೆ ಅಗತ್ಯ. ಸರಕಾರದ ಉನ್ನತ ವಲಯಗಳು ದೊಡ್ಡ ಬಂಡವಾಳಿಗ

ಪುಟ 7 ನೋಡಿ

ಪಶ್ಚಿಮ ಬಂಗಾಳದ 7 ಸಾರ್ವಜನಿಕ ವಲಯಗಳ ಘಟಕಗಳ ಕಾರ್ಮಿಕರ ಬದುಕಿನೊಂದಿಗೆ ಬಿಜೆಪಿ - ಮಮತಾ ಚಿನ್ನಾಟ

ಬಿಜೆಪಿ-ತೃಣಮೂಲ ಕಾಂಗ್ರೆಸ್ ಜತೆಗೂಡಿ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರ ಬದುಕಿನೊಂದಿಗೆ ಒಂದು ದುಷ್ಟ ಆಟ ಆರಂಭಿಸಿದ್ದಾರೆ. ಫೆಬ್ರವರಿ 10 ರಂದು ಕಲ್ಕತ್ತೆಯಲ್ಲಿ ತೃಣಮೂಲ ಕಾಂಗ್ರೆಸ್ ಏರ್ಪಡಿಸಿದ್ದ ಸಾರ್ವಜನಿಕ ಸಭೆಯೊಂದರಲ್ಲಿ ಕೇಂದ್ರ ಸುದ್ದಿ-ಪ್ರಸಾರ ಮಂತ್ರಿ ಪ್ರಮೋದ್ ಮಹಾಜನ್ ಅಬ್ಬರಿಸಿದ್ದರು - ಒಂದೇ ಒಂದು ಕೇಂದ್ರೀಯ ಸಾರ್ವಜನಿಕ ಉದ್ದಿಮೆಯನ್ನು ಮುಚ್ಚುವುದಿಲ್ಲ, ಒಬ್ಬನೇ ಒಬ್ಬ ಕಾರ್ಮಿಕನನ್ನು ರಿಟ್ರೆಂಚ್ ಮಾಡುವುದಿಲ್ಲ ಎಂದು. ಆದರೆ ಆ ವೇಳೆಗಾಗಲೇ ಪಶ್ಚಿಮ ಬಂಗಾಳದಲ್ಲಿ 7 ಕೇಂದ್ರೀಯ ಸಾರ್ವಜನಿಕ ವಲಯದ ಘಟಕವನ್ನು ಶಾಶ್ವತವಾಗಿ ಮುಚ್ಚುವುದಾಗಿ ಭಾರತ ಸರ್ಕಾರ ಪ್ರಕಟಿಸಿತ್ತು. ಫೆಬ್ರವರಿ 21 ರೊಳಗೆ ಒಂದು ಸ್ವಯಂ ಪ್ರತ್ಯೇಕಗೊಳ್ಳುವ ಯೋಜನೆ(ವಿ.ಎಸ್.ಎಸ್.) ಗೆ ಒಪ್ಪಿಗೆ ಕೊಡಬೇಕೆಂದು ಕಾರ್ಮಿಕರಿಗೆ ತಿಳಿಸಲಾಗಿತ್ತು.

ಮಹಾಜನ್‌ರ ಅಬ್ಬರದಿಂದ ಈ ಕಾರ್ಮಿಕರಲ್ಲಿ ಹೊಸ ಆಸೆ ಮೂಡಿತು - ತಮ್ಮ ಉದ್ಯೋಗ ಮುಂದುವರಿಯುತ್ತದೆ ಎಂದು. ಆದರೆ ಫೆಬ್ರವರಿ 27 ರಂದು ಮಂಡಿಸಿದ ಕೇಂದ್ರ ಬಜೆಟ್ ಈ ಘಟಕಗಳಿಗೆ ಒಂದೇ ಒಂದು ಪೈಸೆ ಕೊಟ್ಟಿರಲಿಲ್ಲ. ಹಾಗಾದರೆ ಈ ಘಟಕಗಳು ಮುಂದುವರೆಯುವುದು ಹೇಗೆ - ನಮ್ಮ ಉದ್ಯೋಗ ಮುಂದುವರಿಯುವುದು ಹೇಗೆ? - ಕಾರ್ಮಿಕರಿಗೆ ಅರ್ಥವಾಗಲಿಲ್ಲ.

ಮತ್ತೆ ಮಾರ್ಚ್ 1 ರಂದು ಮಮತಾ ಬ್ಯಾನರ್ಜಿ ಪತ್ರಕರ್ತರಿಗೆ ಪ್ರಧಾನಿಗಳ ಒಂದು ಪತ್ರವನ್ನು ತೋರಿಸಿದರು. ಈ 7 ಘಟಕಗಳನ್ನು ಪುನರುಜ್ಜೀವನಗೊಳಿಸುವ ಸಾಧ್ಯತೆಗಳನ್ನು ಪರಿಶೀಲಿಸಲು ವಿಎಸ್‌ಎಸ್ ಯೋಜನೆಯನ್ನು ಇನ್ನೂ 3 ತಿಂಗಳ ವರೆಗೆ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ ಎಂದು ಈ ಪತ್ರದಲ್ಲಿ ತಿಳಿಸಲಾಗಿತ್ತು. ಬಹುಶಃ ಇದನ್ನು ಭಾರೀ ತರಾತುರಿಯಿಂದ ಬರೆದಿರಬೇಕು. ಏಕೆಂದರೆ ಎರಡು ಇಂತಹ ಘಟಕಗಳ ಹೆಸರು ಆ ಪತ್ರದಲ್ಲಿ ಇರಲಿಲ್ಲ.

ಕಾರ್ಮಿಕರಿಗೆ ಏನೇನೂ ಅರ್ಥವಾಗುತ್ತಿಲ್ಲ - ಒಂದೆಡೆ, ಬಜೆಟ್‌ನಲ್ಲಿ ಒಂದೂ ಪೈಸೆ ಕೊಡದೆ ತಮ್ಮ ಉದ್ದಿಮೆಗಳ ಪುನರುಜ್ಜೀವನದ ಮಾತುಗಳು ಕೇಳ ಬರುತ್ತಿವೆ, ಇನ್ನೊಂದೆಡೆ 'ನಿಮ್ಮ ಉದ್ದಿಮೆ ಬಿಟ್ಟು ಹೋಗಿ' ಎಂದು ತಮಗೆ ಹೇಳಲಾಗುತ್ತಿದೆ. ದುಡ್ಡಿಲ್ಲದೆ, ಕಾರ್ಮಿಕರಿಲ್ಲದೆ ಈ ಉದ್ದಿಮೆಗಳ ಪುನರುಜ್ಜೀವನ ಹೇಗೆ ಸಾಧ್ಯ?

ಫೆಬ್ರವರಿ 23 ರಂದು ಕೇಂದ್ರ ಮಂತ್ರಿಮಂಡಳ ನಿರ್ಣಯ ತಗೊಂಡಿದೆ ಎಂಬ ಪ್ರಧಾನಿಗಳ ಮಾತು ನಿಜವಾಗಿದ್ದರೆ ಫೆಬ್ರವರಿ 27 ರ ಹಣಕಾಸು ಮಂತ್ರಿಗಳ ಭಾಷಣದಲ್ಲಿ ಅದರ ಪ್ರಸ್ತಾಪವೇ ಇಲ್ಲವೇಕೆ? ಯಾರು ಸರಿ? ಪ್ರಧಾನಮಂತ್ರಿಗಳೋ, ಹಣಕಾಸು ಮಂತ್ರಿಗಳೋ? ಅಥವಾ ಈ ಎಲ್ಲರೂ ಮಮತಾ ಬ್ಯಾನರ್ಜಿಯೊಂದಿಗೆ ಸೇರಿ ಕಂಗಾಲಾಗಿರುವ ಈ 7 ಘಟಕಗಳ ಕಾರ್ಮಿಕರನ್ನು ಅಪಹಾಸ್ಯ ಮಾಡುತ್ತಿದ್ದಾರೆಯೇ?

ಇದು ಈ ಕಾರ್ಮಿಕರನ್ನು ಈಗ ಕಾಡುತ್ತಿರುವ ಪ್ರಶ್ನೆ. ಕಾರ್ಮಿಕರಲ್ಲಿ ಗೊಂದಲ ಉಂಟುಮಾಡಿರುವ ಈ ವಿಷಯದ ಬಗ್ಗೆ ಪಶ್ಚಿಮ ಬಂಗಾಳದ ಎಡಪಕ್ಷಗಳ ಸಂಸತ್ ಸದಸ್ಯರು ಪ್ರಧಾನಿಗಳಿಗೆ ಒಂದು ಮನವಿ ಅರ್ಪಿಸಿ ಪುನರುಜ್ಜೀವನದ ನಿರ್ಣಯ ವಾಗುವವರೆಗೆ VSS ಯೋಜನೆಯನ್ನು ತಡೆಹಿಡಿಯಬೇಕು ಎಂದು ಆಗ್ರಹಪಡಿಸಿದ್ದಾರೆ.

ಸಿಪಿಐ(ಎಂ) ಆಕ್ಷೇಪವನ್ನು ಎತ್ತಿ ಹಿಡಿದ ಪತ್ರಿಕಾ ಮಂಡಳಿ ನಿರ್ಧಾರ

ಭಾರತದ ಪತ್ರಿಕಾ ಮಂಡಳಿ (ಪ್ರೆಸ್ ಕೌನ್ಸಿಲ್) ಪಾಟ್ನಾದ 'ದೈನಿಕ್ ಹಿಂದೂಸ್ತಾನ್' ನ ವರದಿಗಾರ ಸರಿಯಾದ, ಕರಾರುವಾಕ್ಕಾದ ವರದಿ ಮಾಡಬೇಕೆಂದು ಪತ್ರಿಕಾ ಧರ್ಮವನ್ನು ಉಲ್ಲಂಘಿಸಿರುವುದಾಗಿ ಎಚ್ಚರಿಸಿದೆ. ಫೆಬ್ರವರಿ '98 ರ ಚುನಾವಣೆ ಗಳ ವೇಳೆಯಲ್ಲಿ ಈ ಪತ್ರಿಕೆಯ ವರದಿಯ ವಿರುದ್ಧ ಸಿಪಿಐ(ಎಂ) ಬಿಹಾರದ ರಾಜ್ಯ ಸಮಿತಿ ಪತ್ರಿಕಾ ಮಂಡಳಿಗೆ ನೀಡಿದ್ದ ದೂರನ್ನು ಎತ್ತಿ ಹಿಡಿದು ಪತ್ರಿಕಾ ಮಂಡಳಿ ಈ ರೀತಿ ಎಚ್ಚರಿಸಿದೆ.

ಫೆಬ್ರವರಿ 21, 1998 ರ ಸಂಚಿಕೆಯಲ್ಲಿ 'ದೈನಿಕ್ ಹಿಂದೂಸ್ತಾನ್' ಮುಂದಿನ ನಡೆಯಲಿದ್ದ ಲೋಕಸಭಾ ಚುನಾವಣೆಗಳಲ್ಲಿ ವಿವಿಧ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿತ್ತು. ಅದರಲ್ಲಿ ದರ್ಬಾಂಗಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯ ಹೆಸರನ್ನು ಪ್ರಕಟಿಸಿರಲಿಲ್ಲ. ಇದನ್ನು ಉದ್ದೇಶ ಪೂರ್ವಕವಾಗಿ ಮಾಡಲಾಗಿತ್ತು. ಸಿಪಿಐ(ಎಂ) ಅಭ್ಯರ್ಥಿ ಹಿಂತೆಗೆದುಕೊಂಡಿ ದ್ದಾರೆ ಎಂಬ ಭಾವನೆ ಉಂಟು ಮಾಡಲು ಹೀಗೆ ಮಾಡಲಾಗಿತ್ತು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ವಾದಿಸಿತ್ತು. ಈ ಪತ್ರಿಕೆಯ ಕಾನೂನು ಸಲಹೆಗಾರ ಆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದರು.

ಕಳೆದ ವರ್ಷ ಏಪ್ರಿಲ್ 6 ರಂದು ಪತ್ರಿಕಾಮಂಡಳಿ ಶೋಕಾಸ್ ನೋಟೀಸ್ ನೀಡಿತು. ಫೆಬ್ರವರಿ 22 ರಂದು ಸಿಪಿಐ(ಎಂ) ಅಭ್ಯರ್ಥಿಯ ಹೆಸರನ್ನು ಪ್ರಕಟಿಸಲಾಗಿದೆ ಎಂಬ ಸಬೂಬು ಹೇಳಿ ಪತ್ರಿಕಾ ಸಂಪಾದಕರು ಈ ಬಗ್ಗೆ ಕಲಾಪಗಳನ್ನು ಕೈಬಿಡಬೇಕು ಎಂದು ಮಂಡಳಿಗೆ ಪತ್ರ ಬರೆದರು.

ಇದು ಪತ್ರಿಕಾ ಮಂಡಳಿ ನೇಮಿಸಿದ ತನಿಖಾ ಸಮಿತಿಯೆದುರು ಬಂತು. ಎರಡೂ ಕಡೆಯಿಂದ ಈ ಸಮಿತಿಯ ಮುಂದೆ ಹಾಜರಾಗಲಿಲ್ಲ. ಆರೋಪಿಯ ಕಡೆ ವಕೀಲರು ವಿಚಾರಣೆಯನ್ನು ಮುಂದೂಡಬೇಕೆಂದು ಕೇಳಿದರು. ನ್ಯಾಯಾಂಗ ಒಪ್ಪಲಿಲ್ಲ. ಸಮಿತಿಗೆ ಪತ್ರಿಕಾ ಸಂಪಾದಕರ ಸಮಜಾಯಿಷಿ ಸ್ವೀಕಾರ ಯೋಗ್ಯ ಎನಿಸಲಿಲ್ಲ. ಸಿಪಿಐ(ಎಂ) ಅಭ್ಯರ್ಥಿಯ ಹೆಸರು ಆಕಸ್ಮಾತ್ತಾಗಿ ತಪ್ಪಿ ಹೋಗಿರಲಿಲ್ಲ ಎಂದು ಭಾವಿಸಿದ ತನಿಖಾ ಸಮಿತಿ ಪತ್ರಿಕಾ ವರದಿಗಾರರು ಹೇಗೆ ವರ್ತಿಸಬೇಕೆಂಬ ವಿಧಾನವನ್ನು ಉಲ್ಲಂಘಿಸಿದ್ದಾರೆ ಎಂಬ ನಿರ್ಣಯಕ್ಕೆ ಬಂದು ಸಂಬಂಧಪಟ್ಟ ವರದಿಗಾರರನ್ನು ಎಚ್ಚರಿಸಬೇಕೆಂದು ಪತ್ರಿಕಾ ಮಂಡಳಿಗೆ ಶಿಫಾರಸು ಮಾಡಿತು. ಪತ್ರಿಕಾ ಮಂಡಳಿ ಇದನ್ನು ಒಪ್ಪಿಕೊಂಡಿತು.

ಮಮತಾ ಬ್ಯಾನರ್ಜಿಯ ಇನ್ನೊಂದು ಸ್ಟಂಟ್‌ನಲ್ಲಿ ಅಡ್ವಾಣಿಯವರು ಪೋಷಕ ಪಾತ್ರಧಾರಿ - ಮತ್ತೆ ಮಸಿ ಬಳಿದುಕೊಳ್ಳಲು?

ಪಶ್ಚಿಮ ಬಂಗಾಳದಲ್ಲಿ ಕಾನೂನು-ವ್ಯವಸ್ಥೆ ಪರಿಸ್ಥಿತಿ ಕೆಟ್ಟಿದೆ. ಈ ಬಗ್ಗೆ ತನಿಖೆ ಮಾಡಬೇಕೆಂಬ ತೃಣಮೂಲ ಕಾಂಗ್ರೆಸ್ಸಿನ ಮಮತಾ ಬ್ಯಾನರ್ಜಿ ಕೇಂದ್ರ ಗೃಹಮಂತ್ರಿ ಅಡ್ವಾಣಿಯವರನ್ನು ಆಗ್ರಹಪಡಿಸಿದ್ದಾರಂತೆ. ಅಡ್ವಾಣಿಯವರು ಒಪ್ಪಿದ್ದಾರಂತೆ. ಮಮತಾ ಬ್ಯಾನರ್ಜಿ ಇದುವರೆಗೂ ಅಡ್ವಾಣಿಯವರನ್ನು ಟೀಕಿಸುತ್ತಾ ಇದ್ದವರು, ಕಳೆದ ಹನ್ನೊಂದು ತಿಂಗಳಿಂದ ಅವರ ಮುಖಾ ಕೂಡಾ ನೋಡಲು ಇಷ್ಟಪಡದವರು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು.

ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್‌ನಲ್ಲಿ ಒಂದಂತೂ ಸಾಮ್ಯತೆಯಿದೆ - ಅದೆಂದರೆ ಅವರ ಹಿಂಸಾ ಪ್ರವೃತ್ತಿ. ಕ್ರಿಶ್ಚಿಯನ್ ಮಿಶನರಿ ಮತ್ತು ಆತನ ಮಕ್ಕಳನ್ನು ಕೊಂದ, ಕ್ರಿಶ್ಚಿಯನ್ನರ ಮೇಲೆ, ಅವರ ಚರ್ಚ್‌ಗಳ ಮೇಲೆ ಆಕ್ರಮಣ ನಡೆಸಿದ, ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ಜನ ಇವರಾದರೆ, ಪಶ್ಚಿಮ ಬಂಗಾಳದಲ್ಲಿ ಮತ್ತೆ-ಮತ್ತೆ ಯುವಜನರನ್ನು ಗಲಭೆ ಎಬ್ಬಿಸಲು ಪ್ರಚೋದಿಸುವವರು ಅವರು. ಪಶ್ಚಿಮ ಬಂಗಾಳದ ಪೋಲೀಸರು ಕಾನೂನು ಪ್ರಕಾರ ಕ್ರಮ ಕೈಗೊಂಡಾಗ ದಿಲ್ಲಿಗೆ ಧಾವಿಸಿ ತಮ್ಮ ಆಜನ್ಮ ಶತ್ರುವಿನಂತೆ ಕಾಣುತ್ತಿದ್ದ ಅಡ್ವಾಣಿಯವರನ್ನು ಭೇಟಿ ಮಾಡಿ ಪಶ್ಚಿಮ ಬಂಗಾಳದಲ್ಲಿ ಕಾನೂನು-ವ್ಯವಸ್ಥೆಯೇ ಇಲ್ಲ ಎಂದು ಬೊಬ್ಬಿಟ್ಟಿದ್ದಾರೆ. ತನಿಖೆ ಮಾಡಬೇಕೆಂದು ಅರಚಿದ್ದಾರೆ. ಅಡ್ವಾಣಿ ತಲೆಯಾಡಿಸಿದ್ದಾರೆ.

ಆದರೆ ಯಾವುದರ ತನಿಖೆ? ಇತ್ತೀಚೆಗೆ ಹೂಗ್ಲಿ ಜಿಲ್ಲೆಯ ಬಾಲ್ಬಾಯಿ ಯಲ್ಲಿ ಒಂದು ಗ್ರಂಥಾಲಯಕ್ಕೆ ಬೆಂಕಿ ಇಟ್ಟವರು ಯಾರು? ಜನವರಿ 5 ರಂದು ಖಾನಾಕುರ್ ಪಂಚಾಯತು ಸಮಿತಿಯ ಕಚೇರಿ ಲೂಟಿ ಮಾಡಿದವರು ಯಾರು? ಫೆಬ್ರವರಿ 28 ರಂದು ಘೋರಾದಾಹಾ ಎಂಬಲ್ಲಿ ನಾಲ್ಕೈದು ಗಂಟೆಗಳ ಕಾಲ ಮುಗ್ಧ ಹಳ್ಳಿಗರ ಮನೆ ಲೂಟಿ ಮಾಡಿದವರು ಯಾರು? ಎಲ್ಲಾ ಈ ತೃಣಮೂಲ ಕಾಂಗ್ರೆಸ್ಸಿನ ಗೂಂಡಾಗಳೇ ಎನ್ನುತ್ತದೆ ಪಶ್ಚಿಮ ಬಂಗಾಳ ಎಡರಂಗ ಸರ್ಕಾರ. ಈ ಹಳ್ಳಿಯಲ್ಲಿ ಬಹಳಷ್ಟು ಮಂದಿ ಸಿಪಿಐ(ಎಂ) ಬೆಂಬಲಿಗರು. ಕ್ರಿಮಿನಲ್‌ಗಳು 34 ಮನೆಗಳ ಲೂಟಿ ನಡೆಸಿದರು. ಇವುಗಳಲ್ಲಿ 29 ದಲಿತರದ್ದು. ಆರು ಜನ ಮಹಿಳೆಯರೂ ಸೇರಿದಂತೆ 15 ಗ್ರಾಮಸ್ಥರನ್ನು ನಿರ್ದಯವಾಗಿ ಥಳಿಸಿ ಲೂಟಿ ನಡೆಸಿದರು. ಪೋಲೀಸರು ಬಾರದಂತೆ ರಸ್ತೆಗಳಲ್ಲಿ ಮರದ ದಿಮ್ಮಿಗಳನ್ನು ಹಾಕಿಟ್ಟರು. ಪೋಲೀಸರು ಬಂದಾಗ ಅವರ ಮೇಲೆ ಕಲ್ಲೆಸೆದರು. ಅಶ್ರುವಾಯು ಸಿಡಿಸಿ ಪ್ರಯೋಜನವಾಗದಾಗ ಪೋಲೀಸರು ಗೋಳೀಬಾರು ನಡೆಸಿದರು. ಒಬ್ಬ ಯುವಕ ಸತ್ತ. ಈತನ ಶವ ಮಿಡ್ನಾಪುರ್ ಜಿಲ್ಲೆಯ ಘಟಿಲ್ ಪ್ರದೇಶದಲ್ಲಿ ದೊರೆಯಿತು. ಅಂದರೆ ಹೂಗ್ಲಿ ಜಿಲ್ಲೆಯ ಈ ಹಳ್ಳಿಯ ಮೇಲೆ ಧಾಳಿ ಮಾಡಲು ಮಿಡ್ನಾಪುರ, ಬಂಕುರಾಗಳಿಂದ ಜನಗಳನ್ನು ಕಳಿಸಲಾಗಿತ್ತು ಎಂಬುದು ಸ್ಪಷ್ಟ.

ಮಾರ್ಚ್ 20 ರಂದು ದಕ್ಷಿಣ ದಿನಾಜ್‌ಪುರ ಜಿಲ್ಲೆಯ ಗಂಗಾರಾಂ ಪುರದಲ್ಲಿ ತೃಣಮೂಲ ಕ್ರಿಮಿನಲ್‌ಗಳು ರೈತ ಸಂಘದ ಇಬ್ಬರನ್ನು ಗುಂಡಿಟ್ಟು ಕೊಂದರು. ಇತ್ತೀಚೆಗೆ ಇಲ್ಲಿ ನಡೆದ ರೈತ ಸಂಘದ ರಾಜ್ಯ ಸಮ್ಮೇಳನದ ಭಾರೀ ಯಶಸ್ಸಿನಿಂದ ಇವರು ಹತಾಶರಾಗಿದ್ದಾರೆಂಬುದು ಸ್ಪಷ್ಟ.

ರಾಜ್ಯ ಗೃಹಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಈ ಕ್ರಿಮಿನಲ್ ಚಟುವಟಿಕೆಗಳಲ್ಲಿ ತೊಡಗಿದ್ದ ತೃಣಮೂಲ ಕಾಂಗ್ರೆಸ್ ಬೆಂಬಲಿಗರೊಂದಿಗೆ ಕಟ್ಟುನಿಟ್ಟಾಗಿ ವರ್ತಿಸಲಾಗುವುದು ಎಂದು ಎಚ್ಚರಿಸಿದಾಗ ಭಯಭೀತರಾದ ಮಮತಾ ದಿಲ್ಲಿಗೆ ಧಾವಿಸಿ ಬೊಬ್ಬೆಯಿಟ್ಟರು. ಮಾಧ್ಯಮದ ಗಮನ ಸೆಳೆಯಲು ಪ್ರಯತ್ನಿಸಿದರು.

ಆಕೆಯ ಆಗ್ರಹಕ್ಕೆ ಒಳಗಾಗಿರುವ ಇದೇ ಕೇಂದ್ರ ಗೃಹಮಂತ್ರಿ ಈ ಹಿಂದೆ ರಾಜ್ಯದ ಕಾನೂನು ವ್ಯವಸ್ಥೆಯಲ್ಲಿ ಮೂಗು ತೂರಿಸಲು ಒಂದು ತಂಡವನ್ನು ಕಳಿಸಿ ಕೈಸುಟ್ಟುಕೊಂಡದ್ದು ಇಡೀ ದೇಶಕ್ಕೇ ತಿಳಿದ ವಿಷಯ. ಈಗ ಮತ್ತೆ ಅದೇ ದುಸ್ಸಾಹಸಕ್ಕೆ ಇಳಿಯುತ್ತಾರೆಯೇ? ಪಶ್ಚಿಮ ಬಂಗಾಳದ ಜನತೆ ಕಾದು ನೋಡುತ್ತಿದ್ದಾರೆ.

ಭಜರಂಗ ದಳದ ಮುಖ್ಯಸ್ಥನ ಮೇಲೆ ಸಾಧುಗಳಿಂದಲೇ ಭೂಹಗರಣದ ಆರೋಪ

ಇತ್ತೀಚೆಗೆ ಅಯೋಧ್ಯೆಯಿಂದ ಬಂದ ಸುಮಾರು 50 ಸಾಧುಗಳು ಉತ್ತರ ಪ್ರದೇಶದ ರಾಜಧಾನಿ ಲಕ್ನೌನಲ್ಲಿ ವಿಧಾನಸಭೆಯ ಎದುರು ಧರಣಿ ನಡೆಸಿದರು - ಮುಖ್ಯಮಂತ್ರಿ ಕಲ್ಯಾಣ್ ಸಿಂಗರ ವಿರುದ್ಧ. ಅವರ ಅಹವಾಲೆಂದರೆ ಕಲ್ಯಾಣ್ ಸಿಂಗ್ ಸರಕಾರ ಅಯೋಧ್ಯ ಯಲ್ಲಿ ಕಾನೂನು ಬಾಹಿರ ಚಟುವಟಿಕೆ ಗಳಲ್ಲಿ ತೊಡಗಿರುವ ಭಜರಂಗದಳದ ಮುಖ್ಯಸ್ಥ ವಿನಯ್ ಕಟಿಯಾರ್‌ರನ್ನು ರಕ್ಷಿಸುತ್ತಿದೆ ಎಂದು. ಫೆಬ್ರವರಿ 26 ರ ಹಿಂದುಸ್ತಾನ ಟೈಮ್ಸ್ ಈ ಬಗ್ಗೆವರದಿ ಮಾಡಿತ್ತು. 'ಒಂದೊಮ್ಮೆ ಬಿಜೆಪಿ ರಾಜಕೀಯದ ಕೇಂದ್ರವಾಗಿದ್ದ ಅಯೋಧ್ಯೆ ಈಗ ಅಧಿಕಾರಶಾಹಿ 'ಕಾವಿ' ದೇವ ಪುರಷರು ಸ್ವಂತದ ಉಳಿವಿಗಾಗಿ ಒಂದು ಯುದ್ಧದಲ್ಲಿ ತೊಡಗಿರುವ ಸಮರಾಂಗಣ ವಾಗಿ ಬಿಟ್ಟಿದೆ" ಎಂದಿದೆ ಅದು.

ಲಕ್ಷ್ಮಣ್ ಕಿಲಾ ದೇವಾಲಯ ಅಯೋಧ್ಯೆಯ ಅತ್ಯಂತ ಪವಿತ್ರ ದೇವಾಲಯಗಳಲ್ಲಿ ಒಂದೆಂದು ಹೇಳಲಾಗುತ್ತದೆ - 1821 ರಲ್ಲಿ ರೇವಾದ ಮಹಾರಾಜ ರಘುರಾಜ್ ಸಿಂಗ್ ಇದನ್ನು ಕಟ್ಟಿಸಿದ. ಮಾರ್ಚ್ 1997 ರಲ್ಲಿ ಈ ದೇವಸ್ಥಾನದ ಮಹಂತ ಗೌರಿ ಸೀತಾ ರಾಮ್ ಶಂಕರಾಚಾರ್ಯರ ನಿಧನದ ನಂತರ ವಿವಾದ ಆರಂಭವಾಯಿತು ಎನ್ನುತ್ತಾರೆ ಸಾಧುಗಳು. ಏಳು ಸದಸ್ಯರಿರುವ ದೇವಾಲಯ ಟ್ರಸ್ಟ್ ಸಮಿತಿ ಮೈಥಿಲಿ ಶಂಕರಾಚಾರ್ಯ ಎಂಬುವರನ್ನು ಮಹಂತರನ್ನಾಗಿ ನೇಮಿಸಿತು. ಆಗ ಹಿಂದಿನ ಮಹಂತರ ಡ್ರೈವರಾಗಿದ್ದ ಸಂಜಯ್ ಝಾ ಮಹಂತಗಿರಿಯನ್ನು ತನಗೆ ವಹಿಸಿಕೊಡಬೇಕೆಂದನಂತೆ. ಈತ ವಿನಯ್ ಕಟಿಯಾರ್‌ರ ಬಂಟ ಎಂದು ಹೇಳಲಾಗುತ್ತಿದೆ. ಝಾನನ್ನು ದೇವಸ್ಥಾನದ ಟ್ರಸ್ಟಿಗಳು ಹೊರ ಹಾಕಿದಾಗ ವಿನಯ್ ಕಟಿಯಾರ್ ಹೊಸ ಮಹಂತರನ್ನು ಬೆದರಿಸಲಾರಂಭಿಸಿ ದರಂತೆ. ಕಳೆದ ವರ್ಷ ಮಾರ್ಚ್‌ನಲ್ಲಿ ಕಟಿಯಾರ್ ಮತ್ತು ಆತನ ಬಂಟರು ತಮ್ಮ ಮೇಲೆ ನಾಡ ಬಾಂಬ್ ಎಸೆದರು, ಈ ಜನವರಿ ತಿಂಗಳಲ್ಲಿ ಝಾ ಮತ್ತು ಆತನ ಜತೆ ಗಾರರು ದೇವಸ್ಥಾನದೊಳಗೆ ನುಗ್ಗಿ ದೇವಸ್ಥಾನದ ಪೂಜಾರಿ ರಾಮ್ ಸಾಗರ್ ಶರಣ್‌ರನ್ನು ಥಳಿಸಿ ಬೀಗದ ಕೈಗಳನ್ನು ದೋಚಿಕೊಂಡು ಹೋದರು ಎಂದು ಟ್ರಸ್ಟ್ ಸದಸ್ಯರು ಆಪಾದಿಸಿದ್ದಾರೆ.

ರಾಮ್ ಜನ್ಮಭೂಮಿ ನ್ಯಾಸ್‌ನ ರಾಷ್ಟ್ರೀಯ ಉಪಾಧ್ಯಕ್ಷ ಮಹಂತ ನೃತ್ಯ ಗೋಪಾಲ್ ದಾಸ್‌ರವರು ಫೈಜಾಬಾದ್ ರಸ್ತೆಯ ರೋಹಿನಾದಲ್ಲಿರುವ ದೇವಸ್ಥಾನದ ಟ್ರಸ್ಟ್‌ನ ಎರಡು ಎಕರೆ ಭೂಮಿಯನ್ನು ಆಕ್ರಮಿಸಿ ಅಲ್ಲಿ ಪೆಟ್ರೋಲ್ ಬಂಕ್ ಹಾಕುವ ಹುನ್ನಾರವನ್ನು ವಿನಯ್ ಕಟಿಯಾರ್ ನಡೆಸಿದ್ದಾರೆ ಎಂದು ಆಪಾದಿಸಿದ್ದಾರೆ. ದೇವಸ್ಥಾನದ ಹಣದ ದುರುಪಯೋಗದಲ್ಲೂ ಈತ ತೊಡಗಿರುವುದಾಗಿಯೂ ಮಹಂತರು ಆಪಾದಿಸಿದ್ದಾರೆ.

ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ನ್ಯಾಯಾಲಯವನ್ನು ವಂಚಿಸಿದ್ದಾರೆ

ಮುಂಬೈ ಹೈಕೋರ್ಟ್ ಟೀಕೆ

ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಮನೋಹರಜೋಶಿ ನ್ಯಾಯಾಲಯವನ್ನು ವಂಚಿಸಿದ್ದಾರೆ ಎಂದು ಮುಂಬೈ ಹೈಕೋರ್ಟ್‌ನ ವಿಭಾಗ ಪೀಠವೊಂದು ಮಾರ್ಚ್ 11 ರಂದು ತೀರ್ಪಿನಲ್ಲಿ ಹೇಳಿದೆ.

ಪುಣೆಯಲ್ಲಿ ಶಾಲೆಯೊಂದಕ್ಕೆ ಮೀಸಲಿಟ್ಟಿದ್ದ ಜಾಗದಲ್ಲಿ ಒಂದು ಬಹುಮಹಡಿ ಕಟ್ಟಡ ಕಟ್ಟಲು ತನ್ನ ಅಳಿಯನಿಗೆ ಅವಕಾಶ ಮಾಡಿಕೊಡಲು ಅಧಿಕಾರದ ದುರುಪಯೋಗ ಮಾಡಿದರು ಎಂದರು ಈ ಮಾಜಿ ಶಿವಸೇನಾ ಮುಖ್ಯಮಂತ್ರಿಯ ಮೇಲಿನ ಆರೋಪದ ವಿಚಾರಣೆಯ ತೀರ್ಪನ್ನು ತಿಳಿಸುತ್ತಾ ನ್ಯಾಯಾಧೀಶರು ಹೀಗೆ ಹೇಳಿದ್ದಾರೆ. ಜುಲೈ 27, 1996 ರಂದು ತನ್ನ ಬಳಿ ಈ ಕುರಿತ ಕಡತ ಬರುವವರೆಗೆ ತನಗೆ ಈ ವಿಷಯದಲ್ಲಿ ಆಸಕ್ತಿಯೇ ಇರಲಿಲ್ಲ ಎಂದು ಮನೋಹರ್ ಜೋಷಿ ತನ್ನ ಅಫಿಡವಿಟ್‌ನಲ್ಲಿ ತಿಳಿಸಿದ್ದರು. ಆದರೆ ಏಪ್ರಿಲ್ 24 ರಂದೇ ಜೋಷಿಯವರು ಪುಣೆಯ ಮುನಿಸಿಪಲ್ ಕಮಿಷನರ್ ರವರ ವರದಿ ಕೇಳಿದ್ದರು ಎನ್ನುತ್ತಾ ಇದು ನ್ಯಾಯಾಲಯಕ್ಕೆ ಅವರು ಮಾಡಿದ ವಂಚನೆ ಎಂದು ನ್ಯಾಯಾಧೀಶರು ಹೇಳಿದ್ದಾರೆ.

ಈ ವರದಿ ತರಿಸಿಕೊಂಡದ್ದು ಕೇವಲ ಕೂತೂಹಲದಿಂದಲ್ಲ, ಅವರಿಗೆ ಈ ಬಗ್ಗೆ ಬಹಳ ಆಸಕ್ತಿಯಿತ್ತು ಎಂದು ನ್ಯಾಯಾಲಯ ಭಾವಿಸಿತು. ಆದರೆ ಜೋಷಿ ಇದನ್ನು ನ್ಯಾಯಾಲಯದಿಂದ ಮುಚ್ಚಿಟ್ಟರು ಎಂದಿರುವ ನ್ಯಾಯಾಧೀಶರು ಮುಖ್ಯಮಂತ್ರಿಗಳು ಒಬ್ಬ ಸಾಮಾನ್ಯ ಅಧಿಕಾರಿಯಂತೆ ಅಫಿಡವಿಟ್ ಸಲ್ಲಿಸುವುದಿಲ್ಲ ಎಂಬುದು ನ್ಯಾಯಾಲಯದ ನಿರೀಕ್ಷೆ, ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯಲ್ಲಿ ಆಪಾದನೆಗೊಳಗಾದ ಸಾರ್ವಜನಿಕ ಅಧಿಕಾರಿ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ನ್ಯಾಯಾಲಯದ ಮುಂದಿಡಲೆಂದು ನಿರೀಕ್ಷಿಸಲಾಗುತ್ತದೆ, ಅವರು ಸಾಮಾನ್ಯ ಕ್ರಿಮಿನಲ್ ಕೇಸಿನ ಆಪಾದಿತರಂತೆ ವರ್ತಿಸಬಾರದು ಎಂದು ನ್ಯಾಯಾಲಯ ಹೇಳಿತು.

ಮಾಜಿ ಮುಖ್ಯಮಂತ್ರಿಗಳ ಅಳಿಯನ ಈ ಬಹುಮಹಡಿ ಕಟ್ಟಡ ಕಾನೂನುಬಾಹಿರವಾಗಿ ಕಟ್ಟಲ್ಪಟ್ಟದ್ದು ಅದನ್ನು ಕೆಡವಬೇಕು ಎಂದು ಮುಂಬೈ ಹೈಕೋರ್ಟಿನ ಈ ವಿಭಾಗ ಪೀಠ ಆದೇಶ ನೀಡಿದೆ. ಆದರೆ ಜೋಶಿ ಮತ್ತಿತರ ರಾಜ್ಯ ಸರ್ಕಾರಿ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ನಡೆಸಬೇಕೆಂಬ ಫಿರ್ಯಾದಿಯ ಕೇಳಿಕೆ ಯನ್ನು ನ್ಯಾಯಾಲಯ ಮನ್ನಿಸಲಿಲ್ಲ. ಅದರ ಬದಲು ರಾಜ್ಯ ಸರಕಾರ ಮಾಜಿ ಮುಖ್ಯಮಂತ್ರಿ ಜೋಷಿ, ನಗರಾಭಿವೃದ್ಧಿ ಮಂತ್ರಿ ರವೀಂದ್ರ ಮಾನೆ ಹಾಗೂ ಮುನಿಸಿಪಲ್ ಕಮಿಷನರ್ ರಮಾನಾಥ್ ಝಾರ ವಿರುದ್ಧ ರಾಜ್ಯ ಸರಕಾರ ವಿಚಾರಣಾ ಆಯೋಗ ನೇಮಿಸಬಹುದು. ಅವರು ತಪ್ಪಿತಸ್ಥರೆಂದು ಕಂಡುಬಂದರೆ ಕ್ರಿಮಿನಲ್ ಮೊಕದ್ದಮೆ ನಡೆಸಬಹುದು ಎಂದು ಅಭಿಪ್ರಾಯಪಟ್ಟಿದೆ.

ಈ ತೀರ್ಪಿನ ನಂತರ ನಗರಾಭಿವೃದ್ಧಿ ಮಂತ್ರಿ ರಾಣೆ ರಾಜೀನಾಮೆ ನೀಡಿದ್ದಾರೆ. ಜೋಷಿಯವರೂ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಹೇಳಿದ್ದಾರೆ.

ಪೆನ್ಶನ್ ಯೋಜನೆಯನ್ನು ಪೂರ್ವಾನ್ವಯವಾಗದಂತೆ ತಿದ್ದುಪಡಿ ಮಾಡುವ ಸರ್ಕಾರದ ಪ್ರಯತ್ನ - ಸಿಐಟಿಯು ಖಂಡನೆ

ಕಾರ್ಮಿಕ ಮಂತ್ರಾಲಯ ನೌಕರರ ಪೆನ್ಶನ್ ಯೋಜನೆಯ ಕೆಲವು ಅಂಶಗಳನ್ನು ತಿದ್ದುಪಡಿ ಮಾಡಿ ಫೆಬ್ರವರಿ 22 ರಂದು ಒಂದು ಪ್ರಕಟಣೆ ಹೊರಡಿಸಿದೆ. ಇದು ನೌಕರನೊಬ್ಬ ಸತ್ತಾಗ ಆತನ ಅಂಗವಿಕಲ ಮಕ್ಕಳಿಗೆ ಜೀವಮಾನ ಪರ್ಯಂತ, ಅಥವಾ ಹೆಂಡತಿ-ಮಕ್ಕಳಿಲ್ಲದಿದ್ದಲ್ಲಿ ಅವಲಂಬಿತ ತಂದೆ-ತಾಯಿಗೆ ಪೆನ್ಶನ್ ಪಾವತಿ ಮಾಡುವುದನ್ನು ಕುರಿತಾದದ್ದು.

ನೌಕರರ ಭವಿಷ್ಯ ನಿಧಿಯ ಕೇಂದ್ರ ಟ್ರಸ್ಟಿ ಮಂಡಳಿ (CBT) ಮೂರು ವರ್ಷಗಳ ಹಿಂದೆಯೇ ಈ ತಿದ್ದುಪಡಿಗಳನ್ನು ಸರ್ವಾನುಮತದಿಂದ ಸೂಚಿಸಿತ್ತು. ಇದುವರೆಗೆ ಈ ಬಗ್ಗೆ ಸುಮ್ಮನೆ ಕೂತದ್ದು ಈಗ ತಡವಾಗಿ ಪ್ರಕಟಣೆ ಹೊರಡಿಸಿ ಇದು ಪ್ರಕಟಣೆಯ ದಿನದಿಂದಲಷ್ಟೇ ಜಾರಿಗೆ ಬರುತ್ತದೆ ಎಂದು ಹೇಳಿದೆ. ಇದರಿಂದಾಗಿ ಈ ಬದಲಾವಣೆ ನಿಷ್ಪ್ರಯೋಜಕವಾಗಿದೆ ಎಂದು ಸಿಐಟಿಯು ಕೇಂದ್ರ ಕಾರ್ಯದರ್ಶಿ ಮಂಡಳಿ ಟೀಕಿಸಿದೆ.

ಸಿಐಟಿಯುನಿಂದ ಮಂಡಳಿ (CBT) ಯ ಸದಸ್ಯರಾಗಿರುವ ಡಬ್ಲ್ಯು.ಆರ್. ವರದರಾಜನ್ ಈ ಬಗ್ಗೆ ಕಾರ್ಮಿಕ ಮಂತ್ರಿಗಳಿಗೊಂದು ಪತ್ರ ಬರೆದು ಈ ಪರಿಷತ ಸೌಲಭ್ಯವನ್ನು ಪೆನ್ಶನ್ ಯೋಜನೆ ಜಾರಿಯಾಗ 16.11.95 ರಿಂದಲೇ ಅನ್ವಯವಾಗುವಂತಾಗಬೇಕು ಎಂದಿದ್ದಾರೆ. ಈ ಯೋಜನೆಯನ್ನು ಆರಂಭಿಸಿದರಿಂದಲೇ ಎದ್ದು ಬಂದ ಕೆಲವು ಮುಖ್ಯ ಪ್ರಶ್ನೆಗಳನ್ನು ಪರಿಹರಿಸಲೆಂದೇ ಈ ಶಿಫಾರಸುಗಳನ್ನು ಮಾಡಿರುವುದರಿಂದ ಸರಕಾರದ ಈಗಿನ ಪ್ರಕಟಣೆ ಈ ಶಿಫಾರಸುಗಳ ಹಿಂದಿರುವ ಪ್ರಮುಖ ಅಂಶವನ್ನೇ ವಿಫಲಗೊಳಿಸಿದೆ ಎಂದು ಅವರು ಹೇಳುತ್ತಾ ಸರಕಾರ ತನ್ನ ಪ್ರಕಟಣೆಯನ್ನು 15.11.95 ರಿಂದ ಅನ್ವಯವಾಗುವಂತೆ ಮಾರ್ಪಡಿಸಬೇಕು ಎಂದು ಆಗ್ರಹಪಡಿಸಿದ್ದಾರೆ. (ಐಎನ್‌ಎನ್)

ಪೂರ್ವಕ್ಕೆ ಕೆನ್ನಾಲಗೆ ಚಾಚುತ್ತಿರುವ ನಾಟೋ

ಪಶ್ಚಿಮ ಯುರೋಪಿನ ದೇಶಗಳು ಮತ್ತು ಉತ್ತರ ಅಮೇರಿಕಾದ ಎರಡು ದೇಶಗಳು ಸೇರಿರುವ 16 ದೇಶಗಳ ಮಿಲಿಟರಿ ಕೂಟ ನಾಟೋ. ಎರಡನೇ ಮಹಾಯುದ್ದ ನಂತರದ ಸಾಮ್ರಾಜ್ಯಶಾಹಿ ವಿರೋಧಿ, ಸಮಾಜವಾದಿ ಅಲೆಯ ಹಿನ್ನೆಲೆಯಲ್ಲಿ ಹುಟ್ಟಿದ ಸಾಮ್ರಾಜ್ಯಶಾಹಿ ಮಿಲಿಟರಿ ಕೂಟಕ್ಕೆ ಈಗ 50 ವರ್ಷವಾಗಿದೆ. ಮುಖ್ಯವಾಗಿ ಸಮಾಜವಾದಿ ದೇಶಗಳ ಆರ್ಥಿಕ, ಮಿಲಿಟರಿ, ರಾಜಕೀಯಬಲ ಮುರಿಯಲು ಆರಂಭವಾದ ಮಿಲಿಟರಿ ಕೂಟ, ಇದಕ್ಕೆ ಪ್ರತಿಯಾಗಿ ಪೂರ್ವಯುರೋಪಿನ ಸಮಾಜವಾದಿ ದೇಶಗಳು ಮತ್ತು ಆಗಿನ ಸೋವಿಯತ್ ಒಕ್ಕೂಟ ವಾರ್ಸಾ ಒಪ್ಪಂದ ಎಂಬ ಹೆಸರಲ್ಲಿ ಪ್ರತಿ ಮಿಲಿಟರಿ ಕೂಟ ರಚಿಸಿಕೊಳ್ಳಬೇಕಾಗಿ ಬಂದಿತ್ತು. ಸಮಾಜವಾದಿ ದೇಶಗಳು ಆರ್ಥಿಕ, ರಾಜಕೀಯ, ಮಿಲಿಟರಿ ಬಲದಿಂದಾಗಿ ಅದರ ಮೇಲೆ ನೇರ ಮಿಲಿಟರಿ ಆಕ್ರಮಣ ಮಾಡದಿದ್ದರೂ ಶಸ್ತ್ರ ಪೈಪೋಟಿ ಸೇರಿದಂತೆ ಶೀತಲ ಸಮರವನ್ನು ಸಾರಿತ್ತು ನಾಟೋ. ಯಾವಾಗಲೂ ಸಮಾಜವಾದಿ ಜಗತ್ತಿನ ಮಿಲಿಟರಿ ಬಲ ಎದುರಿಸಲು ಹಾಗೂ ಕಮ್ಯೂನಿಸಂನ 'ಕೆಡುಕಿನ ಸಾಮ್ರಾಜ್ಯ' ವಿಸ್ತಾರ ತಡೆಗಟ್ಟಲು ನಾಟೋ ಇದೆ ಎಂದು ಹೇಳುತ್ತಿದ್ದರೂ ಸೋವಿಯತ್ ಒಕ್ಕೂಟದ, ಪೂರ್ವ ಯುರೋಪಿನ ಸಮಾಜವಾದಿ ವ್ಯವಸ್ಥೆಯ ಪತನ ಮತ್ತು ವಾರ್ಸಾ ಒಪ್ಪಂದದ ವಿಭಜನೆ ನಂತರವೂ ನಾಟೋ ಮುಂದುವರೆದಿದೆ, ಮಾತ್ರವಲ್ಲ ಪೂರ್ವದತ್ತ ವಿಸ್ತಾರಗೊಳ್ಳುತ್ತಿದೆ.

ಸಮಾಜವಾದಿ ವ್ಯವಸ್ಥೆಯ ಕೆಲವು ಅಂಶಗಳ ಬಗ್ಗೆ ಜನರ ಅತೃಪ್ತಿ ಬಳಸಿ ಅಧಿಕಾರಕ್ಕೆ ಬಂದ ಬಂಡವಾಳಶಾಹಿ ಶಕ್ತಿಗಳು ಒಂದಲ್ಲ ಒಂದು ದಿನ ಜನರ ಆಕ್ರೋಶ ಎದುರಿಸಬೇಕಾಗಿ ಬರುತ್ತದೆ. ಅದಕ್ಕೆ ದೇಶದ ಮಿಲಿಟರಿ ಸಾಕಾಗಲಿಕ್ಕಿಲ್ಲ ಎಂದು ಬೇಗನೆ ಅರಿತ ಈ ಬಂಡವಾಳಶಾಹಿ ನಾಯಕರು ನಾಟೋ ಸದಸ್ಯರಾಗಲು ಅಧಿಕಾರ ಗುಜರಾಯಿಸಿದ್ದರು. ಈಗ ನಾಟೋದ 16 ದೇಶಗಳ ಮಿಲಿಟರಿ ಮಂಡಳಿ ಈ ದೇಶಗಳಲ್ಲಿ ಮೂರು ದೇಶಗಳ ಅರ್ಜಿಯನ್ನು ಮನ್ನಿಸಿ ಆ ದೇಶಗಳನ್ನು ಮಿಲಿಟರಿ ಕೂಟಕ್ಕೆ ಸೇರಿಸಿಕೊಂಡಿದೆ. ಆ ದೇಶಗಳೆಂದರೆ ಪೋಲೆಂಡ್, ಹಂಗೇರಿ, ಚೆಕ್. ಈ ವಿಸ್ತಾರದ ನಂತರ ನಾಟೋದ ದೈತ್ಯ ಮಿಲಿಟರಿ ಬಲವನ್ನು ಮಾಜಿ ಸೋವಿಯತ್ ಒಕ್ಕೂಟದ ಗಣರಾಜ್ಯಗಳಾದ ಉಕ್ರೇನ್, ಬೆಲರಸ್, ಲಿಥುವಾನಿಯಗಳು ತಮ್ಮ ಗಡಿಯಲ್ಲೇ ಎದುರಿಸಲಿವೆ. ಇದಲ್ಲದೆ ನಾಟೋದ ಸದಸ್ಯತ್ವಕ್ಕೆ ಅರ್ಜಿ ಗುಜರಾಯಿಸಿರುವ ರೋಮೇನಿಯಾ, ಸ್ಲೋವಾಕಿಯಗಳು ನಾಟೋದ ಗಡಿಯಲ್ಲಿರುತ್ತವೆ. ಈ ಮೂರು ದೇಶಗಳಲ್ಲೂ ದೊಡ್ಡ ಸಂಖ್ಯೆಯ ಜನ ತಮ್ಮ ದೇಶ ನಾಟೋಕ್ಕೆ ಸದಸ್ಯರಾಗುವುದನ್ನು ವಿರೋಧಿಸುತ್ತಾರೆ. ಈ ದೇಶದ ಬಂಡವಾಳಶಾಹಿ ಪ್ರಭುತ್ವಕ್ಕೆ ಜನರ ಆಕ್ರೋಶಕ್ಕೆ ಹೆದರಿ, ತಮ್ಮ ರಕ್ಷಣೆಗೆ ಈ ಸಾಮ್ರಾಜ್ಯಶಾಹಿ ಮಿಲಿಟರಿ ಕೂಟದ ಮೊರೆ ಹೋಗಿದ್ದಾರೆ ಎಂಬುದು ಸ್ಪಷ್ಟ. ಇತ್ತೀಚೆಗೆ ರೊಮೇನಿಯಾದ ಗಣಿಕಾರರು ಹಲವು ದಿನಗಳ ಕಾಲ ಅಲ್ಲಿನ ಸೈನ್ಯ ಎದುರಿಸಿ, ರಾಜಧಾನಿಗೆ ಲಗ್ಗೆ ಹಾಕಿದ್ದರು. ಅವರ ಜಾಥ ತಡೆಯಲು ಸೈನ್ಯ ಟ್ಯಾಂಕ್‌ಗಳನ್ನು ಬಳಸಬೇಕಾಯಿತ್ತು.

ಇದು ಜಗತ್ತಿನ ಶಾಂತಿಗೆ ಮಾರಕವಾದ ಬೆಳವಣಿಗೆ ಎಂದು ಬೇರೆ ಹೇಳಬೇಕಾಗಿಲ್ಲ. ಎಲ್ಲಾ ಮಿಲಿಟರಿ ಕೂಟಗಳ ವಿಸರ್ಜನೆ (ಅದರಲ್ಲೂ ವಾರ್ಸಾ ಒಪ್ಪಂದ ಇಲ್ಲದಿರುವ ಸಂದರ್ಭದಲ್ಲಿ) ಶಾಂತಿ ಚಳುವಳಿಯ ಒತ್ತಾಯ.

ರಷ್ಯ ನಾಟೋದ ಈ ವಿಸ್ತಾರವನ್ನು ಖಂಡಿಸಿದ್ದು, ಇದು ಯುರೋಪು ಖಂಡದಲ್ಲಿ ಶಾಂತಿ, ಅಂತರಾಷ್ಟ್ರೀಯ ಸಂಬಂಧ ಸೌಹಾರ್ದತೆಗಳಿಗೆ ಮಾರಕ ಎಂದಿದೆ.

ಈ ವಿಸ್ತಾರದಿಂದ ಶೇಕಡ 15 ರಷ್ಟು ಸೈನ್ಯ, ಶಸ್ತ್ರಾಸ್ತ್ರಗಳ ಬಲವನ್ನು ನಾಟೋ ಹೆಚ್ಚಿಸಿಕೊಂಡಿದೆ. ಇದೇ ರೀತಿ ನಾಟೋದ ವಿಸ್ತಾರ ಮುಂದುವರೆದರೆ ರಶ್ಯ ತಕ್ಕ ಪ್ರತಿಕ್ರಮ ಕೈಗೊಳ್ಳಬೇಕಾದೀತು ಎಂದು ಎಚ್ಚರಿಸಿದೆ. ಎಲ್ಲಾ ದೇಶಗಳ ಭದ್ರತೆ ಅಗತ್ಯಗಳನ್ನು ಚರ್ಚಿಸಿ ಒಂದು ನಿರ್ಧಾರಕ್ಕೆ ಬರಲು ಯುರೋಪಿನಲ್ಲಿ ಭದ್ರತೆ ಮತ್ತು ಸಹಕಾರ ಸಂಘಟನೆಯು ಮುಂದಿನ ಸಭೆಯು ಪ್ರಯತ್ನಿಸಬೇಕು, 21ನೇ ಶತಮಾನದ ಭದ್ರತಾ ಸವಾಲುಗಳನ್ನು ಎದುರಿಸುವ ವ್ಯವಸ್ಥೆ ಒಂದನ್ನು ಸಿದ್ಧಪಡಿಸಬೇಕು, ಅದು ಮಾತ್ರ ಯುರೋಪಿನ ದೇಶಗಳಿಗೆ ಭದ್ರತೆ, ವಿಶ್ವಾಸ ನೀಡಬಲ್ಲವು ಎಂದಿದೆ.



ಬಾಂಗ್ಲಾದೇಶದ ಎಡ ರ್‍ಯಾಲಿಯೊಂದರಲ್ಲಿ ಬಾಂಬ್‌ಸ್ಫೋಟ

ಬಾಂಗ್ಲಾದೇಶದ ಜೆಸ್ಸೂರ್ ಜಿಲ್ಲೆಯಲ್ಲಿ ಉದಿಚಿ ಶಿಲ್ಪಿ ಗೋಷ್ಠಿ ಎಂಬ ಸಾಂಸ್ಕೃತಿಕ ಸಂಘಟನೆ ನಡೆಸಿದ್ದ ಸಾಂಸ್ಕೃತಿಕ ಸಮಾರಂಭವೊಂದರಲ್ಲಿ ಬಾಂಬ್ ಸ್ಫೋಟವಾಗಿ 6 ಜನ ಮಡಿದರು, 70 ಜನ ತೀವ್ರವಾಗಿ ಗಾಯ ಗೊಂಡಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿದ್ದ ಸ್ಟೇಜ್ ಕೆಳಗೆ ಪ್ರಬಲ ಸ್ಫೋಟಕಗಳನ್ನು ಇರಿಸಲಾಗಿತ್ತು. ಮಡಿದವರೆಲ್ಲ ಆಗ ಕಾರ್ಯಕ್ರಮ ನೀಡುತ್ತಿದ್ದ ಸಂಘಟನೆಯ ಕಲಾವಿದರು. ಈ ಕಾರ್ಯಕ್ರಮ ಆ ಸಂಘಟನೆಯ 12 ನೇ ರಾಷ್ಟ್ರೀಯ ಮಂಡಳಿಯ ಸಭೆಯ 3 ದಿನದ ಉತ್ಸವದ ಭಾಗವಾಗಿತ್ತು. ಈ ಸಂಘಟನೆ ಬಾಂಗ್ಲಾದೇಶ ಕಮ್ಯುನಿಸ್ಟ್ ಪಕ್ಷದ ಜತೆ ನಿಕಟ ಸಂಬಂಧ ವಿರಿಸಿ ಕೊಂಡಿದ್ದು, ಧಾರ್ಮಿಕ ಮೂಲಭೂತವಾದದ ವಿರುದ್ಧ ಪ್ರಬಲ ಪ್ರಚಾರ ಪ್ರಕ್ಷೋಭೆ ನಡೆಸಿತ್ತು. ಯಾರೂ ಈ ಬಾಂಬ್ ಸ್ಫೋಟದ ಬಗ್ಗೆ ಹೊಣೆ ಅಂಗೀಕರಿಸಿಲ್ಲವಾದರೂ, ಮೂಲಭೂತ ವಾದಿ ಸಂಘಟನೆಗಳಲ್ಲೊಂದು ಈ ದುಷ್ಕೃತ್ಯದ ಹಿಂದಿದೆಯೆಂದು ಶಂಕಿಸಲಾಗಿದೆ.

ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಎಡಪಂಥೀಯ ಶಕ್ತಿಗಳ ಬೆಳವಣಿಗೆ ಹೊಸಕಿ ಹಾಕಲು ಮಾಡಿರುವ ಪಿತೂರಿಯ ಭಾಗ ಎಂದು ಸಂಘಟನಾ ನಾಯಕರು ಹೇಳಿದ್ದಾರೆ. ಇತ್ತೀಚೆಗೆ ಆರು ಎಡಪಂಥೀಯ ನಾಯಕರ ಕೊಲೆಯಾಗಿದ್ದು, ದೇಶದ ಜನಪ್ರಿಯ ಕವಿ ಶಮ್ಸೂರ್ ರಹಮಾನರ ಮೇಲೆ ಕೊಲೆ ಪ್ರಯತ್ನ ನಡೆದಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಚೀನಾ-ಹತ್ತು ಲಕ್ಷ ಜನರನ್ನು ಬಡತನ ರೇಖೆಯಿಂದ ಮೇಲೆತ್ತಿದ ಬೆಳವಣಿಗೆ

ಶಾಂಸಿ ಪ್ರಾಂತ್ಯದ ಲುಲಿಯಾಂಗ್ ಪರ್ವತ ಪ್ರದೇಶ ಚೀನಾದ ಕ್ರಾಂತಿ ಕಾರಿ ಚಳುವಳಿಯಲ್ಲಿ ಪ್ರಮುಖ ನೆಲೆಯಾಗಿದ್ದದ್ದು, ಇದು ಚೀನಾದ ಹಿಂದುಳಿದ ಪ್ರದೇಶಗಳಲ್ಲೊಂದು. ಈ ಪ್ರದೇಶದ ಭೂಸವೆತದಿಂದಾಗಿ ಬೆಳವಣಿಗೆ ಬಹಳ ಕುಂಠಿತಗೊಂಡಿತ್ತು. ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರ ಮತ್ತು ಸ್ಥಳೀಯ ಸರ್ಕಾರದ ಜಂಟಿ ಪ್ರಯತ್ನದಿಂದ ಹತ್ತು ಲಕ್ಷ ಜನರನ್ನು ಬಡತನದ ರೇಖೆಗಿಂತ ಮೇಲೆತ್ತಲಾಗಿದೆ. ಐದು ವರ್ಷದ ಹಿಂದೆ ಸುಮಾರು 14 ಲಕ್ಷ ಜನ ಬಡತನದ ರೇಖೆಗಿಂತ ಕೆಳಗೆ ಇದ್ದರು. ಸರಾಸರಿ ಆದಾಯ ಶೇಕಡಾ 70 ರಿಂದ 80 ರಷ್ಟು ಹೆಚ್ಚಿದೆ. ಒಟ್ಟು ಉತ್ಪನ್ನ ಪ್ರತಿವರ್ಷ ಶೇಕಡಾ 10 ರಷ್ಟು ಹೆಚ್ಚಿದೆ. ಜನ ಮತ್ತು ಸರ್ಕಾರದ ಜಂಟಿ ಪ್ರಯತ್ನದಿಂದ ಎರಡುವರೆ ಲಕ್ಷ ಹೆಕ್ಟೇರ್ ನಷ್ಟು ಪ್ರದೇಶ ದಲ್ಲಿ ಭೂಸವೆತ ತಡೆಗಟ್ಟಲಾಗಿದೆ. ಸ್ಕೂಲು ಗಳಿಗೆ ಹೋಗುವ ಮಕ್ಕಳ ಪ್ರಮಾಣ ಶೇಕಡಾ 99.3 ಮುಟ್ಟಿದೆ. 15 ಲಕ್ಷ ರೈತರಿ ಗೆ ತಾಂತ್ರಿಕ ತರಬೇತಿ ಕೊಡಲಾಗಿದೆ.

ಚೀನಾದ ಬೆಳವಣಿಗೆ ಕೆಲವು ಪ್ರದೇಶಗಳಲ್ಲಿ ಮಾತ್ರ ಇರುವ ತಾರತಮ್ಯಗಳನ್ನು ಅದು ಹೆಚ್ಚಿಸಿದೆ ಎನ್ನುವ ಅಪಪ್ರಚಾರದ ನಡುವೆ ಈ ಸುದ್ದಿ ಗಮನಾರ್ಹವಾದದ್ದು.

ಏಶ್ಯಾದಲ್ಲಿ ಅಮೆರಿಕ-ಜಪಾನಿ-ತೈವಾನ್-ಕೋರಿಯಾ ಮಿಲಿಟರಿ ಕೂಟಕ್ಕೆ ವಿರೋಧ

ಅಮೇರಿಕದ ನಾಯಕತ್ವದಲ್ಲಿ ಜಪಾನ್, ತೈವಾನ್, ದ.ಕೊರಿಯಾಗಳನ್ನು ಒಳಗೊಂಡಿರುವ ಮಿಲಿಟರಿ ಕೂಟದ ಪ್ರಯತ್ನಕ್ಕೆ ಚೀನಾ ಮತ್ತು ರಶ್ಯಾಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಅಮೆರಿಕ ಮತ್ತು ಜಪಾನ್ ಮಿಲಿಟರಿ ಒಪ್ಪಂದದ ಸ್ವರೂಪ ಇತ್ತೀಚೆಗೆ ಬದಲಾಗಿದ್ದು ಮತ್ತು ನಾಲ್ಕು ದೇಶ ಗಳು ಮಿಲಿಟರಿ ಕೂಟದ ಬಗ್ಗೆ ಮಾತುಕತೆ ನಡೆಸುತ್ತಿರುವುದು ಉತ್ತರ ಪೂರ್ವ ಏಶ್ಯಾದ ಈ ಪ್ರದೇಶದಲ್ಲಿ ಅಭದ್ರತೆ ಹುಟ್ಟಿಸಿದೆ. ಇವೆಲ್ಲವೂ ಚೀನಾ ವಿರೋಧಿ ಕ್ರಮಗಳು ಹಾಗೂ ಪ್ರದೇಶಗಳಲ್ಲಿ ಅಧಿಪತ್ಯ ಸ್ಥಾಪಿ ಸುವತ್ತ ಪ್ರಯತ್ನ ಎಂದು ಭಾವಿಸಲಾಗಿದೆ.

ಜಪಾನಿನ ಮೇಲೆ ಆಕ್ರಮಣವಾದಾಗ ಅಮೆರಿಕ ಅದರ ರಕ್ಷಣೆಗೆ ಬರಬೇಕು ಎಂಬ ಸೀಮಿತ ಉದ್ದೇಶವಿದ್ದ ಒಪ್ಪಂದವನ್ನು ಇತ್ತೀಚೆಗೆ ವ್ಯಾಪಕ ಗೊಳಿಸಲಾಗಿದೆ. ಜಪಾನು ತನ್ನದೇ ಮಿಲಿಟರಿ ಬೆಳೆಸುವ, ಅಮೆರಿಕದ ಹಿತಾಸಕ್ತಿಗಳಿಗೆ ಧಕ್ಕೆ ಬಂದಾಗ ಮೂರನೇ ದೇಶಗಳಲ್ಲಿ ಇಬ್ಬರೂ ಮಿಲಿಟರಿ ಕಳಿಸುವ ವ್ಯವಸ್ಥೆ ಇದೆ ಹೊಸ ಒಪ್ಪಂದದಲ್ಲಿ. ಇದು ಈ ಪ್ರದೇಶದಲ್ಲಿ ಮೂರನೇ ದೇಶಗಳಲ್ಲಿ ಮಿಲಿಟರಿ ಮಧ್ಯ ಪ್ರವೇಶಕ್ಕಾಗಿ ಎಂದು ಭಾವಿಸಲಾಗಿದೆ. ಇತ್ತೀಚೆಗೆ ಜಪಾನು, ದೆ.ಕೊರಿಯಾ, ತೈವಾನ್ ಒಳಗೊಂಡಿರುವ ಪ್ರದೇಶದಲ್ಲಿ ಒಳಗೆ ಬರುವ ಕ್ಷಿಪಣಿ ವಿರುದ್ಧ ರಕ್ಷಣ ವ್ಯವಸ್ಥೆ ರೂಪಿಸಲು ಸಹಕಾರಕ್ಕೆ ಮಾತುಕತೆ ನಡೆದಿದ್ದು, 2006 ರ ಹೊತ್ತಿಗೆ ಈ ರಕ್ಷಣಾ ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು ಎಂಬ ಬಗ್ಗೆ ನಿರ್ಧಾರಕ್ಕೆ ಬಂದಿವೆ. ಈ ಒಪ್ಪಂದದಲ್ಲಿ ತೈವಾನನ್ನು ಸೇರಿಸಿದ್ದ ಬಗ್ಗೆ ಚೀನಾ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದೆ. ಚೀನಾ ತೈವಾನನ್ನು ತನ್ನ ದೇಶದ ಪ್ರತ್ಯೇಕವಾದ ಪ್ರಾಂತ್ಯ ಎಂದು ಪರಿಗಣಿಸುತ್ತದೆ. ತೈವಾನ್ ಚೀನಾದ ಜತೆ ಪುನರೈಕ್ಯಗೊಳ್ಳುವ ಬಗ್ಗೆ ಮಾತುಕತೆ ನಡೆಯುತ್ತಿರುವಾಗ, ಈ ರೀತಿಯ ಒಪ್ಪಂದ ಸರಿಯಲ್ಲ ಎಂದು ಚೀನಾ ಕಟುವಾಗಿ ಟೀಕಿಸಿದೆ. ಇದು ಚೀನಾ-ಅಮೇರಿಕ ಉಭಯ ಸಂಬಂಧಗಳನ್ನು ಹಾಳುಗೆಡವುತ್ತದೆ ಎಂದು ಎಚ್ಚರಿಸಿದೆ.

ನೇಪಾಳ ಚುನಾವಣೆ- ಮೇ- 3 ಕ್ಕೆ

ನೇಪಾಳದಲ್ಲಿ ಮೇ. 3 ಕ್ಕೆ ಮರು ಚುನಾವಣೆ ನಡೆಯಲಿದ್ದು, ಈಗಾಗಲೇ ತೀವ್ರ ರಾಜಕೀಯ ಚಟುವಟಿಕೆ ಆರಂಭವಾಗಿದೆ. ದೇಶದ ಅತಿ ದೊಡ್ಡ ಪಕ್ಷವಾದ ಯುನೈಟೆಡ್-ಮಾರ್ಕ್ಸ್‌ವಾದಿ ಲೆನಿನ್‌ವಾದಿ ಪಕ್ಷ ಒಡೆದಿದ್ದು-ಈ ಎರಡು ಪಕ್ಷಗಳೂ ಪ್ರತ್ಯೇಕವಾಗಿ ಚುನಾವಣೆಗೆ ಸ್ಪರ್ಧಿಸುತ್ತಿವೆ. ಇದು ಎರಡನೇ ದೊಡ್ಡ ಪಕ್ಷವಾಗಿದ್ದ ನೇಪಾಳೀ ಕಾಂಗ್ರೆಸ್‌ನ ಅಯಾಚಿತ ವರವಾಗಿದ್ದು, ಅದು ನಿಚ್ಚಳ ಬಹುಮತ ಪಡೆದು ಅಧಿಕಾರಕ್ಕೆ ಬರುವ ಕನಸು ಕಾಣುತ್ತಿದೆ. ಆದರೆ ಅಧಿಕಾರಕ್ಕೆ ಬರುವ ಈ ನಿಶ್ಚಿತತೆಯೇ ಕಾಂಗ್ರೆಸ್‌ಗೆ ಸಮಸ್ಯೆ ಸೃಷ್ಟಿಸಿದೆ. ನೇಪಾಳೀ ಕಾಂಗ್ರೆಸ್ ಸದ್ಯದಲ್ಲೇ ಟಿಕೆಟ್ ಕೊಡುವ ಕೆಲಸ ಮುಗಿಸಿದ್ದು, ಹಲವಾರು ಬಣಗಳ ಟಿಕೆಟ್‌ಗೆ ಸೆಣಸಾಟ ಜಗಜ್ಜಾಹೀರಾಗಿತ್ತು. ಇತ್ತ ಸಾಮಾನ್ಯವಾಗಿ ಬಣಗಳ ತಿಕ್ಕಾಟ ಮುಳುಗಿ ಹೋದ ನೇಪಾಳಿ ಕಾಂಗ್ರೆಸ್, ಇತ್ತೀಚೆಗೆ ಅಸಾಮಾನ್ಯ ಐಕ್ಯತೆ ಪ್ರದರ್ಶಿಸಿತ್ತು. ಆದರೆ ಟಿಕೆಟ್ ಹಂಚಿಕೆ ಘೋಷಣೆಯಾಗುತ್ತಿದ್ದಂತೆ ಅತ್ಯಂತ ತೀವ್ರವಾದ ಅತೃಪ್ತಿ ವ್ಯಕ್ತವಾಗಿದೆ. ಹೆಚ್ಚು ಕಡಿಮೆ ಪ್ರತಿ ಕಾಂಗ್ರೆಸ್ ಅಧಿಕೃತ ಅಭ್ಯರ್ಥಿಯ ವಿರುದ್ಧ ಇನ್ನೊಬ್ಬ ಬಂಡಾಯ ಅಭ್ಯರ್ಥಿ ಸ್ಪರ್ಧಿಸುತ್ತಿದ್ದಾರೆ. ಈ ಬಂಡಾಯ ಅಭ್ಯರ್ಥಿಗಳಲ್ಲಿ ಪ್ರಧಾನ ಮಂತ್ರಿಯ ಮಗಳೇ ಸೇರಿದಂತೆ ಹಲವಾರು ಹಿರಿಯ ನಾಯಕರ ಬೆಂಬಲಿಗರು ಇದ್ದಾರೆ.

ಕೇಂದ್ರ ಸಮಿತಿ ಹೇಳಿಕೆ

ಪುಟ 5 ರಿಂದ

ಗುಂಪುಗಳ ಚಿತಾವಣೆಗೆ ಒಳಗಾಗಿರುವುದು ಒಂದೇ ವರ್ಷದ ಆಳ್ವಿಕೆಯ ಅಲ್ಪ ಅವಧಿಯಲ್ಲೇ ಬಿಜೆಪಿ ನೇತೃತ್ವದ ಸರಕಾರದೊಳಗೆ ಲಂಚಕೋರತನ ಎಷ್ಟರ ಮಟ್ಟಿಗೆ ನುಸುಳಿದೆಯೆಂಬುದನ್ನು ತೋರಿಸುತ್ತದೆ.

ದೂರದರ್ಶನದ ಮೇಲೆ ಗುತ್ತೇದಾರಿಕೆ

ಹೆಚ್ಚೆಚ್ಚು ಜನಗಳ ನಡುವೆ ಹೆಸರುಗೆಡಿಸಿಕೊಳ್ಳುತ್ತಿರುವ ಬಿಜೆಪಿ ನೇತೃತ್ವದ ಸರಕಾರ ಇಲೆಕ್ಟ್ರಾನಿಕ್ ಮಾಧ್ಯಮದ ಮೇಲೆ ಹೆಚ್ಚೆಚ್ಚು ಗುತ್ತೇದಾರಿಕೆ ಮಾಡುತ್ತಿದೆ. ಪ್ರಸಾರ ಭಾರತಿ ಸರಕಾರದ ಹಿತಾಸಕ್ತಿ ಈಡೇರಿಸಬೇಕೆಂದು ಸುದ್ದಿ ಮತ್ತು ಪ್ರಸಾರ ಮಂತ್ರಿ ಯಾವುದೇ ನಾಚಿಕೆಯಿಲ್ಲದೆ ಸ್ಪಷ್ಟಪಡಿಸಿದ್ದಾರೆ. ವಿರೋಧ ಪಕ್ಷಗಳ ಚಟುವಟಿಕೆಗಳು ವರದಿಯಾಗದಂತೆ ವ್ಯವಸ್ಥಿತವಾಗಿ ಪ್ರಯತ್ನಿಸಲಾಗುತ್ತಿದೆ. ಫೆಬ್ರವರಿ 20 ರ ನವದೆಹಲಿ ಕೋಮುವಾದ-ವಿರೋಧಿ ರಾಷ್ಟ್ರೀಯ ಸಮಾವೇಶದ ಕಲಾಪಗಳ ಪ್ರಸ್ತಾಪ ಕೂಡಾ ಆ ದಿನ ದೂರದರ್ಶನದಲ್ಲಿ ಇರಲಿಲ್ಲ. ಪ್ರಸಾರ ಭಾರತಿ ಕಾರ್ಪೊರೇಷನ್‌ನ ಸ್ವಾಯತ್ತತೆಯನ್ನು ಬುಡಮೇಲು ಮಾಡುವ ಕಾನೂನು ಬಾಹಿರ ಪ್ರಯತ್ನವನ್ನು ಪ್ರತಿರೋಧಿಸಬೇಕು.

ಲಾಹೋರ್ ಭೇಟಿ - ಮುಂದಿಟ್ಟ ಒಂದು ಹೆಜ್ಜೆ

ಪ್ರಧಾನ ಮಂತ್ರಿಗಳ ಲಾಹೋರ್ ಭೇಟಿ ಮೂಲಕ ಪಾಕಿಸ್ತಾನದೊಂದಿಗೆ ಪರಸ್ಪರ ಮಾತುಕತೆಯನ್ನು ಬಲಪಡಿಸುವಲ್ಲಿ ಹಾಗೂ ಜನಗಳ ನಡುವೆ ಸಂಬಂಧಗಳನ್ನು ಆರಂಭಿಸುವಲ್ಲಿ ಒಂದು ಹೆಜ್ಜೆ ಮುಂದಿಟ್ಟಂತಾಗಿದೆ ಎಂದು ಕೇಂದ್ರ ಸಮಿತಿ ಗಮನಿಸಿತು. ಪಾಕಿಸ್ತಾನೀ ಪ್ರಧಾನ ಮಂತ್ರಿಗಳ ಆಹ್ವಾನಕ್ಕೆ ಒಗೊಟ್ಟು ಲಾಹೋರ್‌ಗೆ ನೀಡಿರುವ ಭೇಟಿ ಎರಡೂ ಕಡೆ ಜನಗಳಲ್ಲಿ ನಿರೀಕ್ಷೆಗಳನ್ನು ಉಂಟುಮಾಡಿತ್ತು. ಆದರೆ ಎರಡೂ ದೇಶಗಳ ನಡುವಿನ ಪ್ರಮುಖ ಪ್ರಶ್ನೆಗಳು ಇನ್ನೂ ಪರಿಹಾರ ಕಂಡಿಲ್ಲ. ಕಾಶ್ಮೀರ ಪ್ರಶ್ನೆ ಕೇಂದ್ರ ಪ್ರಶ್ನೆ ಎಂದು ಪಾಕಿಸ್ತಾನ ಒತ್ತಿ-ಒತ್ತಿ ಹೇಳುತ್ತಿದೆ. ಇದಲ್ಲದೆ ಲಾಹೋರ್ ಮಾತುಕತೆಗಳು ಎರಡೂ ದೇಶಗಳಿಗೆ ಹಾನಿಕಾರಕವಾದ ಪರಮಾಣು ಶಸ್ತ್ರೀಕರಣದ ಪ್ರಶ್ನೆಯನ್ನು ಪರಿಶೀಲಿಸಿಲ್ಲ. ಈ ಭೇಟಿಯ ಭಾವನೆಗೆ ವ್ಯತಿರಿಕ್ತವಾಗಿ ದೇಶದೊಳಗೆ ಆರ್.ಎಸ್.ಎಸ್. ಕೂಟ ಅಲ್ಪಸಂಖ್ಯಾತರ ವಿರುದ್ಧ ದ್ವೇಷವನ್ನು ಪ್ರಚೋದಿಸುವಲ್ಲಿ ಮಗ್ನವಾಗಿದೆ.

ಸಿಟಿಬಿಟಿ - ನೀತಿ ಬಾಹಿರ ಚೌಕಾಶಿ ಬೇಡ

ಅಮೇರಿಕಾದ ನಿರಂತರ ಒತ್ತಡದಿಂದಾಗಿ ಸಿಟಿಬಿಟಿಗೆ ಸಹಿಹಾಕಲು ವಾಜಪೇಯಿ ಸರಕಾರ ಮಾತು ಕೊಟ್ಟಿರುವುದಕ್ಕೆ ಕೇಂದ್ರ ಸಮಿತಿ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಜಸ್ವಂತ್ ಸಿಂಗ್-ಸ್ಟ್ರಾಬ್ ಟಾಲ್ಬೋಟ್ ಮಾತುಕತೆಯ ಎಂಟನೇ ಸುತ್ತು ಹಾಗೂ ಸಂಸತ್ತಿನಲ್ಲಿ ಚಳಿಗಾಲದ ಅಧಿವೇಶನದಲ್ಲಿ ಪ್ರಧಾನ ಮಂತ್ರಿಗಳು ನೀಡಿರುವ ಹೇಳಿಕೆ ಸರಕಾರ ಈ ದಾರಿಯ ಬಗ್ಗೆ ನಿರ್ಧರಿಸಿದೆ ಎಂಬುದನ್ನು ತೋರಿಸುತ್ತದೆ. ಮೆಡಲಿನ್ ಅಲ್‌ಬ್ರೈಟ್ ರವರು ಅಮೆರಿಕಾದ ಸೆನೆಟ್ ವಿದೇಶ ಸಂಬಂಧಗಳ ಸಮಿತಿಯ ಮುಂದೆ ಇದನ್ನು ದೃಢಪಡಿಸಿದ್ದಾರೆ. ಭಾರತದ ಸಾರ್ವಭೌಮತೆಯ ಮೇಲೆ ಗಂಭೀರ ದುಷ್ಪರಿಣಾಮ ಬೀರಲಿರುವ ಇಂತಹ ನಿರ್ಣಾಯಕ ಹೆಜ್ಜೆಯನ್ನು ಇಡಬಾರದು ಎಂದು ವಾಜಪೇಯಿ ಸರಕಾರವನ್ನು ಸಿಪಿಐ(ಎಂ) ಎಚ್ಚರಿಸಿದೆ. ಭಾರತ ಮತ್ತು ಪಾಕಿಸ್ತಾನ ಅಮೆರಿಕನ್ ಉಸ್ತುವಾರಿಯ ಒಂದು ವ್ಯವಸ್ಥೆಯಡಿ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವ ಕ್ರಮ ಕುರಿತಂತೆ ನೀತಿಬಾಹಿರ ಚೌಕಾಸಿ ಸಾಧ್ಯವಿಲ್ಲ.

ಬಿಜೆಪಿ ಸರಕಾರದ ಒಂದು ವರ್ಷ

ಬಿಜೆಪಿಯಂತಹ ತಾನೇ ಕಂಠೋಕ್ತವಾಗಿ ಸಾರುವ ಕೋಮುವಾದಿ ಪಕ್ಷ ಅಧಿಕಾರಕ್ಕೆ ಬರುವುದರ ಅಪಾಯದ ಬಗ್ಗೆ ಎದ್ದಿದ್ದ ಸಂದೇಹಗಳೆಲ್ಲಾ ಕಳೆದ ಒಂದು ವರ್ಷದಲ್ಲಿ ನಿಜವಾಗಿವೆ. ವಾಜಪೇಯಿ ಸರಕಾರ ವ್ಯವಸ್ಥಿತವಾಗಿ ಆರ್.ಎಸ್.ಎಸ್. ಅಜೆಂಡಾವನ್ನು ಜಾರಿಗೆ ತರಲು ಪ್ರಯತ್ನಿಸಿದೆ. ಎಲ್ಲರಿಗೂ ಗೊತ್ತಿರುವ ಆರ್.ಎಸ್.ಎಸ್. ವ್ಯಕ್ತಿಗಳನ್ನು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ತೂರಿಸಿದೆ; ಬಿಹಾರದಲ್ಲಿ 356ನೇ ಕಲಮಿನಂತಹ ಸರ್ವಾಧಿಕಾರಿ ಕ್ರಮಗಳನ್ನು ಅದು ಮತ್ತೆ-ಮತ್ತೆ ಬಳಸಿದೆ; ಅಧ್ಯಕ್ಷ ಮಾದರಿ ಸರಕಾರದ ಬಗ್ಗೆ ಮಾತನಾಡುತ್ತಿದೆ.

ಬಿಜೆಪಿ ಸರಕಾರ ದೊಡ್ಡ ಬಂಡವಾಳಿಗರು ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ ಅತ್ಯಂತ ಅನುಕೂಲ ನಿಲುವು ತೋರಿದೆ; ಅದು ಸಾರ್ವಜನಿಕ ವಲಯವನ್ನು ನಾಶ ಮಾಡಹೊರಟಿದೆ, ವ್ಯಾಪಕ ಖಾಸಗೀಕರಣದ ಭರದಲ್ಲಿದೆ. ಆರ್ಥಿಕವನ್ನು ಕುಲಗೆಡಿಸಿದ ಅದು ಅದರ ಹೊರೆಗಳನ್ನು ಪಡಿತರ ಬೆಲೆ ಏರಿಕೆಗಳ ಮೂಲಕವಾಗಲೀ, ಡೀಸೆಲ್, ಸಾಗಾಣಿಕೆ ಬೆಲೆಗಳ ಏರಿಕೆಗಳ ಮೂಲಕವಾಗಲೀ ಜನಸಾಮಾನ್ಯರ ಮೇಲೆ ದಾಟಿಸಲು ಪ್ರಯತ್ನಿಸಿದೆ. ಈ ಒಂದು ವರ್ಷದ ಅವಧಿಯಲ್ಲಿ ಜನ ಬೆಲೆಯೇರಿಕೆಯ ಅತ್ಯಂತ ಕೆಟ್ಟ ಸ್ವರೂಪವನ್ನು ಕಂಡಿದ್ದಾರೆ. ಬೆಲೆಗಳ ಏರುಪೇರು ಹಾಗೂ ಸಾಲದಿಂದ ನರಳುತ್ತಿರುವ ರೈತಾಪಿ ಜನಗಳನ್ನು ಉಳಿಸಲು ಮಧ್ಯ ಪ್ರವೇಶಿಸುವಲ್ಲಿ ಅದು ವಿಫಲವಾಗಿದೆ.

ಈ ಒಂದು ವರ್ಷದಲ್ಲಿ ಬಿಜೆಪಿ-ಸರಕಾರ ಭಾರತದ ಸ್ವತಂತ್ರ ವಿದೇಶಾಂಗ ಧೋರಣೆಯನ್ನು ಬುಡಮೇಲು ಮಾಡಿದೆ. ತನ್ನ ರಾಷ್ಟ್ರಾಂಧ ಪರಮಾಣು ನೀತಿಯಿಂದಾಗಿ ನೆರೆ ದೇಶಗಳೊಂದಿಗೆ ಸಂಬಂಧಗಳನ್ನು ಕೆಡಿಸಿದೆ. ಸಿಟಿಬಿಟಿಗೆ ಸಹಿ ಹಾಕುವುದಾಗಿ ಹೇಳಿ ಈಗ ಅದು ಅಮೆರಿಕಾದೊಂದಿಗೆ ಒಂದು ನೀತಿಬಾಹಿರ ರಾಜಿಗೆ ಪ್ರಯತ್ನಿಸುತ್ತಿದೆ. ಬಿಜೆಪಿ ಸರಕಾರ ಭ್ರಷ್ಟಾಚಾರದಲ್ಲಿ, ದೊಡ್ಡ ಬಂಡವಾಳಿಗರೊಂದಿಗೆ ಅವ್ಯವಹಾರಗಳಲ್ಲಿ ಮುಳುಗಿದೆ.

ಒಂದು ಸ್ಥಿರ ಸರಕಾರದ ಬದಲು ದೇಶ ಕಂಡಿರುವುದು ಪ್ರತಿದಿನ ಬಿಜೆಪಿ ಮತ್ತು ಅದರ ಮಿತ್ರರ ನಡುವೆ ಜಗ್ಗಾಟ ಹಾಗೂ ಸಮಯಸಾಧಕ ರಾಜಿಗಳನ್ನು. ಕೇಂದ್ರದಲ್ಲಿ ಅಧಿಕಾರದಲ್ಲಿ ಬಿಜೆಪಿಯ ಮುಂದುವರಿಕೆ ನಮ್ಮ ಪ್ರಭುತ್ವ ಮತ್ತು ಸಮಾಜದ ಧರ್ಮನಿರಪೇಕ್ಷ ಆಧಾರಕ್ಕೆ ಒಂದು ಬೆದರಿಕೆ. ಭಾರತ ಕ್ರಮೇಣ ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುವ ಹಾಗೂ ಅಂತರ್ರಾಷ್ಟ್ರೀಯವಾಗಿ ತನ್ನ ಸ್ಥಾನಮಾನವನ್ನು ಹೆಚ್ಚೆಚ್ಚು ಪ್ರಮಾಣದಲ್ಲಿ ಕಳಕೊಳ್ಳುವ ಸ್ಥಿತಿ ಉಂಟಾಗುತ್ತಿದೆ.

ಆದ್ದರಿಂದ ಬಿಜೆಪಿ ಸರಕಾರದ ಒಂದು ವರ್ಷ ದೇಶಕ್ಕೆ ಅನರ್ಥಕಾರಿಯಾಗಿರುವ ಒಂದು ವರ್ಷ ಎಂಬುದನ್ನು ಜನಗಳ ನಡುವೆ ಬಯಲು ಮಾಡಲು ಒಂದು ವ್ಯಾಪಕ ಪ್ರಚಾರ ಪ್ರಕ್ಷೋಭೆ ಆರಂಭಿಸಬೇಕು ಎಂದು ಕೇಂದ್ರ ಸಮಿತಿ ಪಕ್ಷದ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ಮಾರ್ಚ್ 20 ರಿಂದ ಎರಡು ವಾರಗಳ ಕಾಲ ಸಾರ್ವಜನಿಕ ಸಭೆಗಳು, ರ್‍ಯಾಲಿಗಳು, ಪ್ರಚಾರ ಕಾರ್ಯಕ್ರಮಗಳ ಮೂಲಕ ಬಿಜೆಪಿ ಸರಕಾರದ ಮತ್ತು ಅದರ ಧೋರಣೆಗಳ ವಿರುದ್ಧ ಜನಗಳನ್ನು ಅಣಿನೆರೆಸಬೇಕು.

ಕೇಂದ್ರ ಕಾರ್ಯದರ್ಶಿ ಮಂಡಳಿ ಆಯ್ಕೆ

ಕೇಂದ್ರ ಸಮಿತಿ ಪಕ್ಷದ ಕೇಂದ್ರದಲ್ಲಿ ಪೊಲಿಟ್‌ಬ್ಯೂರೋಗೆ ನೆರವಾಗಲು ಏಳು ಸದಸ್ಯರುಳ್ಳ ಒಂದು ಕೇಂದ್ರೀಯ ಕಾರ್ಯದರ್ಶಿ ಮಂಡಳಿಯನ್ನು ಆರಿಸಿದೆ. - ಹರ್ಕಿಶನ್ ಸಿಂಗ್ ಸುರ್ಜಿತ್, ಎಸ್.ರಾಮಚಂದ್ರನ್ ಪಿಳ್ಳೆ, ಪ್ರಕಾಶ್ ಕಾರಟ್, ಸುಕೋಮಲ್ ಸೆನ್, ಹನ್ನನ್ ಮೊಲ್ಲಾ, ಹರಿಸಿಂಗ್ ಕಾಂಗ್ ಮತ್ತು ಕೆ.ವರದರಾಜನ್ ಇದರ ಸದಸ್ಯರು. ಕೇಂದ್ರ ಸಮಿತಿ ಉಪ ಸಮಿತಿಗಳನ್ನು ರಚಿಸಿತು ಹಾಗೂ ಪಕ್ಷದ ಕೇಂದ್ರದ ಕೆಲಸದ ವ್ಯವಸ್ಥೆಗಳನ್ನು ಅನುಮೋದಿಸಿತು.

ದಿಲ್ಲಿ - ಬಿಜೆಪಿ ಆಳ್ವಿಕೆಯಲ್ಲಿದು 'ಅಪರಾಧ ರಾಜಧಾನಿ' ಕೂಡಾ

ಕಳೆದ ಬುಧವಾರ, ಮಾರ್ಚ್ 10 ರಂದು 'ಔಟ್ ಲುಕ್' ಪತ್ರಿಕೆಯ ಹಿರಿಯ ವ್ಯಂಗ್ಯಚಿತ್ರಕಾರ ಇರ್ಫಾನ್ ಹುಸೇನ್ ಮನೆಗೆ ಹಿಂದಿರುಗಲಿಲ್ಲ. ಎರಡು ದಿನಗಳ ನಂತರ ಕೈಕಾಲು ಕಟ್ಟಿಟ್ಟಿದ್ದ ಅವರ ಮೃತದೇಹ ಸಿಕ್ಕಿತು. ಇದು ನಡೆದದ್ದು ದೇಶದ ರಾಜಧಾನಿ ದಿಲ್ಲಿಯಲ್ಲಿ. ಅದೇ ದಿನ ಅಂದರೆ ಮಾರ್ಚ್ 10 ರಂದು ಕೇಂದ್ರ ಗೃಹಮಂತ್ರಿ ಅಡ್ವಾಣಿಯವರು ರಾಜ್ಯಸಭೆಯಲ್ಲಿ ಕಳೆದ ಒಂದು ವರ್ಷದಲ್ಲಿ ನಾಲ್ಕು ಮಹಾನಗರಗಳಲ್ಲಿ ಅಪರಾಧಗಳ ಅಂಕಿ-ಅಂಶ ಪ್ರಕಟಿಸಿದ್ದರು. ಆ ಪಟ್ಟಿಯಲ್ಲಿ ಮೊದಲ ಹೆಸರು ದಿಲ್ಲಿಯದ್ದು. ದಿಲ್ಲಿಯ ಕಾನೂನು ವ್ಯವಸ್ಥೆ ಕೇಂದ್ರ ಸರಕಾರದ ಅಂದರೆ ಕಳೆದ ಒಂದು ವರ್ಷ ವಾಜಪೇಯಿ ಸರಕಾರದ ಕೈಯಲ್ಲಿದೆ ಎಂಬುದನ್ನು ಗಮನಿಸಬೇಕು.

ಈ ಪಟ್ಟಿಯಲ್ಲಿ ಎರಡನೇ ಹೆಸರು ಮುಂಬೈಯದ್ದು. ಇಲ್ಲಿ ಬಿಜೆಪಿ ಶಿವಸೇನೆಯೊಂದಿಗೆ ಅಧಿಕಾರ ನಡೆಸುತ್ತಿದೆ. ಮೂರನೇ ಸ್ಥಾನದಲ್ಲಿರುವ ಕಲ್ಕತ್ತಾ ಹಾಗೂ ನಾಲ್ಕನೇ ಸ್ಥಾನದಲ್ಲಿರುವ ಚೆನ್ನೈ ಈ ಎರಡು ಬಿಜೆಪಿ ಆಳ್ವಿಕೆಯ ನಗರಗಳಿಗಿಂತ ಬಹಳ ದೂರದಲ್ಲಿವೆ. ಬಿಜೆಪಿ ಪ್ರಭಾವದಿಂದ ಬಹಳ ದೂರವಿರುವುದೂ ಇದಕ್ಕೆ ಕಾರಣವಾಗಿರಬಹುದೇ? ಆದರೆ ಬಿಜೆಪಿ ಸರಕಾರದ ಕಳೆದ ಒಂದು ವರ್ಷದ 'ಸಾಧನೆ'ಗಳಲ್ಲಿ ಈ ಎರಡೂ ನಗರಗಳಿಗೇ ಕಾನೂನು-ವ್ಯವಸ್ಥೆ ತಂಡ ಕಳಿಸಿ ಮುಖಭಂಗ ಮಾಡಿಸಿಕೊಂಡದ್ದು ಸೇರಿದೆ ಎಂಬುದನ್ನು ನೆನಪಿಸಿಕೊಳ್ಳೋಣ. ಮಮತಾ, ಜಯಲಲಿತಾಗಳೂ ದಿನ ಬೆಳಗಾದರೆ ಕಾನೂನು-ವ್ಯವಸ್ಥೆ ಬಗ್ಗೆ ಒದರಾಡುವುದು ಈ ಎರಡು ನಗರಗಳಿಂದಲೇ ತಾನೆ. ಅಡ್ವಾಣಿಯವರು ಕೊಟ್ಟ ಅಂಕಿ-ಅಂಶಗಳನ್ನು ಗಮನಿಸಿ

	ದಿಲ್ಲಿ	ಮುಂಬೈ	ಕಲ್ಕತ್ತಾ	ಚೆನ್ನೈ
ಕೊಲೆ ಪ್ರಕರಣಗಳು	649	351	80	35
ಮಹಿಳೆಯರೊಂದಿಗೆ ದುರ್ವರ್ತನೆ	438	115	25	5
ಅಪಹರಣ	1333	179	117	15
ಕಳ್ಳತನ	26911	12400	4001	1196

ಅಡ್ವಾಣಿಯವರು ಇನ್ನೊಂದು ಬಿಜೆಪಿ ಆಳ್ವಿಕೆಯ ರಾಜ್ಯ ಉತ್ತರ ಪ್ರದೇಶದ ಅಂಕಿ-ಅಂಶಗಳನ್ನು ಕೊಟ್ಟಿಲ್ಲ. 90 ಕ್ಕೂ ಹೆಚ್ಚು ಮಂತ್ರಿಗಳಲ್ಲಿ 23 ಕ್ರಿಮಿನಲ್ ಕೇಸಿನ ಆಪಾದಿತರನ್ನೇ ಹೊಂದಿರುವ ಈ ರಾಜ್ಯದ ಅಪರಾಧ ಅಂಕಿ-ಅಂಶ ಖಂಡಿತಾ ದಿಲ್ಲಿಗಿಂತ ಬಹಳ ಹಿಂದಿರಲಿಕ್ಕಿಲ್ಲ. ಈಗ ಅಭಯ್ ಸಿಂಗ್ ಇಲ್ಲಿಯ ನಂಬರ್ ಒನ್ ಭೂಗತ ಮಾಫಿಯಾ ದೊರೆಯಂತೆ. ಈತನ ವಾರ್ಷಿಕ ವಹಿವಾಟು (ಕೊಲೆ-ಸುಲಿಗೆ -ಬೆದರಿಕೆಗಳ ವ್ಯವಹಾರದಲ್ಲಿ!) 10 ಕೋಟಿ ರೂ. ಎಂದು ಅಂದಾಜು ಮಾಡಲಾಗಿದೆ. 'ಭಯ'ದಿಂದ ಮುಕ್ತಿ ತನ್ನ ಆಡಳಿತದ ಒಂದು ಪ್ರಮುಖ ಸೂತ್ರ ಎನ್ನುವ ಬಿಜೆಪಿಯ ಠಾಕೂರ್ ಲಾಬ್ಬಿಯೊಂದಿಗೆ 'ಅಭಯ್' ಸಿಂಗ್‌ಗೆ ನೇರ ಸಂಪರ್ಕವಿದೆಯೆಂದು ಹೇಳಲಾಗುತ್ತಿದೆ.

ಉತ್ತರ ಪ್ರದೇಶದ ಅಪರಾಧ ಸನ್ನಿವೇಶ ಹೇಗಿದೆ ಎಂದರೆ ಕೆಲವು ತಿಂಗಳ ಹಿಂದೆ ರಾಜ್ಯದ ಹಿರಿಯ ಪೋಲೀಸ್ ಅಧಿಕಾರಿಗಳೇ ಎಚ್ಚರಿಸಿದ್ದರು. - ಪಾಲಕರೇ ಸ್ವತಃ ಮಕ್ಕಳನ್ನು ಶಾಲೆಗೆ ಕಳಿಸುವಾಗ, ಶಾಲೆಯಿಂದ ಹಿಂದಿರುಗುವಾಗ ಜೊತೆಗಿರಬೇಕು, ಇಲ್ಲವಾದರೆ ಮಕ್ಕಳ ಅಪಹರಣವಾಗಬಹುದು ಎಂದು. ಕೈಗಾರಿಕೋದ್ಯಮಿಗಳೇ, ನೀವು ಪ್ರತಿದಿನ ಒಂದೇ ಮಾರ್ಗದಲ್ಲಿ ಹೋಗಬೇಡಿ, ಬೇರೆ ಬೇರೆ ಮಾರ್ಗಗಳಲ್ಲಿ ಹೋಗಿ ರೌಡಿಗಳಿಂದ ಪಾರಾಗಿ ಎನ್ನಲಾಗಿತ್ತು. ನಾಗರೀಕರು ಶಸ್ತ್ರಾಸ್ತ್ರ ತರಬೇತಿ ಪಡೆಯಬೇಕು ಎಂದೂ ಅವರು ಸಲಹೆ ಮಾಡಿದ್ದರು!

ಶಿವಸೇನಾ ಪ್ರಮುಖರಿಗೆ ಎಂತಾ ಶಿಕ್ಷೆಯಾಗಬೇಕಿತ್ತು ಎಂಬುದು ನಿಮಗೆ ಗೊತ್ತಿದೆಯೇ?

ಶಿವಸೇನೆಯ ಪ್ರಮುಖ ಬಾಳಾ ಸಾಹೇಬ್ ಠಾಕ್ರೆಗೆ ಒಂದು ಪ್ರಜಾಪ್ರಭುತ್ವದಲ್ಲಿನ ಒಬ್ಬ ನಾಗರಿಕನಿಗೆ ವಿಧಿಸಬೇಕಾದ ಅತ್ಯುಗ್ರ ಶಿಕ್ಷೆಯನ್ನು ಅಂದರೆ ಆರು ವರ್ಷಗಳ ವರೆಗೆ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡಬಾರದು ಎಂಬ ಶಿಕ್ಷೆಯನ್ನು ವಿಧಿಸಬೇಕಾಗಿದೆ ಎಂಬುದು ನಿಮಗೆ ಗೊತ್ತಿದೆಯೇ? ಹತ್ತು ವರ್ಷಗಳ ಹಿಂದೆಯೇ ಈ ಶಿಕ್ಷೆಯನ್ನು ವಿಧಿಸಬೇಕಾಗಿದ್ದರೂ ಇನ್ನೂ ಇದನ್ನು ವಿಧಿಸಲಾಗಿಲ್ಲ ಎಂಬುದೂ ನಿಮಗೆ ತಿಳಿದಿರಲಿ.

1987 ರ ಮಹಾರಾಷ್ಟ್ರದ ವಿಧಾನಸಭಾ ಚುನಾವಣೆಗಳಲ್ಲಿ ಶಿವಸೇನೆ ಹಿಂದೂ-ಕೋಮುವಾದವನ್ನು ಅತ್ಯಂತ ನಗ್ನವಾಗಿ ಬಳಸಿಕೊಂಡು ಹಲವು ಸ್ಥಾನಗಳನ್ನು ಗೆದ್ದಿತು. ಸಹಜವಾಗಿಯೇ ಇದರ ವಿರುದ್ಧ ಸೋತ ಅಭ್ಯರ್ಥಿಗಳು ನ್ಯಾಯಾಲಯದ ಬಾಗಿಲು ತಟ್ಟಿದರು. ಇಂತಹ ಒಂದು ಮೊಕದ್ದಮೆಯಲ್ಲಿ 1989 ರಲ್ಲಿ ಮುಂಬೈ ಹೈಕೋರ್ಟ್ ಒಂದು ತೀರ್ಪು ನೀಡಿ ಮುಂಬೈಯ ವಿಲೆಪಾರ್ಲೆಯ ಶಿವಸೇನಾ ಶಾಸಕ ಡಾ. ಪ್ರಭುರವರ ಚುನಾವಣೆಯನ್ನು ರದ್ದು ಮಾಡಿದ್ದಲ್ಲದೆ ಈತ ಹಾಗೂ ಶಿವಸೇನೆಯ ಮುಖಂಡ ಬಾಳಾ ಸಾಹೇಬ್ ಠಾಕ್ರೆ ಜನತಾ ಪ್ರಾತಿನಿಧ್ಯ ಶಾಸನದ 99ನೇ ಕಲಮಿನ ಪ್ರಕಾರ ಭ್ರಷ್ಟ ಆಚರಣೆ ನಡೆಸಿದ್ದಾರೆ, ಇದು ಪುನರಾವರ್ತನೆಗೊಳ್ಳದಂತೆ ಶಿಕ್ಷೆ ವಿಧಿಸಬೇಕು ಎಂದಿತ್ತು.

ಠಾಕ್ರೆ ಸುಪ್ರೀಂ ಕೋರ್ಟ್‌ಗೆ ಅಪೀಲು ಹೋದರು. ಆದರೆ ಸುಪ್ರೀಂ ಕೋರ್ಟ್ ಕೂಡಾ 1995 ರಲ್ಲಿ ಮುಂಬೈ ಹೈಕೋರ್ಟ್ ತೀರ್ಪನ್ನು ಎತ್ತಿ ಹಿಡಿಯಿತು. ಮುಂದಿನ ಕ್ರಮವೆಂದರೆ ಮುಖ್ಯ ಚುನಾವಣಾ ಕಮಿಷನರ್ ಶಿಕ್ಷೆಯನ್ನು ವಿಧಿಸುವುದು. ಈ ಶಿಕ್ಷೆಯೆಂದರೆ ಆರು ವರ್ಷಗಳ ಕಾಲ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಆತನಿಗೆ ನಿರಾಕರಿಸುವುದು. ಆಗಿದ್ದ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್.ಶೇಷನ್ ಡಾ. ಪ್ರಭುರವರ ಶಾಸಕ ಸ್ಥಾನಮಾನವನ್ನು ರದ್ದು ಮಾಡಿದರು. ಆದರೆ ಠಾಕ್ರೆಯವರಿಗೆ ಶಿಕ್ಷೆ ವಿಧಿಸುವ ಪ್ರಕ್ರಿಯೆಯನ್ನು ಆರಂಭಿಸಲೇ ಇಲ್ಲ. ನೈತಿಕತೆ ಇತ್ಯಾದಿಗಳ ಬಗ್ಗೆ ದೊಡ್ಡ-ದೊಡ್ಡ ಮಾತುಗಳನ್ನಾಡುವ ಈತನ ನಿಜ ಸ್ವರೂಪ ಈಗ ಗೊತ್ತಾಗಿರುವಾಗ (ನಿವೃತ್ತಿಯ ನಂತರ ಈತ ಶಿವಸೇನೆಯ ಬೆಂಬಲದಿಂದ ಲೋಕಸಭೆಗೆ ಸ್ಪರ್ಧಿಸಲು ಶತಪ್ರಯತ್ನ ನಡೆಸಿದರು ಎಂಬುದು ನಮ್ಮ ಓದುಗರಿಗೆ ನೆನಪಿರಬಹುದು) ಇದು ಆಶ್ಚರ್ಯವುಂಟುಮಾಡುವುದಿಲ್ಲ.

ಕೊನೆಗೂ ಸಪ್ಟೆಂಬರ್ 1998 ರಲ್ಲಿ ಚುನಾವಣಾ ಆಯೋಗದ ಮೂರು ಆಯುಕ್ತರು ಸರ್ವಾನುಮತದಿಂದ ಠಾಕ್ರೆಯವರಿಗೆ ಈ ಶಿಕ್ಷೆ ವಿಧಿಸಲು ಸೂಚಿಸುವ ಪತ್ರವನ್ನು ರಾಷ್ಟ್ರಪತಿಗಳಿಗೆ ಕಳಿಸಿದರು. ರಾಷ್ಟ್ರಪತಿಗಳು ಅದನ್ನು ಕಾನೂನು ಸಚಿವಾಲಯಕ್ಕೆ ಕಳಿಸಿದರು. ರಾಷ್ಟ್ರಪತಿಗಳಾಗಲೀ, ಕಾನೂನು ಸಚಿವಾಲಯವಾಗಲೀ ಮಾಡಬೇಕಾದ ಕೆಲಸವೆಂದರೆ ಈ ಶಿಕ್ಷೆಯನ್ನು ಪ್ರಕಟಿಸುವುದು. ಅದನ್ನು ವಿಮರ್ಶಿಸುವ ಹಕ್ಕು ಅವರಿಗಿಲ್ಲ. ಆದರೂ ಆರು ತಿಂಗಳಾದರೂ ಬಹುಶಃ ಜಯಲಲಿತಾರವರ ಮೊಕದ್ದಮೆಗಳ ವಿಷಯದಲ್ಲಿ ಮಗ್ನರಾಗಿರುವ ಕೇಂದ್ರಕಾನೂನು ಸಚಿವಾಲಯ ಏನೂ ಕ್ರಮ ಕೈಗೊಳ್ಳದೆ ಸುಮ್ಮನಿದೆ. ತನಗೆ ಈ ಸೂಚನೆ ಇತ್ತೀಚೆಗಷ್ಟೇ ಬಂದಿದೆ ಎಂಬುದು ಅವರ ಸಬೂಬು. ಆದರೆ ಇದು ಕೇವಲ ಸಬೂಬು ಎಂಬುದು ಅಕ್ಟೋಬರ್‌ನಲ್ಲೇ ರಾಷ್ಟ್ರಪತಿ ಕಚೇರಿ ಈ ಸೂಚನೆಯನ್ನು ಕಾನೂನು ಸಚಿವಾಲಯಕ್ಕೆ ಕಳಿಸಿರುವುದಾಗಿ ಪ್ರಕಟಿಸಿತ್ತು ಎಂಬ ಸಂಗತಿಯಿಂದ ಸಾಬೀತಾಗುತ್ತದೆ.

ಏಕೆ ಈ ದಿವ್ಯ ಮೌನ ಎಂದು ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ ಅಲ್ಲವೇ? ಕೇಂದ್ರದ ಆಳುವ ಪಕ್ಷ ಮಹಾರಾಷ್ಟ್ರದಲ್ಲಿ ಮತ್ತು ಕೇಂದ್ರದಲ್ಲಿ ಶಿವಸೇನೆಯ ಬೆಂಬಲವನ್ನು ಅವಲಂಬಿಸಿರುವಾಗ, ಸದ್ಯದಲ್ಲೇ ಮಹಾರಾಷ್ಟ್ರದಲ್ಲಿ ಚುನಾವಣೆಗಳನ್ನು ಎದುರಿಸಬೇಕಾಗಿರುವಾಗ, ಆಗಾಗ ಹೋಗಿ ಕಾಲು ಹಿಡಿಯುವ, ಚುನಾವಣೆ ಗೆಲ್ಲಲು ಇದೇ ಏಕೈಕ ದಾರಿಯೆನಿಸುವ ಸ್ಥಿತಿಯಿರುವಾಗ ಯಾವುದೇ ರಾಜಕೀಯ ಪಕ್ಷದ ಮುಖ್ಯಸ್ಥನಿಗೆ ಅತ್ಯುಗ್ರ ಮುಖಭಂಗವೆನಿಸುವ ಇಂತಹ ಶಿಕ್ಷೆಯನ್ನು ಸಾರುವುದು ಸುಲಭವೇ?

- ಕೃಪೆ: 'ಫ್ರಂಟ್‌ಲೈನ್' ಪಾಕ್ಷಿಕ

'ವಿವೇಕ' ದಿಂದ ಶಾಂತಿ, ಸಾಮರಸ್ಯಕ್ಕಾಗಿ ಸಾಂಸ್ಕೃತಿಕ ಜಾಥಾ

ದೇಶದಲ್ಲಿ ಧರ್ಮನಿರಪೇಕ್ಷ ಆಧಾರಕ್ಕೆ ಧಕ್ಕೆ ಉಂಟಾಗಿರುವ ಆತಂಕದ ಈ ದಿನಗಳಲ್ಲಿ ಶಾಂತಿ, ಸಾಮರಸ್ಯಕ್ಕಾಗಿ ಹಾತೊರೆಯುತ್ತಿರುವ ಬಹುಪಾಲು ಜನಗಳ ಆಶಯಗಳಿಗೆ ದನಿ ನೀಡಲು ಪ್ರಗತಿಪರ ಸಂಘಟನೆಗಳು ಮತ್ತು ವ್ಯಕ್ತಿಗಳು ರಚಿಸಿಕೊಂಡಿರುವ ವಿಚಾರ ವೇದಿಕೆ ಕರ್ನಾಟಕ(ವಿವೇಕ) ಈ ನಿಟ್ಟಿನಲ್ಲಿ ಮುಂದಿನ ತಿಂಗಳು ಎರಡು ವಾರಗಳ ಜಾಥಾ ಕಾರ್ಯಕ್ರಮವನ್ನು ನಡೆಸಲು ನಿರ್ಧರಿಸಿದೆ.

ಈಗಾಗಲೇ ನಡೆದ ಸಮಾವೇಶ ಮತ್ತು ಸಭೆಗಳಲ್ಲಿ ವಿಚಾರ ವಿನಿಮಯಗಳು ನಡೆದು ನಿರ್ದಿಷ್ಟ ಕಾರ್ಯಕ್ರಮಗಳನ್ನು ರೂಪಿಸ ಲಾಗಿದ್ದು ಈ ಕಾರ್ಯಕ್ರಮಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ನಡೆಸುವುದರ ಮೂಲಕ ವ್ಯಾಪಕ ಪ್ರಚಾರ ನಡೆಸುವ ಉದ್ದೇಶದಿಂದ ಎರಡು ಸಪ್ತಾಹಗಳ ಜಾಥಾ-ಎಪ್ರಿಲ್ 18 ರಿಂದ ಮೇ.1 ರವರೆಗೆ ನಡೆಯಲಿದೆ. ಕರ್ನಾಟಕದ ಪ್ರಮುಖ ಸಾಮಾಜಿಕ ಚಳುವಳಿಯ ಹರಿಕಾರ ಬಸವಣ್ಣನವರ ಜಯಂತಿ ಎಪ್ರಿಲ್ 18 ರಂದು ಪ್ರಾರಂಭವಾಗುವ ಜಾಥಾ ಅಂತರರಾಷ್ಟ್ರೀಯ ದುಡಿಯುವ ಜನರ ದಿನವಾದ ಮೇ 1 ರಂದು ಪೂರ್ಣಗೊಳ್ಳುತ್ತದೆ. ಈ ಜಾಥಾ ಗಳಲ್ಲಿ ಬೀದಿ ನಾಟಕಗಳು, ಸಮೂಹ ಗೀತೆಗಳು, ಕಿರು ಹೊತ್ತಿಗೆಗಳ, ಧ್ವನಿ ಸುರಳಿ ಗಳ ಮಾರಾಟ ಮುಂತಾದವುಗಳ ಮೂಲಕ ಶಾಂತಿ ಮತ್ತು ಸಾಮರಸ್ಯದ ಸಂದೇಶಗಳನ್ನು ಸಾರಲಾಗುವುದು ಎಂದು ತಿಳಿಸಲಾಗಿದೆ.

ವಿಚಾರ ಸಂಕಿರಣ: 'ಬಿಕ್ಕಟ್ಟಿನಲ್ಲಿರುವ ಸಂವಿಧಾನ' ಎಂಬ ವಿಷಯದ ಮೇಲೆ ನ್ಯಾಯಾಂಗ ಪರಿಣಿತರು ಭಾಗವಹಿಸುವ ವಿಚಾರ ಸಂಕಿರಣವನ್ನು ಸಂವಿಧಾನ ಶಿಲ್ಪಿ ಡಾ॥ ಅಂಬೇಡ್ಕರ್ ಜಯಂತಿ ಏಪ್ರಿಲ್ 14 1999 ರಂದು ರವೀಂದ್ರ ಕಲಾಕ್ಷೇತ್ರ ದಲ್ಲಿ ನಡೆಸಲಾಗುತ್ತದೆ.

ವರ್ಣಚಿತ್ರ ಕಾರ್ಯಾಗಾರ: ಏಪ್ರಿಲ್ 14, 1999ರಂದು ವರ್ಣಚಿತ್ರ ಕಾರ್ಯಾಗಾರವನ್ನು ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ನಡೆಸಲಾಗುವುದು. 'ಇಂದಿನ ಭಾರತದ ಕುರಿತು ಕಲಾವಿದರ ಅಭಿವ್ಯಕ್ತಿ' ವಿಷಯಾಧಾರಿತ ಚಿತ್ರಗಳನ್ನು ರಚಿಸಲಾಗುತ್ತದೆ.

ಧ್ವನಿಸುರುಳಿ: ಸಾಮರಸ್ಯ ಮತ್ತು ಶಾಂತಿ ಸಂದೇಶಗಳನ್ನು ನೀಡುವ ಕನಕದಾಸ, ಪುರಂದರದಾಸ, ಸರ್ವಜ್ಞ, ಸೂಫಿ ಸಂತರು ಮತ್ತು ಬಸವಣ್ಣನವರ ಪದ್ಯಗಳನ್ನು ಮತ್ತು ವಚನಗಳನ್ನು ಬಳಸಿ ಆಕರ್ಷಕ ಧ್ವನಿಸುರುಳಿಗಳನ್ನು ಹೊರತರಲಾಗುವುದು. ಕನ್ನಡ ನಾಡಿನ ವಿವಿಧ ಕ್ಷೇತ್ರಗಳ ಹಿರಿಯರು ಮತ್ತು ತಜ್ಞರು ತಮ್ಮ ಧ್ವನಿಯಲ್ಲಿ ಶಾಂತಿ ಸಂದೇಶಗಳನ್ನು ಈ ಧ್ವನಿಸುರುಳಿಗಳ ಮೂಲಕ ಸಾರಲಿದ್ದಾರೆ.

ಕಿರುಹೊತ್ತಿಗೆಗಳು: ಕೋಮು ಸಾಮರಸ್ಯದ ಪರಂಪರೆಯನ್ನು ಧರ್ಮಸಹಿಷ್ಣುತೆಯ ಇತಿಹಾಸವನ್ನು ಸಾರುವ ವಿವಿಧ ಆಯಾಮಗಳ ಹತ್ತು ಹನ್ನೆರಡು ಕಿರುಹೊತ್ತಿಗೆಗಳನ್ನು ಹೊರತರಲಾಗುತ್ತದೆ. ಕರ್ನಾಟಕದ ಪ್ರಸಿದ್ಧ ಲೇಖಕರು ಕಿರು ಹೊತ್ತಿಗೆಗಳನ್ನು ಬರೆಯುವ ಜವಾಬ್ದಾರಿ ಹೊತ್ತಿದ್ದಾರೆ.

ಹಾಡುಗಳು ಮತ್ತು ರಂಗ ತರಬೇತಿ ಶಿಬಿರ: ಜಾಥಾಗಳಿಗೆ ಅಗತ್ಯವಿರುವ ಬೀದಿ ನಾಟಕಗಳ ಕೃತಿ ನಿರ್ಮಾಣ, ಹಾಡುಗಳ ರಚನೆ ಮತ್ತು ಗಾಯನ ತರಬೇತಿಯನ್ನು ಏಪ್ರಿಲ್ 3,4,5, 1999 ರಂದು ಹೊಸದುರ್ಗದ ಬಳಿಯ ಸಾಣೆಹಳ್ಳಿ ಮಠದಲ್ಲಿ ನಡೆಲಾಗುತ್ತದೆ. ನುರಿತ ಯುವ ರಂಗಕರ್ಮಿಗಳು ಮತ್ತು ಸಂಗೀತಗಾರರು ಶಿಬಿರದಲ್ಲಿ ಭಾಗವಹಿಸುತ್ತಾರ.

'ಜಗವೊಂದು ಗೆಲ್ಲಲಿಕ್ಕಿದೆ' ಬಿಡುಗಡೆ

ಮಾರ್ಚ್ 15 ರಂದು ನಡೆದ ಒಂದು ಸಮಾರಂಭದಲ್ಲಿ ಹೊಸದಾಗಿ ರಚಿತವಾದ ಪುಸ್ತಕ ಪ್ರಕಾಶನ ಸಂಸ್ಥೆ 'ಲೆಫ್ಟ್‌ವರ್ಡ್'ನಿಂದ ಮೊದಲ ಪುಸ್ತಕ "ಎ ವರ್ಲ್ಡ್ ಟುವಿನ್" (ಜಗವೊಂದು ಗೆಲ್ಲಲಿಕ್ಕಿದೆ) ಬಿಡುಗಡೆಯಾಯಿತು. ಈ ಪುಸ್ತಕ ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪ್ರೊ॥ ಪ್ರಭಾತ್ ಪಟ್ನಾಯಕ್, ಪ್ರೊ॥ ಇರ್ಫಾನ್ ಹಬೀಬ್, ಪ್ರೊ॥ ಐಝಾರು ಅಹ್ಮದ್ ಅವರ ಬರೆದ ಲೇಖನಗಳ ಸಂಕಲನ. ಸಂಪಾದನೆ ಪ್ರಕಾಶ್ ಕಾರಟ್ ಅವರದ್ದು. ಕಾ॥ ಸುರ್ಜೀತ್ ಪುಸ್ತಕವನ್ನು ಬಿಡುಗಡೆ ಮಾಡಿದರು. ಪ್ರೊ॥ ಪ್ರಭಾತ್ ಪಟ್ನಾಯಕ್, ಪ್ರೊ॥ ಐಝಾರು ಅಹ್ಮದ್, ಪ್ರಕಾಶ್ ಕಾರತ್, ಸುರ್ಜಿತ್ ಈ ಸಮಾರಂಭದಲ್ಲಿ ಮಾತನಾಡಿದರು. ಈ ಪುಸ್ತಕವನ್ನು ಕಾ॥ ಇ.ಎಂ.ಎಸ್. ಅವರ ನೆನಪಿಗೆ ಅರ್ಪಿಸಲಾಗಿದೆ. ಮುಂದಿನ ವರ್ಷದ ಹೊತ್ತಿಗೆ ಹಿಂದಿಯಲ್ಲೂ ಪುಸ್ತಕಗಳನ್ನು ತರಲಾಗುವುದು ಎಂದು ಸಮಾರಂಭದಲ್ಲಿ ಪ್ರಕಟಿಸಲಾಯ್ತು.

ಸಾದರ ಸ್ವೀಕಾರ

ತಿರುಗಿ ನರಜನ್ಮ : ಲೇಖಕರು-ಮುದ್ದೂರು ಗೋಪಾಲ ಕೃಷ್ಣನಾಯಕ್,
ಬೆಲೆ ರೂ 70.00,

ಬಸವೇಶ್ವರ ಜ್ಞಾನೇಶ್ವರ:
ಲೇಖಕರು- ಕೃಷ್ಣ ಮೆಣಸೆ, ಬೆಲೆ ರೂ 15.

ಅಜ್ಜಿ ಹೇಳಿದ ಕಥೆಗಳು: ಲೇಖಕರು-ಪಾರ್ವತಮ್ಮ ಎಂ.ಶೆಟ್ಟಿ,
ಬೆಲೆ ರೂ 12

ಹೋರಾಟದ ಹಾದಿಯಲ್ಲಿ ಬಾಗೂರು ನವಿಲೆ ರೈತರು
ಲೆಖಕರು: ಜಿ. ರಾಮಕೃಷ್ಣ. ಬೆಲೆ 5 ರೂ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ, ಬೆಂಗಳೂರು

ಇ.ಎಂ.ಎಸ್. ಭವನ ನಿಧಿ



ಹಿಂದಿನ ಒಟ್ಟು ಮೊತ್ತ	**ರೂ. 9,09,174.00**
ಸಿಪಿಐ(ಎಂ) ಉ.ಕ. ಜಿಲ್ಲಾ ಸಮಿತಿ ಮೂಲಕ	
ಮುರುಡೇಶ್ವರ ಹೆಂಚಿನ ಕಾರ್ಮಿಕರಿಂದ	ರೂ. 2170.00
ಚಿತ್ರಾಪುರ ಹೆಂಚಿನ ಕಾರ್ಮಿಕರಿಂದ	960.00
ಸಿಪಿಐ(ಎಂ) ಶಿರಸಿ ಶಾಖೆ	1100.00
ಶಿರಸಿ ಸಾಮೂಹಿಕ ಸಂಗ್ರಹ	1025.25
ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿ	
ಬಾಗೇಪಲ್ಲಿ ನಗರ ನಿಧಿ ಸಂಗ್ರಹ	5005.00
ಎಸ್.ಎಫ್.ಐ ರಾಜ್ಯ ಸಮಿತಿ ಮೂಲಕ ಸಂಗ್ರಹ	5000.00
ಏಶಿಯನ್ ಟೊಬಾಕೋ ಎಂಪ್ಲಾಯೀಸ್ ಯೂನಿಯನ್	
ಹೊಸೂರು - ಎಸ್.ಎಸ್.ರಾವ್ ಮೂಲಕ	10,000.00
ಘೆರಿವಾಲ್ ಪ್ಲಾಸ್ಟಿಕ್ಸ್ ಪ್ರೈ. ಲಿಮಿಟೆಡ್, ಬೆಂಗಳೂರು	2000.00
ವಿಶ್ವನಾಥ ಪೈ ಜಾಲಹಳ್ಳಿ, ಬೆಂಗಳೂರು	250.00
ಬೈಜು ಎಂಟರ್‌ಪ್ರೈಸಸ್ ಜಾಲಹಳ್ಳಿ -	1000.00
ಎಂ.ಕೆ.ಮಣಿಯಮ್ಮ ಬಿ.ಎಂ.ಎಂಟರ್‌ಪ್ರೈಸಸ್,	
ಜಾಲಹಳ್ಳಿ, ಬೆಂಗಳೂರು	1000-00
ನ್ಯೂ ಫ್ರೊಸ್ಟೀಸ್ ಕೋಲ್ಡ್ ಸ್ಟೋರೇಜ್,	
ಇಂದಿರಾನಗರ, ಬೆಂಗಳೂರು	501.00
ಒಟ್ಟು ಮೊತ್ತ	**9,39,185.25**

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ